# ದೇವರ ವಿಮೋಚಿಸುವ ಹೃದಯ

ಆಶಿಷ್ ರಾಯ್‌ಚೂರ್



**ಉಚಿತವಾದ ಹಂಚಿಕೆಗಾಗಿ ಮಾತ್ರ**
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಸ್ತುತ ಪ್ರತಿ: 2023

**ಸಂಪರ್ಕ ಮಾಹಿತಿ**

All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

ದೂರವಾಣಿ: +91-80-25452617
ಇಮೇಲ್: **bookrequest@apcwo.org**
ವೆಬ್ಸೈಟ್: **apcwo.org**

ಬೇರೆ ರೀತಿಯಲ್ಲಿ ಸೂಚಿಸದ ಹೊರತು, ಎಲ್ಲಾ ಧರ್ಮಗ್ರಂಥದ ಉಲ್ಲೇಖಗಳನ್ನು ಕನ್ನಡ ಸತ್ಯವೇದವು ಜೆ.ವಿ(ಬಿಎಸ್ ಐ), ಆವೃತ್ತಿಯಿಂದ ತೆಗೆದುಕೊಳ್ಳಲಾಗಿದೆ. ಬೈಬಲ್ ಸೊಸೈಟಿ ಆಫ್ ಇಂಡಿಯಾದ ಅನುಮತಿಯಿಂದ ಬಳಸಲಾಗಿದೆ.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ಆಲ್ ಪೀಪಲ್ಸ್ ಸಭೆಯೊಟ್ಟಿಗೆ ಪಾಲುದಾರರಾಗಲೂ **apcwo.org/give** ಅಥವಾ ಈ ಪುಸ್ತಕದ ಹಿಂಭಾಗದ ಪುಟಗಳಲ್ಲಿರುವ ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ ಎಂಬ ಪುಟವನ್ನು ಹೇಗೆ ಸಹಾಯ ಮಾಡಬಹುದೆಂಬುದನ್ನು ನೋಡಿರಿ

**ಉಚಿತ ಸಂಪನ್ಮೂಲಗಳು ಮತ್ತು ಸಂಬಂಧಿತ ವೆಬ್ಸೈಟ್‌ಗಳು**

**ಪ್ರಸಂಗಗಳು:** apcwo.org/sermons | **ಪುಸ್ತಕಗಳು:** apcwo.org/books | **ಚರ್ಚ್ ಆಪ್:** apcwo.org/app
**ಸತ್ಯವೇದ ಕಾಲೇಜು:** apcbiblecollege.org | **ಇ-ಕಲಿಕೆ:** apcbiblecollege.org/elearn
**ಸಲಹಾ ಸೇವೆ:** chrysalislife.org | **ಸಂಗೀತ:** apcmusic.org
**ಸೇವಕರುಗಳ ಅನ್ಯೋನ್ಯತೆ:** pamfi.org | **ಏಪಿಸಿ ಪ್ರಪಂಚ ಸೇವೆಗಳು:** apcworldmissions

(Kannada - The Redemptive Heart of God)

# ದೇವರ
# ವಿಮೋಚಿಸುವ
# ಹೃದಯ

# ಪರಿವಿಡಿ

ಪೀಠಿಕೆ

1. ದೇವರು ಸ್ವಭಾವದಲ್ಲಿ ವಿಮೋಚಕನಾಗಿದ್ದಾನೆ 1

2. ದೇವರ ವಿಮೋಚಕ ಕೆಲಸದ ಸ್ವಭಾವ 16

3. ದೇವರ ವಿಮೋಚನಾ ಪ್ರಕ್ರಿಯೆಯಲ್ಲಿ ಮುಖ್ಯ ಅಂಶಗಳು 33

# ಪೀಠಿಕೆ

ನಮ್ಮ ಜೀವನದಲ್ಲಿ ವಿಷಯಗಳು ತಪ್ಪಾದಾಗ ನಾವು ಏನು ಮಾಡಬೇಕು? ಒಳ್ಳೆಯ ಸಂಗತಿಗಳು ಇದ್ದಕ್ಕಿದ್ದಂತೆ ಕೆಟ್ಟದಾಗಿ ತಿರುಗುತ್ತವೆ ಮತ್ತು ನಾವು ಊಹಿಸಿಕೊಳ್ಳದ್ದಕ್ಕಿಂತಲೂ ಕೆಟ್ಟದಾಗಬಹುದು. ಇದು ಜೀವನದ ಒಂದು ಅಥವಾ ಹೆಚ್ಚಿನ ಕ್ಷೇತ್ರಗಳಲ್ಲಿ ಆಗಬಹುದು. ಅದು ನಮ್ಮ ಹಣಕಾಸು, ಕುಟುಂಬ, ಮಕ್ಕಳು, ವೃತ್ತಿ, ವ್ಯವಹಾರ, ಸೇವೆ ಅಥವಾ ಇತರ ಕ್ಷೇತ್ರದಲ್ಲಿ ಆಗಿರಬಹುದು. ಜೀವನ ಮತ್ತು ತಪ್ಪಾದ ಸಂದರ್ಭಗಳನ್ನು ನಾವು ಹೇಗೆ ನೋಡಬೇಕು? ಅದೇ ರೀತಿಯಾಗಿ, ನಮಗೆ ತಿಳಿದಿರುವ ಜನರ ಜೀವಿತಗಳಲ್ಲಿ ಅಥವಾ ಸಹಾಯಕ್ಕಾಗಿ ನಮ್ಮ ಬಳಿಗೆ ಬರುವವರ ಜೀವಿತದಲ್ಲಿ ವಿಷಯಗಳು ತಪ್ಪಾದಾಗ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ?

ದೇವರ ಹೃದಯವು ಸ್ವಾಭಾವಿಕವಾಗಿ ವಿಮೋಚಕವಾಗಿದೆ. ದೇವರು ಪ್ರಾರಂಭಿಸಿರುವುದನ್ನು ಎಂದಿಗೂ ಬಿಟ್ಟು ಬಿಡುವುದಿಲ್ಲ. ಯಾವುದನ್ನೂ ಲೆಕ್ಕಿಸದೇ ಆತನು ಪ್ರೀತಿಸಿ ಕಟ್ಟಕಡೆಯವರೆಗೆ ರಕ್ಷಿಸುತ್ತಾನೆ. ದೇವರು ಯಾವಾಗಲು ವಿಮೋಚಿಸಲು ಮತ್ತು ವಿಷಯಗಳನ್ನು ತನ್ನ ಬಳಿಗೆ ಹಿಂತಿರುಗಿ ತರಲು ಹುಡುಕುತ್ತಾನೆ. ನಾವು ಆತನಂತಿರಲು ಕರೆಯಲ್ಪಟ್ಟಿದ್ದೇವೆ. ಆದ್ದರಿಂದ ನಮ್ಮ ಜೀವಿತದ ಪರಿಸ್ಥಿತಿಗಳು ಮತ್ತು ನಾವು ಎದುರಿಸುವ ತೊಂದರೆಗಳು ಕೂಡ ವಿಮೋಚನೆಯಿಂದ ಕೂಡಿರಬೇಕು.

ಈ ಅಧ್ಯಯನದಲ್ಲಿ, ದೇವರ ವಿಮೋಚನೆಯ ಹೃದಯವನ್ನು ಸೆರೆಹಿಡಿಯುವುದು ಮತ್ತು ಅರ್ಥಮಾಡಿಕೊಳ್ಳುವುದು ನಮ್ಮ ಗುರಿಯಾಗಿದೆ. ಹಾಗಾದರೆ ಆತನ ವಿಮೋಚನಾ ಕಣ್ಣಿನೊಡನೆ ಜೀವಿತದ ಪರಿಸ್ಥಿತಿಗಳನ್ನು ನೋಡುವುದನ್ನು ಕಲಿಯಬಹುದು ಮಾತ್ರವಲ್ಲದೆ, ನಮ್ಮ ಸ್ವಂತ ಜೀವಿತಗಳಲ್ಲಿ ಹಾಗೂ ನಮ್ಮ ಸುತ್ತಮುತ್ತಲಿನಲ್ಲಿರುವವರ ಸಂಗತಿಗಳಿಗಾಗಿ ಆತನ ವಿಮೋಚನ ಪ್ರಕ್ರಿಯೆಯಲ್ಲಿ ದೇವರೊಂದಿಗೆ ಜೊತೆ ಕೆಲಸದವರಾಗಿರುವುದನ್ನು ಕಲಿಯಬೇಕು.

## ಉನ್ನತ ಆತ್ಮೀಕ ಸತ್ಯ ಮತ್ತು ಪ್ರಾಯೋಗಿಕ ಪ್ರಭಾವ

ಎಲ್ಲಾ ಜನರಿಗೆ ವಿಮೋಚನೆಯು ಒದಗಿಸಲ್ಪಟ್ಟಿದೆ ಮತ್ತು ಶಿಲುಬೆಯ ಮೇಲೆ ಪೂರ್ಣಗೊಂಡ ಕ್ರಿಸ್ತನ ಕಾರ್ಯದ ಮೂಲಕವಾಗಿ ಎಲ್ಲಾ ಸಂಗತಿಗಳು ಒದಗಿಸಲ್ಪಟ್ಟಿವೆ. ವಿಶ್ವಾಸಿಗಳಾಗಿ, ನಾವು ಕ್ರಿಸ್ತನ ರಕ್ತದಿಂದ ವಿಮೋಚಿಸಲ್ಪಟ್ಟಿದ್ದೇವೆ.

ಕ್ರಿಸ್ತನಲ್ಲಿ ನಾವು ವಿಮೋಚನೆಗೊಂಡಿದ್ದೇವೆ ಮತ್ತು ಅಂಧಕಾರದ ಬಲಗಳಿಂದ ಬಿಡುಗಡೆಗೊಂಡಿದ್ದೇವೆ ಮತ್ತು ದೇವರ ಸ್ವಂತ ಪ್ರೀತಿಯ ಮಗನ ರಾಜ್ಯಕ್ಕೆ ನಡೆಸಲ್ಪಟ್ಟಿದ್ದೇವೆ. ಸೈತಾನನಿಗೆ ಇನ್ನೂ ನಮ್ಮ ಮೇಲೆ ಯಾವುದೇ ಹಕ್ಕಿಲ್ಲ. ನಮ್ಮ–ಆತ್ಮ, ಪ್ರಾಣ ಮತ್ತು ಶರೀರವು–ಕ್ರಯಕ್ಕೆ ಕೊಳ್ಳಲ್ಪಟ್ಟಿವೆ ಮತ್ತು ನಾವು ದೇವರಿಗೆ ಸೇರಿದವರು. ನಮ್ಮ ವಿಮೋಚನೆ, ಕ್ರಿಸ್ತನಲ್ಲಿನ ನಮ್ಮ ಸ್ಥಾನದ ಮೂಲಕವಾಗಿ ಸ್ಥಾಪಿಸಲ್ಪಟ್ಟಿದೆ ಮತ್ತು ಪೂರ್ಣಗೊಂಡ ಕೆಲಸವಾಗಿದೆ.

ಹೇಗಾದರೂ, ಭೂಮಿಯ ಮೇಲೆ ನಮ್ಮ ಜೀವಿತವನ್ನು ಜೀವಿಸುವಾಗ ಅನೇಕ ಸಂಗತಿಗಳು ದೇವರ ರಚನೆ, ಗುಣವುಟ್ಟ ಮತ್ತು ಉದ್ದೇಶಕ್ಕೆ ಸಮಾನಾಂತರವಾಗಿರುವುದಿಲ್ಲ. ಭೂಮಿಯ ಮೇಲೆ ನಮ್ಮ ಜೀವಿತಗಳ ಎಲ್ಲಾ ಕ್ಷೇತ್ರಗಳು ಸ್ಪರ್ಶಿಸಲು, ಪರಿವರ್ತಿಸಲು ಮತ್ತು ಪರಿಣಾಮ ಬೀರಲು ಕ್ರಿಸ್ತನಲ್ಲಿ ನಮಗಾಗಿ ಒದಗಿಸಲ್ಪಟ್ಟ ಆತನ ವಿಮೋಚನೆಯನ್ನು ದೇವರು ನೋಡಲು ಬಯಸುತ್ತಾನೆ. ಕ್ರಿಸ್ತನಲ್ಲಿ ನಮಗೆ ಒದಗಿಸಲಾಗಿರುವುದೆಲ್ಲವೂ ದೈನಂದಿನ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ನಿಜವಾಗಬೇಕು.

ಈ ಅಧ್ಯಯನದಲ್ಲಿ ನಾವು ವ್ಯವಹರಿಸುತ್ತಿರುವುದೇನೆಂದರೆ, ಇದು ನಮ್ಮ ಜೀವಿತದಲ್ಲಿ ದೇವರ ವಿಮೋಚನಾ ಕಾರ್ಯವು ಜರುಗುವುದನ್ನು ನಾವು ನೋಡಲು ಅಪೇಕ್ಷಿಸುವ ಕ್ಷೇತ್ರಗಳೊಡನೆ ಮತ್ತು ವಿಷಯಗಳೊಡನೆ ಮಾಡುವುದಾಗಿದೆ. ದೇವರ ಮೂಲ ಯೋಜನೆ ಮತ್ತು ಉದ್ದೇಶಗಳಾದ, ಉದಾಹರಣೆಗೆ ಕುಟುಂಬ, ಹಣಕಾಸು, ಮಕ್ಕಳು ಮುಂತಾದವುಗಳು ದಾರಿತಪ್ಪಿದ ಮತ್ತು ನಮ್ಮ ಜೀವಿತದಲ್ಲಿ ತಪ್ಪಾಗಿ ಹೋದ ಕ್ಷೇತ್ರಗಳನ್ನು ಪುನಃ ದೇವರ ವಿಮೋಚನೆಯ ಕಾರ್ಯವು ಪುನಃ ಸ್ಥಾಪಿಸುವುದು ಮತ್ತು ಚೇತರಿಕೆಗೊಳ್ಳುವುದನ್ನು ನೋಡುವುದು ನಮ್ಮ ಬಯಕೆಯಾಗಿದೆ. ಹಾಗೆಯೇ ನಮ್ಮ ಸುತ್ತಮುತ್ತಲಿರುವ ಜನರ ಜೀವಿತ ಅವರ ಕ್ಷೇತ್ರಗಳು ಸಹ ವಿಮೋಚನೆ ಹೊಂದುವುದನ್ನು ನೋಡಲು ದೇವರ ವಿಮೋಚನೆಯ ಕಾರ್ಯವು ಹೇಗೆ ತರುತ್ತದೆಂಬುದನ್ನು ಪರಿಗಣಿಸಬಹುದು.

ಆತನ ರಾಯಭಾರಿಗಳಾಗಿ, ಮತ್ತು ಜೊತೆ ಕೆಲಸದವರಾಗಿ, ಜನರನ್ನು ಸಂಧಿಸಿ ಎಲ್ಲಾ ಸಂಗತಿಗಳಲ್ಲಿ ಆತನಿಗೆ ಬಗೆಹರಿಸಿಕೊಳ್ಳುವುದನ್ನು ನೋಡುವಾಗ ನಾವು ಸಹ ವಿಮೋಚನೆಗೊಂಡಿದ್ದೇವೆ.

ಆಶೀರ್ವಾದಗಳೊಂದಿಗೆ!

ಆಶಿಷ್ ರಾಯಚೂರ್

# 1

# ದೇವರು ಸ್ವಭಾವದಲ್ಲಿ ವಿಮೋಚಕನಾಗಿದ್ದಾನೆ

ಹೊಸ ಒಡಂಬಡಿಕೆಯಲ್ಲಿ , ''ವಿಮೋಚಿಸು'' ಅಥವಾ ''ವಿಮೋಚನೆಯ'' ಅತ್ಯಗತ್ಯ ಅರ್ಥವೆಂದರೆ ''ಗುಲಾಮಗಿರಿಯಿಂದ ಗುಲಾಮನನ್ನು ಖರೀದಿಸುವುದು'' ಅಥವಾ ''ಬಿಡುಗಡೆಯ ಶುಲ್ಕ ಪಾವತಿಸುವುದರಿಂದ ಬಂಧನದಿಂದ ಬಿಡುಗಡೆಗೊಳಿಸುವುದು '' ಆಗಿದೆ.

ಹಳೆಯ ಒಡಂಬಡಿಕೆಯಲ್ಲಿ, ''ವಿಮೋಚಿಸು'' ಅಥವಾ ''ವಿಮೋಚನೆ'' ವಿಚಾರವು ಹಲವಾರು ರೀತಿಗಳಲ್ಲಿ ಉಪಯೋಗಿಸಲಾಗಿದೆ. ಅವು ಹೀಗಿವೆ: ಸಾಲಕ್ಕಾಗಿ ಮಾರಲ್ಪಟ್ಟಂಥ ಸ್ವತ್ತು ಅಥವಾ ವ್ಯಕ್ತಿಗಳನ್ನು ಬಿಡುಗಡೆಗೊಳಿಸುವುದು; ಸೆರೆಯಿಂದ ಅಥವಾ ವಿನಾಶದಿಂದ ಬಿಡುಗಡೆಗೊಳಿಸುವುದು; ಹಾನಿ ಮತ್ತು ಅಪಾಯದಿಂದ ಸಂರಕ್ಷಣೆ; ಅನಪೇಕ್ಷಿತ ಸ್ಥಿತಿಯಿಂದ ಮಧ್ಯಸ್ಥಿಕೆ ಮೂಲಕ (ಬಿಡುಗಡೆ ಶುಲ್ಕ ಪಾವತಿಯಂತಹ) ಅಥವಾ ಕೆಲವು ಪರ್ಯಾಯ ಕ್ರಿಯೆಯ ಮೂಲಕ (ತ್ಯಾಗ ಮಾಡುವಂತಹ) ಬಿಡುಗಡೆಗೊಳಿಸುವುದು.

ಮೂಲ ಯೋಜನೆ ಮತ್ತು ರಚನೆಯಿಂದ ಏನಾದರೂ ವಿಚಲಿತಗೊಂಡು ದಾರಿ ತಪ್ಪಿ ಬಂಧನದೊಳಗೆ ಸೆರೆ ಅಥವಾ ವಿನಾಶಕ್ಕೆ ಹೋಗುವಾಗ, ಅದನ್ನು ಬಿಡುಗಡೆ ಮಾಡಲಾಗುತ್ತದೆ, ಮರು ಪಡೆಯಲಾಗುತ್ತದೆ ಮತ್ತು ಮರು ಸ್ಥಾಪಿಸಲಾಗುತ್ತದೆ. ನಾವು ಇದನ್ನು ವಿಮೋಚನೆ ಎಂದು ಕರೆಯುತ್ತೇವೆ.

ದೇವರ ಹೃದಯವು ಸ್ವಭಾವದಲ್ಲಿ ವಿಮೋಚಕವಾಗಿದೆ. ದೇವರು ಪ್ರಾರಂಭಿಸಿದ್ದನ್ನು ಎಂದಿಗೂ ಬಿಟ್ಟುಕೊಡುವುದಿಲ್ಲ. ಯಾವುದೇ ಬೆಲೆಯನ್ನು ಲೆಕ್ಕಿಸದೆ ಆತನು ಪ್ರೀತಿಸಿ ಸಂಪೂರ್ಣವಾಗಿ ರಕ್ಷಿಸುತ್ತಾನೆ. ದೇವರು ಯಾವಾಗಲೂ ಬಿಡುಗಡೆ ಮಾಡಿ ಎಲ್ಲವನ್ನು ತನ್ನ ಬಳಿಗೆ ತರಲು ಹುಡುಕುತ್ತಾನೆ. ನಾವು ಆತನಂತೆ ಇರಬೇಕೆಂದು ಕರೆಯಲ್ಪಟ್ಟಿದ್ದೇವೆ. ಆದ್ದರಿಂದ ನಾವು ಎದುರಿಸುತ್ತಿರುವ ತೊಂದರೆಗಳು ಮತ್ತು ನಮ್ಮ ಜೀವಿತದ ಪರಿಸ್ಥಿತಿಗಳು ವಿಮೋಚನೆ ಮಾಡಲ್ಪಟ್ಟಿರಬೇಕು.

ದೇವರ ವಿಮೋಚನೆಯ ಹೃದಯ, ಆತನ ವಿಮೋಚನೆಯ ಕಾರ್ಯವನ್ನು ಆತನು ಹೇಗೆ ಮಾಡುತ್ತಾನೆ ಮತ್ತು ತೊಡಗಿಕೊಂಡಿರುವ ಪ್ರಕ್ರಿಯೆಯ ಕುರಿತು ಅರ್ಥಮಾಡಿಕೊಳ್ಳುವುದು ನಮಗೆ ಬಹಳ ಪ್ರಾಮುಖ್ಯವಾಗಿದೆ, ಆದ್ದರಿಂದ ಜನರನ್ನು ನೋಡುವುದರಲ್ಲಿ ಮತ್ತು ಜೀವನ ಪರಿಸ್ಥಿತಿಗಳು ವಿಮೋಚನೆಗೊಂಡ ಮತ್ತು ಆತನಿಗೋಸ್ಕರ ಹಿಂದಕ್ಕೆ ಕರೆತರಲ್ಪಟ್ಟದ್ದರಲ್ಲಿ ನಾವು ದೇವರೊಂದಿಗೆ ಜೊತೆ ಕೆಲಸದವರಾಗಿರುವುದನ್ನು ಕಲಿಯಬಹುದು.

**ಎಫೆಸದವರಿಗೆ 1:9,10**

**9 ತಾನು ಕಾಲವು ಪರಿಪೂರ್ಣವಾದಾಗ ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು ಆತನು ಕ್ರಿಸ್ತನಲ್ಲಿ ಮೊದಲೇ ನಿಷ್ಕರ್ಷೆ ಮಾಡಿಕೊಂಡಿದ್ದನು.**
**10 ಅದೇನೆಂದರೆ ಭೂಪರ ಲೋಕಗಳಲ್ಲಿರುವ ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬದೇ.**

ದೇವರು ಯಾವುದೋ ಯೋಜನೆಯನ್ನು ಮಾಡಿದ್ದಾನೆ ಎಂಬುದಾಗಿ ಈ ವಚನಗಳು ಬೋಧಿಸುತ್ತವೆ. ಈ ಯೋಜನೆಯು ಹೊಸ ಒಡಂಬಡಿಕೆಯಲ್ಲಿ ಪ್ರಕಟವಾಗುವವರೆಗೂ ''ರಹಸ್ಯ'' ಆಗಿದ್ದಿತ್ತು. ನಾವು ಸರಿಯಾದ ಸಮಯಕ್ಕೆ ಬೆಳೆಯುವಂತೆಯೂ ಪರಲೋಕದಲ್ಲಿ ಮತ್ತು ಭೂಮಿಯ ಮೇಲೆ ಎಲ್ಲಾ ವಿಷಯಗಳು ಆತನ ಬಳಿಗೆ ತರಲ್ಪಡುತ್ತವೆ ಎಂಬುದು ಆತನ ಯೋಜನೆಯೂ.

**ಎಫೆಸದವರಿಗೆ 1:10 (ಮೆಸೇಜ್ ಸತ್ಯವೇದ)**

**ದೀರ್ಘಾವಧಿಯ ಯೋಜನೆ, ಇದರಲ್ಲಿ ಎಲ್ಲವನ್ನು ಒಟ್ಟುಗೊಡಿಸಿ ತರಲಾಗಿದೆ ಮತ್ತು ಅಳವಾದ ಸ್ವರ್ಗದಲ್ಲಿರುವ, ಭೂಮಿಯ ಮೇಲಿನ ಎಲ್ಲವೂ ಆತನಲ್ಲಿ ಒಟ್ಟುಗೂಡಿಸಲ್ಪಟ್ಟಿದೆ.**

ಕೊಲೊಸ್ಸೆಯುವರಿಗೆ 1:20 ವಾಕ್ಯವು, ಶಿಲುಬೆಯ ವಿಮೋಚನಾ ಕಾರ್ಯದ ಮೂಲಕವಾಗಿ ದೇವರು ಸಮಸ್ತವನ್ನು ಆತನ ಮೂಲಕ ತನಗೆ ಸಂಧಾನಪಡಿಸಿಕೊಳ್ಳಲು ಮಾರ್ಗ ಮಾಡಿದನು ಎಂದು ಹೇಳುತ್ತದೆ.

**ಕೊಲೊಸ್ಸೆಯವರಿಗೆ 1:20**

**ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನು ಉಂಟುಮಾಡಿ ಭೂಪರಲೋಕಗಳಲ್ಲಿರುವ ಸಮಸ್ತವನ್ನು ಆತನ ಮೂಲಕ ತನಗೆ ಸಂಧಾನ ಪಡಿಸಿಕೊಳ್ಳಬೇಕೆಂತಲೂ ನಿಷ್ಕರ್ಷೆ ಮಾಡಿದನು.**

**ಕೊಲೊಸ್ಸೆಯವರಿಗೆ 1:20 (ಮೆಸೇಜ್ ಬೈಬಲ್)**
**ಶಿಲುಬೆಯಿಂದ ಸುರಿಸಲ್ಪಟ್ಟ ಆತನ ರಕ್ತದಿಂದ, ಆತನ ಮರಣದ ನಿಮಿತ್ತದಿಂದ, ಜಗತ್ತಿನಲ್ಲಿ ಚೂರುಚೂರಾಗಿ ಸ್ಥಳಾಂತರಿಸಲ್ಪಟ್ಟ ಮತ್ತು ಮುರಿಯಲ್ಪಟ್ಟಂತಹ ಎಲ್ಲವೂ—ಜನರು ಮತ್ತು ವಸ್ತುಗಳು, ಪ್ರಾಣಿಗಳು ಮತ್ತು ಪರಮಾಣುಗಳು—ಸರಿಯಾಗಿ ಸೇರಿಸಲ್ಪಡುತ್ತವೆ ಮತ್ತು ಸ್ವಂದಕ ಸಾಮರಸ್ಯಕ್ಕೆ ಒಟ್ಟಾಗಿ ಹೊಂದಿಕೊಳ್ಳುತ್ತವೆ.**

ನಾವು ಇಲ್ಲಿ ಒತ್ತಿ ಹೇಳಲು ಬಯಸುವ ಮುಖ್ಯ ಅಂಶವೆಂದರೆ, ಲೂಸಿಫರ್‌ನ ದಂಗೆ ಮತ್ತು ಮನುಷ್ಯ ಬಿದ್ದು ಹೋಗುವಿಕೆಯಿಂದ, ವಿಷಯಗಳು ಕೈಜಾರಿ ಹೋದಂತೆ ಕಂಡಾಗಲೂ ದೇವರು ಈಗಾಗಲೇ ಯೋಚಿಸಿದ್ದನ್ನು ಮತ್ತು ಎಲ್ಲವನ್ನು ತಾನೇ ಪುನಃ ಪಡೆದುಕೊಳ್ಳುವದನ್ನು ನೋಡುವ ರೀತಿಯಲ್ಲಿ ಕೆಲಸ ಮಾಡಿದನು. ಆತನ ಶಿಲುಬೆಯ ರಕ್ತದ ಮೂಲಕ, ಪಾಪಿಯಾದ ಮನುಷ್ಯನು ಕ್ಷಮಿಸಲ್ಪಟ್ಟನು ಮತ್ತು ದೇವರಿಗೆ ಪುನಃ ಹೊಂದಾಣಿಕೆಯಾಗಿ ಮಾಡಲ್ಪಟ್ಟನು. ಸೈತಾನ ಮತ್ತು ಅವನ ಆತ್ಮಗಳು ಮತ್ತು ಕ್ರಿಸ್ತನ ರಕ್ಷಣೆಯ ಪೂರೈಕೆಯನ್ನು ತಿರಸ್ಕರಿಸಿದ್ದನ್ನು ಶಾಶ್ವತವಾಗಿ ನರಕದಲ್ಲಿ ಬೇರ್ಪಡಿಸಲಾಗುತ್ತದೆ ಮತ್ತು ದೇವರ ಮೂಲ ಯೋಚನೆಯು ಹೊಸ ಪರಲೋಕ ಮತ್ತು ಹೊಸ ಭೂಮಿಯಲ್ಲಿ ಪುನಃ ಸ್ಥಾಪಿಸುವಂತದ್ದಾಗಿರುತ್ತದೆ.

**ಪ್ರಕಟನೆ 21:1-5**
**1 ತರುವಾಯ ನೂತನಾಕಾಶಮಂಡಲವನ್ನು ನೂತನ ಭೂಮಂಡಲವನ್ನು ಕಂಡೆನು. ಮೊದಲಿದ್ದ ಆಕಾಶಮಂಡವೂ ಮೊದಲಿದ್ದ ಭೂಮಂಡಲವೂ ಇಲ್ಲದೆ ಹೋದವು. ಇನ್ನು ಸಮುದ್ರವೂ ಇಲ್ಲ.**
**2 ಇದಲ್ಲದೆ ಪರಿಶುದ್ಧ ಪಟ್ಟಣವಾದ ಹೊಸ ಯೆರೂಸಲೇಮು ಗಂಡನಿಗೋಸ್ಕರ ಅಲಂಕೃತಳಾದ ಮದಲಗಿತ್ತಿಯಂತೆ ಶೃಂಗರಿಸಲ್ಪಟ್ಟಿತ್ತು.**
**3 ಇದಲ್ಲದೆ ಸಿಂಹಾಸನದೊಳಗಿಂದ ಬಂದ ಮಹಾಶಬ್ದವು ನನಗೆ ಕೇಳಿಸಿತು. ಅದು ಇಗೋ ದೇವರ ನಿವಾಸವು ಮನುಷ್ಯರಲ್ಲಿ ಅದೆ. ಆತನು ಅವರೊಡನೆ ವಾಸಮಾಡುವನು, ಅವರು ಆತನಿಗೆ ಪ್ರಜೆಗಳಾಗಿರುವರು. ದೇವರು ತಾನೇ ಅವರ ಸಂಗಡ ಇರುವನು.**
**4 ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುವನು. ಇನ್ನೂ ಮರಣವಿರುವುದಿಲ್ಲ. ಇನ್ನು ದುಃಖವಾಗಲಿ ಗೋಳಾಟವಾಗಲಿ, ಕಷ್ಟವಾಗಲಿ ಇರುವುದಿಲ್ಲ. ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು ಎಂದು ಹೇಳಿತು.**
**5 ಆಗ ಸಿಂಹಾಸನದ ಮೇಲೆ ಕೂತಿದ್ದವನು 'ಇಗೋ ಎಲ್ಲವನ್ನು ಹೊಸದು ಮಾಡುತ್ತೇನೆ' ಅಂದನು ಮತ್ತು ಒಬ್ಬನು ನನಗೆ—'ಇದನ್ನು ಬರೆ, ಈ ಮಾತುಗಳು ಪರಲೋಕದಿಂದ ದೇವರ ಬಳಿಯಿಂದ ಇಳಿದು ಬರುವದನ್ನು ಕಂಡೆನು. ಅದು ತನ್ನ ನಂಬತಕ್ಕವುಗಳೂ ಸತ್ಯವಾದವುಗಳೂ ಆಗಿವೆ ಎಂದು ಹೇಳಿದನು.**

ದೇವರು ವಿಮೋಚಕನಾಗಿದ್ದಾನೆ. ದೇವರ ಹೃದಯವು ಸ್ವಭಾವದಲ್ಲಿ ವಿಮೋಚಕವಾಗಿದೆ. ಆತನು ವಿಷಯಗಳನ್ನು ಪುನಃ ಸ್ಥಾಪಿಸಲು ಮತ್ತು ಚೇತರಿಸಿಕೊಳ್ಳುವುದನ್ನು ನೋಡಲು ಅಪೇಕ್ಷಿಸುತ್ತಾನೆ ಮತ್ತು ಇದಕ್ಕಾಗಿ ಆತನು ಈಗಾಗಲೇ ಯೋಜಿಸಿದ್ದಾನೆ.

ದೇವರ ವಿಮೋಚನೆಯ ಹೃದಯವನ್ನು ಪ್ರಕಟಿಸುವಂತಹ ಅನೇಕ ವಿಮೋಚನಾ ಚಿತ್ರಗಳು ಧರ್ಮಶಾಸ್ತ್ರದಲ್ಲಿರುವುದನ್ನು ನೋಡುತ್ತೇವೆ. ಇವುಗಳಲ್ಲಿ ಕೆಲವನ್ನು ತ್ವರಿತವಾಗಿ ಅವಲೋಕಿಸೋಣ ಮತ್ತು ಕೆಲವು ಪ್ರಮುಖ ಒಳನೋಟಗಳನ್ನು ಆರಿಸಿಕೊಳ್ಳೋಣ.ದೇವರ ವಿಮೋಚನೆ ಹೃದಯದ ಮಿನುಗು ನೋಟವನ್ನು ಪಡೆಯುವುದು ಮತ್ತು ಇದು ನಮ್ಮಲ್ಲಿಯೂ ರೂಪಗೊಂಡಿರುವುದನ್ನು ಹೊಂದಲು ಹುಡುಕುವುದು ನಮ್ಮ ಉದ್ದೇಶವಾಗಿದೆ.

## ಇಸ್ರಾಯೇಲ ಜನರೊಂದಿಗೆ ದೇವರ ವ್ಯವಹಾರಗಳು

ಆತನನ್ನು ಜನರು, ಅವರು ಬಿದ್ದ ಅನೇಕ ಸಂಕಟಗಳಿಂದ, ಇವುಗಳಲ್ಲಿ ಕೆಲವು ಅವರ ಸ್ವಂತ ಅವಿಧೇಯತೆಯಿಂದ ಜರುಗಿದ್ದಾಗಲೂ ದೇವರು ಅವರ ವಿಮೋಚಕನಾಗಿದ್ದಾನೆ. ಐಗುಪ್ತದಲ್ಲಿನ ಗುಲಾಮಗಿರಿಯಿಂದ, ಬ್ಯಾಬಿಲೋನಿಯದ ಸೆರೆಯಾಳುವಿನಿಂದ, ಮತ್ತು ಇತರ ವೈರಿಗಳಿಂದ ಆತನು ಅವರ ವಿಮೋಚಕನಾಗಿದ್ದನು.

**ವಿಮೋಚನಕಾಂಡ 6:6**
**ಆದುದರಿಂದ ನೀನು ಇಸ್ರಾಯೇಲ್ಯರಿಗೆ ನನ್ನ ಹೆಸರಿನಲ್ಲಿ ಹೇಳಬೇಕಾದದ್ದೇನೆಂದರೆ ನಾನು ಯೆಹೋವನು ಐಗುಪ್ತ್ಯರು ನಿಮ್ಮಿಂದ ಮಾಡಿಸುವ ಬಿಟ್ಟೀ ಕೆಲಸಗಳನ್ನು ನಾನು ತಪ್ಪಿಸಿ ಅವರಲ್ಲಿ ನಿಮಗಿರುವ ದಾಸತ್ವವನ್ನು ತೊಲಗಿಸಿ ನನ್ನ ಕೈ ಚಾಚಿ ಅವರಿಗೆ ಮಾಹಾಶಿಕ್ಷೆಗಳನ್ನು ವಿಧಿಸಿ ನಿಮ್ಮನ್ನು ರಕ್ಷಿಸುವೆನು.**

**ವಿಮೋಚನಕಾಂಡ 15:13**
**ನೀನು ಬಿಡುಗಡೆ ಮಾಡಿದ ಪ್ರಜೆಯನ್ನು ಪ್ರೀತಿಯಿಂದ ನಡೆಸಿಕೊಂಡು ನಿನ್ನ ಪರಿಶುದ್ಧ ನಿವಾಸ ಸ್ಥಾನದ ತನಕ ನಿನ್ನ ಶಕ್ತಿಯಿಂದ ಬರಮಾಡಿದಿ.**

**ಕೀರ್ತನೆಗಳು 78:35**
**ದೇವರು ನಮ್ಮ ಶರಣನೂ ಪರಾತ್ಪರನು ತಮ್ಮ ವಿಮೋಚಕನೂ ಆಗಿದ್ದಾನೆ ಎಂಬುದನ್ನು ನೆನಪಿಗೆ ತಂದುಕೊಳ್ಳುವರು.**

ಯೆಶಾಯನ ಪುಸ್ತಕವು ಅದರ ಪ್ರಾರ್ಥಮಿಕ ವಿಷಯಾಂಶಗಳಲ್ಲಿ ವಿಮೋಚನೆಯು ಒಂದಾಗಿದೆ. ಮತ್ತು ದೇವರನ್ನು ''ವಿಮೋಚಕ'' ಎಂಬುದಾಗಿ 13 ಸಾರಿ ಉಲ್ಲೇಖಿಸುತ್ತದೆ. ವಿಮೋಚನೆಯು ಐಗುಪ್ತದಲ್ಲಿ ಸೆರೆಯಿಂದ ಬಿಡುಗಡೆಗಾಗಿ (ಯೆಶಾಯ 51:10; ಯೆಶಾಯ 63:9) ಮತ್ತು ಬ್ಯಾಬಿಲೋನಿಯಾದಲ್ಲಿನ (ಯೆಶಾಯ 48:20; ಯೆಶಾಯ 52:3,9; ಯೆಶಾಯ 62:12) ಸೆರೆಯಿಂದ ಬಿಡುಗಡೆಗಾಗಿ ಉಪಯೋಗಿಲ್ಪಟ್ಟಿದೆ.

**ಯೆಶಾಯ 43:1,2**

**1 ಈಗಲಾದರೋ, ಯಾಕೋಬವಂಶವೇ, ಇಸ್ರಾಯೇಲ್ ಸಂತಾನವೇ, ನಿನ್ನನ್ನು ಸೃಷ್ಟಿಸಿ ರೂಪಿಸಿದವನಾದ ಯೆಹೋವನು ಹೀಗೆನ್ನುತ್ತಾನೆ—ಭಯಪಡಬೇಡ, ನಾನು ನಿನ್ನನ್ನು ವಿಮೋಚಿಸಿದೆನಲ್ಲಾ. ನಿನ್ನ ಹೆಸರು ಹಿಡಿದು ಕರೆದೆನಲ್ಲಾ. ನೀನು ನನ್ನವನೇ.**
**2 ನೀನು ಜಲರಾಶಿಯನ್ನು ಹಾದು ಹೋಗುವಾಗ ನಾನು ನಿನ್ನ ಸಂಗಡ ಇರುವೆನು. ನದಿಗಳನ್ನು ದಾಟುವಾಗ ಅವು ನಿನ್ನನ್ನು ಮುಣುಗಿಸುವುದಿಲ್ಲ. ಉರಿಯಲ್ಲಿ ನಡೆಯುವಾಗ ನೀನು ಕಂದದಿರುವಿ, ಜ್ವಾಲೆಯು ನಿನ್ನನ್ನು ದಹಿಸದು.**

ಇಸ್ರಾಯೇಲ್ ಜನರು ದೇವರನ್ನು ತಮ್ಮ ವಿಮೋಚಕನಂತೆ ಸಂಬಂಧಿಸಿಕೊಂಡು ಮತ್ತು ಅರ್ಥಮಾಡಿಕೊಂಡರು. ತಮ್ಮ ತೊಂದರೆಗಳಲ್ಲಿ ಆತನಲ್ಲಿ ಅವರು ಮೊರೆಯಿಟ್ಟರು ಮತ್ತು ಆತನು ಅವರನ್ನು ರಕ್ಷಿಸಿದನು ಮತ್ತು ವಿಮೋಚಿಸಿದನು.

**ಕೀರ್ತನೆಗಳು 107:13,14**

**13 ಅವರು ತಮ್ಮ ಇಕ್ಕಟ್ಟಿನಲ್ಲಿ ಯೆಹೋವನಿಗೆ ಮೊರೆಯಿಡಲು ಆತನು ಅವರನ್ನು ಕಷ್ಟದಿಂದ ತಪ್ಪಿಸಿದನು.**
**14 ಆತನು ಅವರ ಬಂಧನಗಳನ್ನು ತೆಗೆದುಹಾಕಿ ಕತ್ತಲೆಯಿಂದಲೂ ಘೋರಾಂಧಕಾರದಿಂದಲೂ ಅವರನ್ನು ಹೊರತಂದನು.**

**ಕೀರ್ತನೆಗಳು 107:19,20**

**19 ಅವರು ತಮ್ಮ ಇಕ್ಕಟ್ಟಿನಲ್ಲಿ ಯೆಹೋವನಿಗೆ ಮೊರೆಯಿಡಲು, ಆತನು ಅವರನ್ನು ಕಷ್ಟದಿಂದ ತಪ್ಪಿಸಿದನು.**
**20 ಆತನು ದೂತನನ್ನೋ ಎಂಬಂತೆ ತನ್ನ ವಾಕ್ಯವನ್ನು ಕಳುಹಿಸಿ ಅವರನ್ನು ಗುಣಪಡಿಸಿದನು; ಸಮಾಧಿಗೆ ಸೇರದಂತೆ ಮಾಡಿದನು.**

**ಕೀರ್ತನೆಗಳು 107:28,29**

**[28] ಅವರು ತಮ್ಮ ಇಕ್ಕಟ್ಟಿನಲ್ಲಿ ಯೆಹೋವನಿಗೆ ಮೊರೆಯಿಡಲು ಆತನನ್ನು ಅವರನ್ನು ಕಷ್ಟದಿಂದ ಹೊರತಂದನು.**

**[29] ಆತನು ಬಿರುಗಾಳಿಯನ್ನು ಶಾಂತಪಡಿಸಿದನು. ತೆರೆಗಳು ನಿಂತವು.**

ಕರ್ತನು ನಮ್ಮ ವಿಮೋಚಕನಾಗಿದ್ದಾನೆ! ನಾವು ಆತನನ್ನು ವಿಮೋಚಕನಂತೆ ತಿಳಿದಿರುವಾಗ, ನಮ್ಮನ್ನು ವಿಮೋಚಿಸಲು, ನಮ್ಮ ಜೀವಿತದಲ್ಲಿನ ಪರಿಸ್ಥಿತಿಗಳನ್ನು ವಿಮೋಚಿಸಲು ನಮ್ಮ ನಂಬಿಕೆಯನ್ನು ಆತನಲ್ಲಿ ಇರಿಸಬಹುದು ಮತ್ತು ಹಾಗೆಯೇ ನಾವು ಸೇವೆ ಸಲ್ಲಿಸುವ ಜನರುಗಳ ಜೀವಿತದಲ್ಲಿ ಆತನ ವಿಮೋಚನೆ ಕಾರ್ಯವು ಜರುಗುವುದನ್ನು ನೋಡಬಹುದು.

## ಜೂಬಿಲಿ ವರ್ಷ

ಹಳೆಯ ಒಡಂಬಡಿಕೆಯಲ್ಲಿ ಆತನ ಜನರ ಸಮುದಾಯದ ಜೀವಿತದ ಭಾಗವಾಗಿ ಯಾಜಕಕಾಂಡ 25ನೇ ಆಧ್ಯಾಯದಲ್ಲಿ ವರ್ಣಿಸಿದ್ದಂತೆ ದೇವರು ಜೂಬಿಲಿ ವರ್ಷವನ್ನು ಸಂಯೋಜಿಸಿದ್ದಾನೆ. ಇದು ವಿಮೋಚನೆಯ ಒಂದು ಶಕ್ತಿಯುತ ಚಿತ್ರಣವಾಗಿದೆ. ಇಬ್ರಿಯ ಪದವಾದ ''ಜೂಬಿಲಿಯು'' ಒಂದು ''ತುತ್ತೂರಿಯ ಸ್ಫೋಟ,'' ಒಂದು ಘೋಷಣೆ ಅಥವ ಪ್ರಕಟನೆಯ ಸೂಚನೆ ಎಂಬ ಸಾಮಾನ್ಯ ಅರ್ಥವಾಗಿ ಭಾಷಾಂತರಿಸಲ್ಪಟ್ಟಿದೆ. ಯೆಹೂದ್ಯರ ಮಧ್ಯದಲ್ಲಿ ಪ್ರತಿ ಐವತ್ತನೇ ವರ್ಷವು ಜೂಬಿಲಿ ವರ್ಷವಾಗಿತ್ತು. ವಿಮೋಚನೆಯ ಘೋರ್ಷಣೆ ಮಾಡಲ್ಪಟ್ಟಂತಹ ವರ್ಷವು ಇದಾಗಿತ್ತು. ಗುಲಾಮರು ಸ್ವತಂತ್ರಗೊಂಡಂಥ, ಜನರು ತಮ್ಮ ಸ್ವಾಸ್ಥ್ಯಗಳಿಗೆ ಮತ್ತು ಕುಟುಂಬಗಳಿಗೆ ಹಿಂತಿರುಗಿ ಹೋಗಲೂ ಸ್ವತಂತ್ರಗೊಂಡಂಥ, ಮತ್ತು ಎಲ್ಲಾ ಭೂಮಿಯನ್ನು ತಮ್ಮ ಹಿಂದಿನ ಮಾಲೀಕರಿಗೆ ಹಿಂದಿರುಗಿಸಲಾದಂಥ ವರ್ಷವು ಇದಾಗಿತ್ತು. ಇದು ಮಹಾ ಸಂತೋಷದ ಸಮಯವಾಗಿತ್ತು.

ಜೂಬಿಲಿಯ ವರ್ಷವನ್ನು ಉಲ್ಲೇಖಿಸುವ ಕೆಲವು ಆಯ್ದ ವಚನಭಾಗಗಳು ಇಲ್ಲಿವೆ.

**ಯಾಜಕಕಾಂಡ 25:10,13,14**

**[10] ನೀವು ಐವತ್ತನೆಯ ವರುಷವನ್ನು ದೇವರಿಗೆ ಮಿಸಲಾದ ವರುಷವೆಂದು ಭಾವಿಸಿ ಅದರಲ್ಲಿ ದೇಶದ ನಿವಾಸಿಗಳೆಲ್ಲರಿಗೂ ಬಿಡುಗಡೆಯಾಯಿತೆಂಬುದಾಗಿ ಸಾರಬೇಕು. ಅದು ಜೂಬಿಲಿ ಸಂವತ್ಸರವಾದದರಿಂದ ನೀವೆಲ್ಲರು ನಿಮ್ಮ ನಿಮ್ಮ ಸ್ವಂತ ಭೂಮಿಗಳಿಗೂ ಸ್ವಜನರ ಬಳಿಗೂ ಹೋಗಿ ಇರಬಹುದು.**

**[13] ಜೂಬಿಲಿ ವರ್ಷದಲ್ಲಿ ನಿಮ್ಮ ನಿಮ್ಮ ಸ್ವಂತ ಭೂಮಿಗಳು ತಿರಿಗಿ ನಿಮ್ಮ ವಶಕ್ಕೆ ಬರುವವು,**
**[14] ನೀವು (ಸ್ಥಿರಸೊತ್ತನ್ನು ) ಸ್ವದೇಶದವರೊಡನೆ ಕ್ರಯ ವಿಕ್ರಯ ಮಾಡುವಾಗ ಇದರ ವಿಷಯದಲ್ಲಿ ಅನ್ಯಾಯ ಮಾಡಬಾರದು.**

**ಯಾಜಕಕಾಂಡ 25:39-41**

**[39] ನಿಮ್ಮಲ್ಲಿ ಒಬ್ಬ ಸಹೋದರನು ಬಡವನಾಗಿ ತನ್ನನ್ನೇ ಮಾರಿಕೊಂಡರೆ ಅವನನ್ನು ದಾಸನಂತೆ ನಡೆಸಬಾರದು.**
**[40] ಅವನು ಕೂಲಿಯವನಂತೆಯೂ ಪರವಾಸಿಯಂತೆಯೂ ನಿಮ್ಮ ಬಳಿಯಲ್ಲಿದ್ದು ಜೂಬಿಲಿ ಸಂವತ್ಸರದ ತನಕ ನಿಮ್ಮ ಸೇವೆಯನ್ನು ಮಾಡಲಿ.**
**[41] ಆಗ ಅವನನ್ನೂ ಅವನ ಮಕ್ಕಳನ್ನೂ ಬಿಟ್ಟು ಬಿಡಬೇಕು. ಅವನ ಸ್ವಜನರ ಬಳಿಗೂ ಪಿತ್ರಾರ್ಜಿತ ಸ್ವಾಸ್ಥ್ಯಕ್ಕೂ ಹೋಗಬಹುದು.**

ತನ್ನ ಜನರಿಗಾಗಿ ತನ್ನ ಹೃದಯವನ್ನು ಪ್ರಕಟಿಸಲು ದೇವರು ಜೂಬಿಲಿ ವರ್ಷವನ್ನು ಸಂಯೋಜಿಸಿದನು. ಆತನ ಹೃದಯವು ಜನರು ವಿಮೋಚನೆ ಹೊಂದಿದವರಾಗಿರಬೇಕು ಮತ್ತು ಅವರ ಮೂಲ ಸ್ಥಾನವಾದ ಯೋಗಕ್ಷೇಮಕ್ಕೆ ಪುನಃ ಸ್ಥಾಪಿಸಲ್ಪಡಬೇಕು ಎಂಬುದಾಗಿದೆ. ಜನರನ್ನು ಬಂಧನದಿಂದ ಸ್ವತಂತ್ರಗೊಳಿಸಲು ಮತ್ತು ಬಿಡುಗಡೆಗೊಳಿಸಲು ಅವರು ಆರಿಸಿಕೊಳ್ಳುವಾಗ ಆತನ ಜನರು ಸ್ವಭಾವದಲ್ಲಿ ವಿಮೋಚಕರಾಗಿರಬೇಕೆಂಬುದು ತನ್ನ ಆಸೆಯನ್ನು ಆತನು ವ್ಯಕ್ತಪಡಿಸುತ್ತಾನೆ.

ಕರ್ತನಾದ ಯೇಸುವು ಬಂದಾಗ, *''ಕರ್ತನು ನೇಮಿಸಿರುವ ಶುಭವರ್ಷವನ್ನು ಪ್ರಚುರ ಪಡಿಸುವುದಕ್ಕೆ''* (ಲೂಕನು 4:19) ಜೂಬಿಲಿ ವರ್ಷವನ್ನು ಉಲ್ಲೇಖಿಸುವಂತದ್ದನ್ನು ಸಾರಲು ಬಂದೆನೆಂದು ಆತನು ಹೇಳಿದನು. ನಾವು ''ಕರ್ತನ ಅಂಗೀಕಾರದ ವರ್ಷದಲ್ಲಿ'' ಜೂಬಿಲಿಯ ಸಮಯದಲ್ಲಿ, ವಿಮೋಚನೆಯ ಸಮಯದಲ್ಲಿ ಮತ್ತು ಎಲ್ಲರಿಗಾಗಿ ಪುನಃ ಸ್ಥಾಪಿಸುವಿಕೆಯಲ್ಲಿ ಜೀವಿಸುತ್ತಿದ್ದೇವೆ.

## ರಕ್ತ ಸಂಬಂಧಿಕನಾದ-ವಿಮೋಚಕ

''ರಕ್ತ ಸಂಬಂಧಿ-ವಿಮೋಚಕ'' ಎಂಬ ಪರಿಕಲ್ಪನೆ ಮತ್ತು ಅಭ್ಯಾಸವು ಆತನ ಜನರ ಮಧ್ಯದಲ್ಲಿ ಹಳೆಯ ಒಡಂಬಡಿಕೆಯಲ್ಲಿ ದೇವರು ಸಂಯೋಜಿಸಿದ ಇನ್ನೊಂದು ಬಲಯುತವಾದ ವಿಮೋಚನೆ ಚಿತ್ರವಾಗಿದೆ.

ಯಾಜಕಕಾಂಡ 25:25ರಲ್ಲಿ ವಿವರಿಸಿದಂತೆ, ಸಾಲಕ್ಕಾಗಿ ಮಾರಾಟವಾದ ವ್ಯಕ್ತಿಗಳು ಅಥವಾ ಆಸ್ತಿಯ ವಿಮೋಚನೆಯೊಂದಿಗೆ ಇದರ ಮೂಲ ಬಳಕೆಯು ಸಂಬಂಧಿಸಿರುವುದಾಗಿದೆ.

**ಯಾಜಕಕಾಂಡ 25:25**
**ನಿಮ್ಮ ಸಹೋದರರಲ್ಲಿ ಒಬ್ಬನು ಬಡವನಾಗಿ ತನ್ನ ಭೂಸ್ಥಿತಿಯಲ್ಲಿ ಏನಾದರೂ ಮಾರಿಕೊಂಡರೆ ಅವನ ಸಮೀಪವಾದ ಬಂಧುವು ಅವನನ್ನು ಬಿಡಿಸಿಕೊಳ್ಳಬೇಕು.**

ಒಬ್ಬ ಮನುಷ್ಯನು ಬಡವನಾಗಿ ಮತ್ತು ತನ್ನ ಸ್ವಾಸ್ಥ್ಯವನ್ನು ಮಾರಿಕೊಂಡರೆ, ನಂತರ ಸಮೃದ್ಧಿಯಾಗಿ ಮತ್ತು ಈ ಹಿಂದೆ ಮಾರಿದ್ದನ್ನು ಮರಳಿ ಖರೀದಿಸಲು ಸಾಕಾಗುವಷ್ಟು ಹೊಂದಿದ್ದರೆ ಆ ವ್ಯಕ್ತಿಯು ತನಗಾಗಿ ಅದನ್ನು ವಿಮೋಚಿಸಿಕೊಳ್ಳಬಹುದು (ಯಾಜಕಕಾಂಡ 25:26,27). ಒಬ್ಬ ಬಡ ಮನುಷ್ಯನು ಸ್ವತಃ ತನ್ನನ್ನೇ ಜೊತೆ ಇಸ್ರಾಯೇಲನಿಗೆ ಮಾರಿಕೊಳ್ಳಬಹುದು (ಯಾಜಕಕಾಂಡ 25:39) ಅಥವಾ ಇಸ್ರಾಯೇಲ್ಯರಲ್ಲಿ ವಾಸಿಸುವ ಪರಕೀಯನಿಗೆ (ಯಾಜಕಕಾಂಡ 25:47) ಮಾರಿಕೊಳ್ಳಬಹುದು, ವಿಮೋಚಿಸುವ ಜವಾಬ್ದಾರಿಯು (ನಿಜವಾಗಿಯು, ಒಂದು ಆಯ್ಕೆ) ಸಮೀಪದ ಬಂಧು–ಸಹೋದರ, ಚಿಕ್ಕಪ್ಪ, ಚಿಕ್ಕಪ್ಪನ ಮಗ, ಅಥವಾ ಅವನ ಕುಟುಂಬದ ರಕ್ತ ಸಂಬಂಧಿಗೆ (ಯಾಜಕಕಾಂಡ 25:25,48,49) ಸಂಬಂಧಪಟ್ಟಂಥದ್ದಾಗಿತ್ತು.

ವ್ಯಕ್ತಿ (ಬಂಧು) ಒಬ್ಬನ ಹಣಕಾಸಿನ ಸಮಸ್ಯೆಗಳಿಂದ ವಿಮೋಚನೆ-ಗೊಳಿಸಿದವನನ್ನು ರಕ್ತಸಂಬಂಧಿ-ವಿಮೋಚಕ ಎಂದು ಕರೆಯಲಾಗುತ್ತದೆ. ರಕ್ತಸಂಬಂಧಿ-ವಿಮೋಚಕನು, ಪ್ರಾಮಾಣಿಕತೆ, ಜೀವಿತ, ಆಸ್ತಿ ಮತ್ತು ತನ್ನ ಸಮೀಪ ಸಂಬಂಧಿಕರ ಕುಟುಂಬದ ಹೆಸರು ಅಥವಾ ಅವನ ಕೊಲೆಗಾರರ ಮೇಲೆ ನ್ಯಾಯವನ್ನು ಕಾರ್ಯಗತಗೊಳಿಸುವ ಸಂರಕ್ಷಿಸುವ ಜವಾಬ್ದಾರಿ ಹೊಂದಿದ್ದಾನೆ.

ರೂತಳ ಪುಸ್ತಕ ರಕ್ತಸಂಬಂಧಿ-ವಿಮೋಚಕನ ಸುಂದರವಾದ ಕಥೆಯಾಗಿದೆ.

ಯೆಹೊದ ದೇಶದಲ್ಲಿ ಬರಗಾಲದ ನಿಮಿತ್ತದಿಂದ, ಎಲೀಮೆಲೆಕನು ಮತ್ತು ಅವನ ಹೆಂಡತಿಯಾದ ನವೊಮಿಯು ತಮ್ಮ ಇಬ್ಬರು ಗಂಡು ಮಕ್ಕಳಾದ ಮಹ್ಲೋನ್ ಮತ್ತು ಕಿಲ್ಯೋನ್‌ರೊಂದಿಗೆ ಬೆತ್ಲೆಹೇಮ್ ನಿಂದ ಮೋವಾಬ್ ದೇಶಕ್ಕೆ ವಾಸಿಸಲು ಹೊರಟು ಹೋದರು. ಈ ಅವಧಿಯಲ್ಲಿ ಗಂಡು ಮಕ್ಕಳು ಮೋವಾಬ್ ಸ್ತ್ರೀಯರನ್ನು ಮದುವೆಯಾದರು, ಒಬ್ಬಳ ಹೆಸರು ಒರ್ಫಾ, ಇನ್ನೊಬ್ಬಳ ಹೆಸರು

ರೂತಳು. ಸುಮಾರು 10 ವರ್ಷಗಳಾದ ಮೇಲೆ ನವೊಮಿಯ ಇಬ್ಬರು ಗಂಡು ಮಕ್ಕಳು ಯಾವುದೇ ಮಕ್ಕಳನ್ನು (ಸಂತಾನವನ್ನು) ಪಡೆಯದೆ ತೀರಿ ಹೋದರು. ಈ ಸಮಯದಲ್ಲಿ ನವೊಮಿಯು ಯೆಹೂದ ದೇಶಕ್ಕೆ ಹಿಂತಿರುಗಿ ಹೋಗಲು ತೀರ್ಮಾನಿಸಿದಳು. ಆದುದರಿಂದ ಅವಳು ತನ್ನ ಸೊಸೆಯಂದಿರಿಗೆ ಅವರ ಸ್ವಂತ ಜನರ ಬಳಿಗೆ ಹಿಂತಿರುಗಿ ಹೋಗಲು, ಮದುವೆ ಮಾಡಿಕೊಳ್ಳಲು ಮತ್ತು ಜೀವನದಲ್ಲಿ ಮುಂದೆ ಹೋಗುವಂತೆ ಬೇಡಿಕೊಂಡಳು. ಒರ್ಫಾಳು ಅದನ್ನು ಮಾಡಿದಳು. ಆದರೆ ರೂತಳು ತನ್ನ ಅತ್ತೆಯೊಂದಿಗೆ ಉಳಿಯಲು ತೀರ್ಮಾನಿಸಿದಳು ಇದು ಧೈರ್ಯವಾದ ತೀರ್ಮಾನವಾಗಿತ್ತು. ನವೊಮಿಯು ರೂತಳಿಗೆ ಕೊಡಲು ನಿಜವಾಗಿಯೂ ಏನೂ ಇರಲಿಲ್ಲ. ನವೊಮಿಯೊಂದಿಗೆ ಯೆಹೂದಕ್ಕೆ ಹಿಂತಿರುಗುವುದಕ್ಕಾಗಿ ರೂತಳನ್ನು ನಿರುತ್ಸಾಹಗೊಳಿಸಲು ಪ್ರಯತ್ನಿಸಿದಾಗ, ರೂತಳು ಒಂದು ವ್ಯಾಖ್ಯಾನ ಮಾಡಿ ತನ್ನ ಬದ್ಧತೆಯನ್ನು ವರ್ಣಿಸಿದಳು. *''ನಿನ್ನನ್ನು ಬಿಟ್ಟು ಹಿಂದಿರುಗಬೇಕೆಂದು ನನ್ನನ್ನು ಒತ್ತಾಯ ಪಡಿಸಬೇಡ. ನೀನು ಎಲ್ಲಿಗೆ ಹೋದರೂ ನಾನು ಅಲ್ಲಿಗೆ ಬರುವೆನು, ನೀನು ವಾಸಿಸುವಲ್ಲೇ ನಾನು ವಾಸಿಸುವೆನು, ನಿನ್ನ ಜನರೇ ನನ್ನ ಜನರು. ನಿನ್ನ ದೇವರೇ ನನ್ನ ದೇವರು. ನೀನು ಸಾಯುವಲ್ಲೇ ನಾನು ಸಾಯುವೆನು, ಅಲ್ಲೇ ನನಗೆ ಸಮಾಧಿಯಾಗಬೇಕು. ಮರಣದಿಂದಲ್ಲದೆ ನಾನು ನಿನ್ನನ್ನು ಅಗಲಿದರೆ ಯಹೋವನು ನನಗೆ ಬೇಕಾದದ್ದನ್ನು ಮಾಡಲಿ ಎಂದಳು''* (ರೂತಳು 1:16,17).

ನೊವೊಮಿ ಮತ್ತು ರೂತಳು ತಮ್ಮ ಪ್ರಯಾಣವನ್ನು ಬೆತ್ಲೆಹೇಮಿಗೆ ಬೆಳೆಸಿದರು. ಅದು ಜವೆಗೋದಿಯ ಸುಗ್ಗಿಯ ಸಮಯವಾಗಿತ್ತು. ರೂತಳು, ಒಬ್ಬ ಪರದೇಶದವಳು. ಮೋವಾಬ್‌ನ ಒಬ್ಬ ಸ್ತ್ರೀಯಾಗಿದ್ದ ಈಕೆಯ ಕುರಿತು ಮತ್ತು ಅವಳ ಅತ್ತೆಯೊಂದಿಗೆ ಉಳಿದುಕೊಂಡು ಬೇತ್ಲೆಹೇಮಗೆ ಬರುವ ಬದ್ಧತೆಯ ಕುರಿತು ನಗರದಾದ್ಯಂತ ವರ್ತಮಾನವು ಹರಡಿತ್ತು. ನೊವೊಮಿ ಮತ್ತು ರೂತಳು ತಮ್ಮ ಜೀವಿತವನ್ನು ಪುನಃ ಬೇತ್ಲೆಹೇಮಿನಲ್ಲಿ ಕಟ್ಟಿಕೊಳ್ಳಬೇಕಾಗಿತ್ತು. ಹೊಲಗಳ ಮೂಲೆಗಳಿಂದ ಧಾನ್ಯವನ್ನು ಸಂಗ್ರಹಿಸುವ ಮೂಲಕ ಬಡ ಜನರಿಗಾಗಿ ದೇವರು ಮಾಡಿದ್ದ ಪೂರೈಕೆಯ ಲಾಭವನ್ನು ರೂತಳು ಪಡೆದುಕೊಳ್ಳಬೇಕಾಗಿತ್ತು. ಹೊಲದಲ್ಲಿ ಕೊಯ್ಯುವವರು ಕೊಯ್ಲು ಮಾಡಿದ ನಂತರ ರೂತಳು ಹೋದಳು. ಅವಳು ಬೋವಜನೆಂಬ ವ್ಯಕ್ತಿಗೆ ಸಂಬಂಧಿಸಿದ ಹೊಲದಲ್ಲಿ ಹಕ್ಕಲಾಯುತ್ತಾ ಇದ್ದಳು. ಬೋವಜನು ರೂತಳ ಮಾವನಾದ ಎಲೀಮೆಲೆಕನ ಕುಟುಂಬಕ್ಕೆ ಸಂಬಂಧಿಸಿದವನು. ಆ ಸಮಯದಲ್ಲಿ ರೂತಳಿಗೆ ಅದು ತಿಳಿದಿರಲಿಲ್ಲ. ಬೋವಜನು ರೂತಳಿಗೆ ಅನುಕೂಲಕರವಾಗಿದ್ದನು. ಆತನು ಆಕೆಯನ್ನು ತನ್ನ ಹೊಲದಲ್ಲಿ

ಕೊಯ್ಯುವವರೊಂದಿಗೆ ಹೋಗಲು ಪ್ರೋತ್ಸಾಹಿಸಿದನು. ಆನಂತರ ರೂತಳು ನೊವೊಮಿಗೆ ಬೋವಜನೆಂಬ ವ್ಯಕ್ತಿಗೆ ಸಂಬಂಧಪಟ್ಟ ಹೊಲದಲ್ಲಿ ಕೊಯ್ಯುವುದರ ಕುರಿತು ತಿಳಿಸಿದಳು. ನೊವೊಮಿಯು ಬೋವಜನನ್ನು ಗುರುತಿಸಿದಳು ಮತ್ತು ಬೋವಜನು ಒಬ್ಬ ಸಂಭಾವ್ಯ ರಕ್ತ ಸಂಬಂಧಿ-ವಿಮೋಚಕ ಎಂದು ರೂತಳಿಗೆ ಸೂಚಿಸಿದಳು. ಆಮೇಲೆ ಬೋವಜನು ತನ್ನ ರಕ್ತಸಂಬಂಧಿ-ವಿಮೋಚಕನಂತೆ ತನ್ನ ಪಾತ್ರವನ್ನು ತೆಗೆದುಕೊಳ್ಳುವುದು ಹೇಗೆ ಎಂಬುದಾಗಿ ಮನವಿ ಮಾಡುವುದರ ಬಗ್ಗೆ ಸಲಹೆ ನೀಡಿದಳು.

**ರೂತಳು 2:20**

**ನೊವೊಮಿಯು ತನ್ನ ಸೊಸೆಗೆ ಹೀಗೆ ಹೇಳಿದಳು, ''ದೇವರು ಯಾಕೆ ಆ ಮನುಷ್ಯನನ್ನು ಆಶೀರ್ವದಿಸಿದನು! ಇದೆಲ್ಲದರ ಹೊರತು ದೇವರು ನಮ್ಮಿಂದ ಹೊರನಡೆದಿಲ್ಲ! ನಮ್ಮ ಕೆಟ್ಟಕಾಲದಲ್ಲಿ ಮತ್ತು ಒಳ್ಳೆಯದರಲ್ಲಿಯೂ ಆತನು ಇನ್ನೂ ನಮ್ಮನ್ನು ಪ್ರೀತಿಸುತ್ತಾನೆ!'' ನೊವೊಮಿಯು ಮುಂದುವರೆದು ''ಆ ವ್ಯಕ್ತಿಯು ನಮ್ಮ ಬಂಧುಗಳಲ್ಲಿ ಒಬ್ಬ ಹತ್ತಿರದವನನ್ನು ಒಡಂಬಡಿಕೆಯ ವಿಮೋಚನೆಯ ನಮ್ಮ ವಲಯದಲ್ಲಿ ಒಬ್ಬನು, ರೂತಳೇ ಎಂದು ಹೇಳಿದಳು!''**

ರೂತಳು ಒಮ್ಮೆ ಬೋವಜನಿಗೆ ಮನವಿ ಮಾಡಿದಾಗ, ಅವನು ರಕ್ತ ಸಂಬಂಧಿ-ವಿಮೋಚಕನಂತೆ ತನ್ನ ಪಾತ್ರವನ್ನು ನೆರವೇರಿಸಲು ಹೆಜ್ಜೆಯನ್ನಿಟ್ಟನು. ಬೋವಜನ ಮೊದಲು ಹತ್ತಿರದ ಬಂಧುಗಳಲ್ಲಿ ಮೊದಲಿಗರ ಸಾಲಿನಲ್ಲಿ ಇರುವವರು ಈ ರಕ್ತಸಂಬಂಧಿ ವಿಮೋಚಕರ ಜವಾಬ್ದಾರಿಯನ್ನು ಕೊಂಡೊಯ್ಯಲು ಚಿತ್ತವುಳ್ಳವರಾಗಿದ್ದೀರಿ ಎಂದು ಕೇಳಿದನು. ''*ಆಗ ಬೋವಜನು ನೀನು ನೊವೊಮಿಯಿಂದ ಆ ಹೊಲವನ್ನು ತೆಗೆದುಕೊಳ್ಳುವ ದಿನದಲ್ಲಿ ಹೊಲದ ಖಾತೆಯು ಆಕೆಯ ಸತ್ತು ಹೋದ ಮಗನ ಹೆಸರಿನಲ್ಲೇ ಉಳಿಯುವಂತೆ ಅವನ ಹೆಂಡತಿಯೂ ಮೋವಾಬ್ಯ ಸ್ತ್ರೀಯೂ ಆದ ರೂತಳನ್ನು ತೆಗೆದುಕೊಳ್ಳಬೇಕು*'' ಎಂದು ತಿಳಿಸಲು (ರೂತಳು 4:5). ನವೊಮಿಯು ವಿಧವೆಯಾಗಿದ್ದ ಸೊಸೆಯನ್ನು ಹೊಂದಿದ್ದಾಗಲೂ ರಕ್ತಸಂಬಂಧಿ-ವಿಮೋಚಕನು ನವೊಮಿಯ ಹೊಲವನ್ನು ಖರೀದಿಸುವುದು ಮಾತ್ರವಲ್ಲದೆ, ಅವನ ಸಹೋದರನ ವಿಧವೆಯನ್ನು ಮದುವೆಯಾಗುವುದು ಮತ್ತು ಅವನು ಇಷ್ಟಪಟ್ಟರೆ ಮಕ್ಕಳನ್ನು ಎಬ್ಬಿಸಿ ಬೆಳೆಸುವ ಕರ್ತವ್ಯವು ಇದಾಗಿತ್ತು. ರಕ್ತಸಂಬಂಧಿ-ವಿಮೋಚಕನು ಭೂಮಿಯನ್ನು ವಿಮೋಚಿಸುವ ತನ್ನ ಹಕ್ಕನ್ನು ಅವನ ಸಹೋದರನ ವಿಧವೆಯನ್ನು ಅದೇ ಸಮಯದಲ್ಲಿ ಮದುವೆ ಮಾಡಿಕೊಳ್ಳಲು ಚಿತ್ತವುಳ್ಳವನಾಗಿರದ ಹೊರತು ಚಲಾಯಿಸಲು ಸಾಧ್ಯವಿಲ್ಲ. ಸಂಬಂಧಿಯು ಮೊದಲ ಸಾಲಿನಲ್ಲಿರುವವರು, ರಕ್ತಸಂಬಂಧಿ-ವಿಮೋಚಕನ ತನ್ನ ಪಾತ್ರವನ್ನು

ತೆಗೆದುಕೊಳ್ಳುವ ಆಯ್ಕೆ ಮಾಡಲಿಲ್ಲ. ಆದ್ದರಿಂದ ಬೋವಜನು ಹೆಜ್ಜೆಯನ್ನಿಟ್ಟನು, ನವೊಮಿಯ ಭೂಮಿಯನ್ನು ವಿಮೋಚಿಸಿದನು ಮತ್ತು ಹಾಗೆಯೇ ರೂತಳನ್ನು ಮದುವೆಮಾಡಿಕೊಂಡನು.

ರೂತಳಿಗೆ, ಯೆಹೂದ್ಯರಲ್ಲದವಳು, ಹೊರಗಿನವಳು, ಮೋವಾಬಿನ ಒಬ್ಬ ಸ್ತ್ರೀಯು, ಎಲ್ಲವನ್ನು ಕಳೆದುಕೊಂಡವಳು (ಗಂಡನಿಲ್ಲ, ಮಕ್ಕಳಿಲ್ಲ) ಮತ್ತು ಏನನ್ನು ಹೊಂದಿಲ್ಲದವಳು (ಅವಳು ತನ್ನ ಸ್ವಂತ ಜನರನ್ನು ಮತ್ತು ಭೂಮಿಯನ್ನು ಅತ್ತೆಯೊಂದಿಗೆ ಹೋಗಲು ಬಿಟ್ಟುಬಿಟ್ಟಳು) ರಕ್ತಸಂಬಂಧಿ-ವಿಮೋಚಕನು ಹೆಜ್ಜೆಯನ್ನಿಟ್ಟನು ಮತ್ತು ಘನತೆ, ಗೌರವ, ಕುಟುಂಬ, ಸ್ಥಾನ ಮತ್ತು ಆಕೆಯು ಬಯಸಿದ್ದೆಲ್ಲವನ್ನು ಪುನಃ ಸ್ಥಾಪಿಸಿದನು. ಇದೆಲ್ಲದ್ದಕ್ಕೂ ಮಿಗಿಲಾಗಿ, ರಕ್ತಸಂಬಂಧಿ-ವಿಮೋಚಕನ ಕೆಲಸದ ನಿಮಿತ್ತದಿಂದ ರೂತಳು ಕರ್ತನಾದ ಯೇಸು ಕ್ರಿಸ್ತನ ವಂಶಾವಳಿಗೆ ತರಲ್ಪಟ್ಟಳು (ಮತ್ತಾಯ 1:5).

## ತಪ್ಪಿ ಹೋದ ಮಗನ ಕಥೆ

ದಾರಿತಪ್ಪಿಹೋದ ಮಗನ ಕಥೆಯು (ಲೂಕ 15:11-24) ಒಂದು ಚಿರಪರಿಚಿತ ಕಥೆಯಾಗಿದೆ. ಈ ಒಂದು ಕಥೆಯಲ್ಲಿ ವಿಮೋಚನೆಯ ಎಲ್ಲಾ ಅಂಶಗಳನ್ನು ನಾವು ನೋಡದಿದ್ದಾಗಲೂ (ಅಂದರೆ, ಬಿಡುಗಡೆಯ ಶುಲ್ಕದ ಪಾವತಿ), ಮಗನ ಹಿಂದಿರುಗುವಿಕೆಗಾಗಿ ಹಾತೊರೆಯುವ ತಂದೆಯ ಹೃದಯವನ್ನು ನೋಡುತ್ತೇವೆ. ತಪ್ಪು ಏನು ಜರುಗುತ್ತೆಂಬುದು ಮುಖ್ಯ ವಿಚಾರವಾಗಿರದೇ, ಮಗನು ವಿಮೋಚಿಸಲ್ಪಟ್ಟ ಮತ್ತು ಪುನಃ ಸ್ಥಾಪಿಸಲ್ಪಟ್ಟದ್ದನ್ನು ನೋಡಲು ತಂದೆಯ ಹೃದಯವು ಹೊಂದಿಸಲಾಗಿತ್ತು. ದಾರಿತಪ್ಪಿದ ಅವನ ಮಗನು ತಿರುಗಿ ಬರುತ್ತಾನೆಂದು ತಂದೆಯು ದಿನದಿಂದ ದಿನಕ್ಕೆ ಬಾಗಿಲ ಬಳಿ ನಿಂತು ಕಾಯುತ್ತಿರುವುದನ್ನು ನಾವು ಕಲ್ಪಿಸಿಕೊಳ್ಳಬಹುದು ಮಾತ್ರ. ಮತ್ತು ತಂದೆಯ ಹೃದಯದಲ್ಲಿ ಮತ್ತು ಮನಸ್ಸಿನ ಆಲೋಚನೆಗಳು, ಪ್ರತೀಕಾರ, ಶಿಕ್ಷೆ ಅಥವಾ ಅಪಮಾನಕರವಾಗಿರಲಿಲ್ಲ. ಆದರೆ ಪ್ರೀತಿ, ಪುನಃ ಕಟ್ಟುವಿಕೆ, ಕ್ಷಮಾಪಣೆ ಮತ್ತು ಆಚರಣೆಯಾಗಿತ್ತು. ಮಗನು ಹಿಂತಿರುಗಿ ಬಂದಾಗ ಸ್ಪಷ್ಟವಾಗಿ ಇದೇ ಜರುಗಿತ್ತು. ತಂದೆಯು ಕ್ಷಮಾಪಣೆಯನ್ನು, ಪುನಃ ಸ್ಥಾಪನೆಯನ್ನು ವಿಸ್ತರಿಸುತ್ತಾನೆ ಮತ್ತು ಅವನ ಹಿಂದಿರುಗುವಿಕೆಯನ್ನು ಆಚರಿಸುತ್ತಾನೆ. ಈ ಕಥೆಯು ದೇವರ ಹೃದಯವನ್ನು ನಮ್ಮ ನಿತ್ಯನಾದ ತಂದೆಯನ್ನು ನಮಗೆ ಪ್ರಕಟಿಸುತ್ತದೆ. ನಮ್ಮ ತಂದೆಯ ಹೃದಯವು ಸ್ವಭಾವದಲ್ಲಿ ವಿಮೋಚಕವಾಗಿದೆ ಮತ್ತು ನಾವು ಕ್ಷಮಿಸಲ್ಪಟ್ಟವರು,

ಸ್ವಸ್ಥತೆ ಹೊಂದಿದವರು ಮತ್ತು ಪುನಃ ಸ್ಥಾಪಿಸಲ್ಪಟ್ಟವರಾಗಿರುವಂತೆ ನೋಡಲೂ ಹೊಂದಿಸಿಕೊಂಡಿರುತ್ತದೆ.

## ವಿಮೋಚನೆಯ ದೊಡ್ಡ ಯೋಜನೆ

ಎಲ್ಲಕ್ಕಿಂತ ಶ್ರೇಷ್ಟವಾದ ವಿಮೋಚನೆಯ ಕಥೆಯು ಸಹಜವಾಗಿ ಮಾನವಕುಲದ ವಿಮೋಚನೆಗಾಗಿರುವ ದೇವರ ಯೋಜನೆಯಾಗಿದೆ. ನಮ್ಮ ಎಲ್ಲಾ ಪಾಪಗಳ ನಡುವೆ, ನಮ್ಮ ಸೃಷ್ಟಿಕರ್ತ ದೇವರು, ನ್ಯಾಯಧಿಪತಿಯಂತೆ ಕುಳಿತಿರುವಾತನು, ಸ್ವತಃ ತಾನೇ ನಮ್ಮ ವಿಮೋಚಕ ಮತ್ತು ರಕ್ಷಕನಾಗಿ ಬಂದನು. ಪಾಪದ ಮೂಲಕವಾಗಿ ಆತನ ವೈರಿಗಳಾಗಿದ್ದ ನಮ್ಮನ್ನು ತನ್ನ ಬಳಿಗೆ ಸಂಧಾನ ಮಾಡಿಕೊಂಡನು, ನಮ್ಮನ್ನು ಸಂಪೂರ್ಣವಾಗಿ ಪುನಃ ಸ್ಥಾಪಿಸಿದನು. ಮತ್ತು ಆತನ ದೃಷ್ಟಿಯಲ್ಲಿ ನಮ್ಮನ್ನು ಪವಿತ್ರರು ಮತ್ತು ನಿರ್ದೋಷಿಗಳನ್ನಾಗಿ ಮಾಡಿದನು. ಆತನು ಇದನ್ನು ಸಂಪೂರ್ಣವಾಗಿ ಮಾಡಿದನು. ಆತನು ನಮಗಾಗಿ ಸಾಧ್ಯಕರವಾಗುವಂತೆ ಮಾಡಿದನು ಮತ್ತು ಆತನ ಮಗನಾದ ಯೇಸುಕ್ರಿಸ್ತನಲ್ಲಿ ವೈಯಕ್ತಿಕ ನಂಬಿಕೆ ಮೂಲಕವಾಗಿ ಅವರ ಸ್ವಂತ ಅನುಭವಗಳನ್ನು ವೈಯಕ್ತಿಕವಾಗಿ ಪ್ರತಿಯೊಬ್ಬರು ಹೊಂದಲೂ ಸರಳವಾಗಿ ಆಹ್ವಾನಿಸುತ್ತಾನೆ.

**ಕೊಲೊಸ್ಸೆಯವರಿಗೆ 1:20–22**

**20 ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನು ಉಂಟುಮಾಡಿ ಭೂಪರಲೋಕಗಳಲ್ಲಿರುವ ಸಮಸ್ತವನ್ನು ಆತನ ಮೂಲಕ ತನಗೆ ಸಂಧಾನ ಪಡಿಸಿಕೊಳ್ಳಬೇಕೆಂತಲೂ ನಿಷ್ಕರ್ಷೆ ಮಾಡಿದನು.**

**21 ಇದಲ್ಲದೆ ನೀವು ಹಿಂದಿನ ಕಾಲದಲ್ಲಿ ಅನ್ಯರೂ ದುಷ್ಕೃತ್ಯಗಳನ್ನು ಮಾಡುವವರಾಗಿ ದ್ವೇಷ ಮನಸುಳ್ಳವರೂ ಆಗಿದ್ದರೂ.**

**22 ಆತನು ನಿಮ್ಮನ್ನು ಸಹ ತನ್ನ ಕುಮಾರನ ಸ್ಥೂಲ ದೇಹದಲ್ಲಿ ಉಂಟಾದ ಮರಣದ ಮೂಲಕ ಈಗ ಸಂಧಾನಪಡಿಸಿಕೊಂಡಿದ್ದಾನೆ; ಮತ್ತು ನಿಮ್ಮನ್ನು ಪರಿಶುದ್ಧರನ್ನಾಗಿಯೂ ನಿರ್ದೋಷಿಗಳನ್ನಾಗಿಯೂ, ನಿರಪರಾಧಿಗಳನ್ನಾಗಿಯೂ, ತನ್ನ ಸನ್ನಿಧಿಯಲ್ಲಿ ನಿಲ್ಲಿಸಬೇಕೆಂದಿದ್ದಾನೆ.**

ದೇವರ ಪ್ರೀತಿಗೆ ಯಾವುದೇ ಮಿತಿಯಿಲ್ಲ, ಯಾವುದೇ ಮೇರೆಗಳಿಲ್ಲ ಎಂಬುದು ನಮಗೆ ಗೊತ್ತಿದೆ. ನಮಗಾಗಿ ಇಟ್ಟಿರುವ ಆತನ ಪ್ರೀತಿಯಿಂದ ನಮ್ಮನ್ನು ಪ್ರತ್ಯೇಕಿಸಲು ಯಾವುದೂ ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯು ಎಷ್ಟು ''ಅಸ್ತವ್ಯಸ್ತತೆಗೆ'' ಒಳಗಾಗಿದ್ದರೂ, ಅವರ ಪಾಪಗಳು ಎಷ್ಟೇ ಕಪ್ಪಾಗಿದ್ದರೂ, ಅವರು ಅಲೆಮಾರಿಗಳಂತೆ ಎಷ್ಟು ದೂರ ಅಲೆದಾಡಿದ್ದರೂ, ಅವರು ಎಷ್ಟೇ ವ್ಯರ್ಥವಾದವರಾಗಿದ್ದರೂ,

ಸ್ವಯಂಕೃತವಾಗಿ ಎಷ್ಟೇ ಆಳವಾಗಿ ಗಾಯಮಾಡಿಕೊಂಡಿದ್ದರೂ, ದೇವರು ಇನ್ನೂ ಅವರನ್ನು ಪ್ರೀತಿಸುತ್ತಾನೆ ಮತ್ತು ಅವರು ವಿಮೋಚನೆ ಹೊಂದಿರಬೇಕೆಂದು ನೋಡಲು ಬಯಸುತ್ತಾನೆ.

**ರೋಮಾಪುರದವರಿಗೆ 8:38,39**

**38 ಹೇಗೆಂದರೆ ಮರಣವಾಗಲಿ ಜೀವವಾಗಲಿ. ದೇವದೂತರಾಗಲಿ ದುರಾತ್ಮಗಳಾಗಲಿ ಈಗಿನ ಸಂಗತಿಗಳಾಗಲಿ ಮುಂದಣ ಸಂಗತಿಗಳಾಗಲಿ**

**39 ಮಹತ್ವಗಳಾಗಲಿ ಮೇಲಣ ಲೋಕವಾಗಲಿ ಕೆಳಗಣ ಲೋಕವಾಗಲಿ ಬೇರೆ ಯಾವ ಸೃಷ್ಟಿಯಾಗಲಿ ನಮ್ಮನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರದೆಂದು ನನಗೆ ನಿಶ್ಚಯ ಉಂಟು.**

ಆತನು ಸಂಪೂರ್ಣವಾಗಿ ರಕ್ಷಿಸುತ್ತಾನೆ. ಒಬ್ಬ ವ್ಯಕ್ತಿಯು ಪಾಪ ಮತ್ತು ಅಧಃಪತನದ ಅತ್ಯಂತ ಕಡಿಮೆ ಸ್ಥಿತಿಯಲ್ಲಿ ಬಿದ್ದಿದ್ದರೂ ಸಹ ಅವರನ್ನು ವಿಮೋಚಿಸುತ್ತಾನೆ ಮತ್ತು ಅವರನ್ನು ರಕ್ಷಿಸುತ್ತಾನೆ.

**ಇಬ್ರಿಯರಿಗೆ 7:25**

**ಆದಕಾರಣ ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ. ಅವರಿಗೋಸ್ಕರ ವಿಜ್ಞಾಪನೆ ಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ.**

## ದೇವರ ವಿಮೋಚನಾ ಹೃದಯವನ್ನು ಅಪ್ಪಿಕೊಳ್ಳುವುದು

ದೇವರ ಹೃದಯವು ಯಾವಾಗಲೂ ಕಳೆದುಹೋದದ್ದನ್ನು ಚೇತರಿಸಿಕೊಳ್ಳುವುದು, ವ್ಯರ್ಥವಾದದ್ದನ್ನು ಪುನಃ ಪಡೆದುಕೊಳ್ಳುವುದು, ಹಾಳಾದದ್ದನ್ನು ಪುನಃ ಸ್ಥಾಪಿಸುವುದು, ಬಂಧಿಸಲ್ಪಟ್ಟದ್ದನ್ನು ಬಿಡುಗಡೆ ಮಾಡುವುದು, ನಾಶವಾದದ್ದನ್ನು ಪುನಃ ನಿರ್ಮಿಸುವುದು, ವಿಕಾರಗೊಂಡದ್ದನ್ನು ಸುಂದರಗೊಳಿಸುವುದು, ಗಾಯಗೊಂಡದ್ದನ್ನು ವಾಸಿಮಾಡುವುದು, ಕೆಳಗಣ ದಣಿವಾದದ್ದನ್ನು ನೂತನಗೊಳಿಸುವುದು, ಸಾಯುತ್ತಿರುವದನ್ನು ಪುನರುಜ್ಜೀವನ ಗೊಳಿಸುವುದು, ಮರಣಹೊಂದಿದ್ದನ್ನು ಪುನರುತ್ಥಾನಗೊಳಿಸುವುದು, ಇದಕ್ಕೆ ಹೊಂದಿಸಿಕೊಂಡಿದೆ.

ದೇವರ ಹೃದಯವು ಸ್ವಭಾವದಲ್ಲಿ ವಿಮೋಚಕವಾಗಿದೆ. ಆತನು ಪ್ರಾರಂಭಿಸಿದ್ದನ್ನು ದೇವರು ಬಿಟ್ಟುಕೊಡುವನಲ್ಲ. ಬೆಲೆಯನ್ನು ಲೆಕ್ಕಿಸದೆ ಆತನು ಸಂಪೂರ್ಣವಾಗಿ ರಕ್ಷಿಸುತ್ತಾನೆ ಮತ್ತು ಪ್ರೀತಿಸುತ್ತಾನೆ. ನಾವು ಆತನಂತೆಯೇ ಇರಲು

ಕರೆಯಲ್ಪಟ್ಟಿದ್ದೇವೆ ಮತ್ತು ಜೀವನದ ಪರಿಸ್ಥಿತಿಗಳಿಗೆ ಮತ್ತು ನಾವು ಎದುರಿಸುವ ತೊಂದರೆಗಳಿಗೆ ನಮ್ಮ ವಿಧಾನವು ಸಹ ವಿಮೋಚಕವಾಗಿರಬೇಕು.

ನಾವು, ಜನರನ್ನು ಅವರ ಜೀವನದ ಸನ್ನಿವೇಶಗಳು, ಮತ್ತು ತಪ್ಪಾಗಿರಬಹುದಾದ ಇತರ ವಿಷಯಗಳನ್ನು ನೋಡಿದಾಗ, ನಾವು ಅವರನ್ನು ದೇವರ ವಿಮೋಚಕ ಹೃದಯದಿಂದ ನೋಡಬೇಕು.

ನಿಮಗೆ ತಿಳಿದಿರುವ ಸ್ನೇಹಿತರು ಅಥವಾ ಜನರು ತಮ್ಮ ಜೀವನವನ್ನು ಅಸ್ತವ್ಯಸ್ತಗೊಳಿಸಿಕೊಂಡಿದ್ದರೆ ಮತ್ತು ಎದುರು ನೋಡಲು ಏನು ಉಳಿದಿಲ್ಲದಿದ್ದರೆ, ಅವರನ್ನು ದೇವರ ವಿಮೋಚಕ ಹೃದಯದಿಂದ ನೋಡಿರಿ. ನಿರೀಕ್ಷೆ ಇದೆ.

ಮಗನು ಅಥವಾ ಮಗಳು ದಾರಿತಪ್ಪಿದರೆ, ಅವನು ಅಥವಾ ಆಕೆಯನ್ನು ದೇವರ ವಿಮೋಚನಾ ಹೃದಯದಿಂದ ನೋಡಿರಿ. ದೇವರು ನಿಮ್ಮ ಮಗುವನ್ನು ಹಿಂದಕ್ಕೆ ತರಬಹುದು.

ನಿಮ್ಮ ಮದುವೆ ಅಥವಾ ಮನೆಯು ದೂರವಾಗಿ ಬಿದ್ದುಹೋಗುತ್ತಿದ್ದರೆ, ದೇವರ ವಿಮೋಚಕ ಹೃದಯದಿಂದ ಅದನ್ನು ನೋಡಿರಿ. ದೇವರು ನಿಮ್ಮ ಶೋಕವನ್ನು ನೃತ್ಯವಾಗಿ ಪರಿವರ್ತಿಸಬಹುದು.

ನಿಮ್ಮ ಸ್ವಂತ ಜೀವನ ಅಥವಾ ಹಣಕಾಸುಗಳು ಅಥವಾ ಉದ್ಯೋಗದ ಪರಿಸ್ಥಿತಿಗಳು ಅಥವಾ ಯಾವುದಾದರೂ ಬೇರೆಡೆ ಒಳ್ಳೆಯದರಿಂದ ಕೆಟ್ಟದ್ದಕ್ಕೆ, ಅತಿಕೆಟ್ಟದ್ದಕ್ಕೆ ಹೋಗಿದ್ದರೆ, ನಿಮಗಾಗಿರುವ ದೇವರ ವಿಮೋಚಕ ಹೃದಯದಲ್ಲಿ ನಂಬಿಕೆ ಇಡಿರಿ. ದೇವರು ಜನರನ್ನು ಹೊಲಸಾದ ಕೆಸರಿನ ಗುಂಡಿಯಿಂದ ಹೊರತಂದು ಸಮತಟ್ಟಾದ ನೆಲದ ಮೇಲೆ ಕೂರಿಸುತ್ತಾನೆ.

ನೀವು ಹೊತ್ತುಕೊಂಡಿದ್ದ ಕನಸನ್ನು ನಿಮ್ಮ ಕಣ್ಣು ಮುಂದೆಯೇ ಕ್ರೂರವಾಗಿ ಪುಡಿಮಾಡಿದಂತೆ ತೋರುತ್ತಿದ್ದರೆ, ದೇವರು ಇನ್ನೂ ನಿಮ್ಮ ವಿಮೋಚಕನಾಗಿದ್ದಾನೆ. ಸತ್ತದ್ದಕ್ಕೆ ಆತನು ಜೀವವನ್ನು ಕೊಡುತ್ತಾನೆ.

## ವೈಯಕ್ತಿಕ ಧ್ಯಾನ

1) ದೇವರ ವಿಮೋಚಕ ಹೃದಯದೊಡನೆ ನೋಡಬೇಕಾದಂತಹ ಜನರು ಅಥವಾ ಪರಿಸ್ಥಿತಿಗಳು ನನ್ನ ಜೀವಿತದಲ್ಲಿ ಇವೆಯಾ?

2) ದೇವರ ವಿಮೋಚಿಸುವ ಬಲವು ಅವರನ್ನು ಅಥವಾ ಅವರ ಪರಿಸ್ಥಿತಿಗಳನ್ನು ವಿಮೋಚಿಸುತ್ತದೆ ಎಂಬುದಾಗಿ ನಾನು ನಂಬುತ್ತೇನಾ?

# 2
# ದೇವರ ವಿಮೋಚಕ ಕೆಲಸದ ಸ್ವಭಾವ

ಕೀರ್ತನೆಗಳು 103 ತುಂಬಾ ಪರಿಚಿತ ಕೀರ್ತನೆಯಾಗಿದೆ. ಆತನ ಅನೇಕ ಪ್ರಯೋಜನಗಳ ಭಾಗವಾಗಿ ನಾಶನದಿಂದ ನಮ್ಮ ಜೀವಿತವನ್ನು ವಿಮೋಚಿಸುವುದನ್ನು ದೇವರು ನಮಗೆ ಕೊಡುತ್ತಾನೆ.

**ಕೀರ್ತನೆಗಳು 103:1-6**

**1 ನನ್ನ ಮನವೇ ಯಹೋವನನ್ನು ಕೊಂಡಾಡು, ನನ್ನ ಸರ್ವೇಂದ್ರಿಯಗಳೇ ಆತನ ಪವಿತ್ರನಾಮಮನ್ನು ಕೀರ್ತಿಸಿರಿ.**
**2 ನನ್ನ ಮನವೇ ಯಹೋವನನ್ನು ಕೊಂಡಾಡು, ಆತನ ಉಪಕಾರಗಳಲ್ಲಿ ಒಂದನ್ನೂ ಮರೆಯಬೇಡ.**
**3 ಆತನು ನಿನ್ನ ಎಲ್ಲಾ ಅಪರಾಧಗಳನ್ನು ಕ್ಷಮಿಸುವವನೂ ಸಮಸ್ತ ರೋಗಗಳನ್ನು ವಾಸಿಮಾಡುವವನೂ.**
**4 ನಿನ್ನ ಜೀವವನ್ನು ನಾಶದಿಂದ ತಪ್ಪಿಸುವವನೂ ಪ್ರೀತಿಕೃಪೆಗಳೆಂಬ ಕಿರೀಟದಿಂದ ನಿನ್ನನ್ನು ಶೃಂಗರಿಸುವವನೂ ಆಗಿದ್ದಾನೆ.**
**5 ಶ್ರೇಷ್ಟವರಗಳಿಂದ ನಿನ್ನ ಆಶೆಯನ್ನು ಪೂರ್ತಿಗೊಳಿಸುತ್ತಾನೆ. ಹದ್ದಿಗೆ ಬರುವಂತೆಯೇ ನಿನಗೆ ಯೌವ್ವನವನ್ನು ತಿರಿಗಿ ಬರಮಾಡುತ್ತಾನೆ.**
**6 ಯಹೋವನು ನೀತಿಯನ್ನು ಸಾಧಿಸುವವನಾಗಿ ಕುಗ್ಗಿಹೋದವರೆಲ್ಲರ ನ್ಯಾಯವನ್ನು ಸ್ಥಾಪಿಸುತ್ತಾನೆ.**

ನಮ್ಮ ವಿಮೋಚಕನಾಗಿರುವ ದೇವರನ್ನು ವರ್ಣಿಸಲು ನಾವು ಮಾಡಬಹುದಾದಂತ ಕೆಲವು ಘೋಷಣೆಗಳು ಇಲ್ಲಿವೆ.

- ನನ್ನ ವಿಮೋಚಕನು ಜೀವಿಸುತ್ತಾನೆ (ಯೋಬನು 19:25).
- ನನ್ನ ವಿಮೋಚಕನು ಕರ್ತನು, ಇಸ್ರಾಯೇಲ್ಯರ ಅರಸನು, ಮೊದಲನೆಯವನೂ ಮತ್ತು ಕೊನೆಯವನೂ ಆತನೇ (ಯೆಶಾಯ 44:6).
- ನನ್ನ ವಿಮೋಚಕನು ಸರ್ವಲೋಕದ ದೇವರಾಗಿದ್ದಾನೆ (ಯೆಶಾಯ 54:5).
- ನನ್ನ ವಿಮೋಚಕನು ಆತನ ಹಸ್ತಗಳಲ್ಲಿ ಇಡೀ ಪ್ರಪಂಚವನ್ನೇ ಹೊಂದಿದ್ದಾನೆ (ಯೆಶಾಯ 44:24).

- ನನ್ನ ವಿಮೋಚಕನು ಬಲಿಷ್ಟವಾದವನು, ಸೇನಾಧಿಶ್ವರನಾದ ಕರ್ತನು ಎಂಬುದು ಆತನ ಹೆಸರು (ಯೆರೆಮಿಯ 50:34).
- ನನ್ನ ವಿಮೋಚಕನು ನನ್ನ ತಂದೆ, ನಿತ್ಯನಾದವನು (ಯೆಶಾಯ 63:16).
- ನನ್ನ ವಿಮೋಚಕನು ಮಹೋನ್ನತನಾದ ದೇವರು ಮತ್ತು ನನ್ನ ಬಂಡೆ (ಕೀರ್ತನೆಗಳು 78:35).
- ನನ್ನ ವಿಮೋಚಕನು ನನ್ನ ಕಡೆಗೆ ನಿತ್ಯವಾದ ಕರುಣೆ ಮತ್ತು ಆತನ ಕೃಪೆಯನ್ನು ತೋರಿಸುತ್ತಾನೆ (ಯೆಶಾಯ 54:8).
- ನನ್ನ ವಿಮೋಚಕನು ಇಸ್ರಾಯೇಲ್ಯರಲ್ಲಿ ಪವಿತ್ರನು ಮತ್ತು ನನಗೆ ಆತನು ಸಹಾಯ ಮಾಡುತ್ತಾನೆ (ಯೆಶಾಯ 41:14).
- ನನ್ನ ವಿಮೋಚಕನು ಪ್ರಬಲನು, ಆತನು ನನ್ನ ಪ್ರಕರಣವನ್ನು ಸಮರ್ಥಿಸುತ್ತಾನೆ (ಜ್ಞಾನೋಕ್ತಿಗಳು 23:11; ಯೆರೆಮಿಯ 50:34).
- ನನ್ನ ವಿಮೋಚಕನು ಯಶಸ್ಸು ಸಾಧಿಸಲು ಬೋಧಿಸುತ್ತಾನೆ ಮತ್ತು ನಾನು ಹೋಗಬೇಕಾದ ದಾರಿಯಲ್ಲಿ ಮುನ್ನಡೆಸುತ್ತಾನೆ (ಯೆಶಾಯ 48:17).
- ನನ್ನ ವಿಮೋಚಕನು ನನ್ನ ಒಳಿತಿಗಾಗಿ ವಿಷಯಗಳನ್ನು ತಿರಿಗಿಸುತ್ತಾನೆ ಮತ್ತು ಅನಿರೀಕ್ಷಿತವಾದದ್ದು ಜರುಗಲು ಕಾರಣವಾಗುತ್ತಾನೆ (ಯೆಶಾಯ 49:26; ಯೆಶಾಯ 60:16).

ದೇವರು ನಮ್ಮ ವಿಮೋಚಕನು. ಈ ಒಂದು ಅಧ್ಯಾಯದಲ್ಲಿ ದೇವರ ವಿಮೋಚನಾ ಕಾರ್ಯದ ಸ್ವಭಾವಗಳಿಂದ ಕೆಲವು ಸೂಕ್ಷ್ಮ ಪರಿಜ್ಞಾನ ಪಡೆಯೋಣ. ನಿರ್ದಿಷ್ಟವಾಗಿ ಏನು ಒಳಗೊಳ್ಳುತ್ತದೆ ಮತ್ತು ಆತನ ವಿಮೋಚನಾ ಕೆಲಸದ ಬಗ್ಗೆ ದೇವರು ಹೇಗೆ ಹೋಗುತ್ತಾನೆಂಬುದನ್ನು ತಿಳಿಯೋಣ.

## ದೇವರ ವಿಮೋಚನಾ ಕಾರ್ಯವು ಯಾವುದೇ ಮಿತಿಗಳನ್ನು ತಿಳಿದಿಲ್ಲದ ಸ್ಥಿರವಾದ, ಅನಿಯಂತ್ರಿತ ಪ್ರೀತಿಯಿಂದ ಪ್ರೇರೇಪಿಸಲ್ಪಟ್ಟಿದೆ

ಹಳೆಯ ಒಡಂಬಡಿಕೆಯಲ್ಲಿ, ದೇವರ ಜನರು ದೇವರಿಂದ ದೂರವಾಗಿ ಅಲೆದಾಡಿದ್ದನ್ನು ಪುನಃ ಪುನಃ ಮತ್ತು ಮತ್ತೆ ಮತ್ತೆ ನೋಡುತ್ತೇವೆ ಮತ್ತು ದೇವರು ಅವರನ್ನು ತನ್ನ ಬಳಿಗೆ ಕರೆತರಲು ಪ್ರಯತ್ನಿಸುವ ಅನೇಕ ಮಾರ್ಗಗಳನ್ನು ನೋಡುತ್ತೇವೆ. ಅವರನ್ನು ಎಚ್ಚರಿಸಲು ಅವರನ್ನು ತಿದ್ದುಪಡಿಸಲು ಮತ್ತು ದೇವರ ಬಳಿಗೆ ತಿರುಗಿ ಕರೆತರಲು ಪ್ರವಾದಿಗಳನ್ನು ದೇವರು ಎಬ್ಬಿಸಿದ ಅನೇಕ

ಸಮಯಗಳಿವೆ. ಇತರ ಸಮಯಗಳಲ್ಲಿ, ಅವರನ್ನು ಹಿಂತಿರುಗಿ ಪಡೆಯುವ ಕ್ರಮದಲ್ಲಿ ಕಠಿಣ ಕಷ್ಟಗಳನ್ನು ಅಥವಾ ಸೆರೆವಾಸ ಅನುಭವಿಸುವಂತೆ ಆತನು ಅನುಮತಿಸಿದನು. ಆದಾಗ್ಯೂ ಇವೆಲ್ಲವುಗಳಲ್ಲಿ, ತನ್ನ ಜನರ ಮೇಲೆ ಅತ್ಯಂತ ಪ್ರೀತಿಯಿಂದ ದೇವರ ವಿಮೋಚನಾಕಾರ್ಯವು ಕೊಂಡೊಯ್ಯಲ್ಪಟ್ಟಿತ್ತು ಎಂಬುದನ್ನು ನೋಡುತ್ತೇವೆ. ನಾವು ಎರಡು ವಾಕ್ಯ ಭಾಗಗಳನ್ನು ಪರಿಗಣಿಸೋಣ.

**ಯೆರೆಮಿಯ 31:1-4**

**1 ಯೆಹೋವನು ಇಂತೆನ್ನುತ್ತಾನೆ–ಆ ಕಾಲದಲ್ಲಿ ನಾನು ಇಸ್ರಾಯೇಲಿನ ಸಕಲ ಗೋತ್ರಗಳವರಿಗೆ ದೇವರಾಗಿರುವೆನು. ಅವರು ನನಗೆ ಪ್ರಜೆಯಾಗಿರುವರು.**

**2 ಇದು ಯೆಹೋವನ ನುಡಿ–ಹತಶೇಷವಾದ ಜನಕ್ಕೆ ಅರಣ್ಯದಲ್ಲಿ ದಯೆ ದೊರೆಯುವದು– ಇಸ್ರಾಯೇಲು ವಿಶ್ರಾಂತಿಯನ್ನು ಹುಡುಕುವದಕ್ಕೆ ಹೋಗುವಾಗ ಯೆಹೋವನು ದೂರದಿಂದ ಬಂದು ಅದಕ್ಕೆ ದರ್ಶನಕೊಟ್ಟು ಹೀಗನ್ನುವನು.**

**3 ನಾನು ನಿನ್ನನ್ನು ಪ್ರೀತಿಸಿರುವುದು ಶಾಶ್ವತ ಪ್ರೇಮದಿಂದಲೇ. ಆದಕಾರಣ ನಿನ್ನನ್ನು ಮಮತೆಯಿಂದ ಸೆಳೆದುಕೊಂಡಿದ್ದೇನೆ.**

**4 ಇಸ್ರಾಯೇಲೆಂಬ ಯುವತಿಯೇ, ನಾನು ನಿನ್ನ ಹಾಳು ಪ್ರದೇಶಗಳನ್ನು ಪುನಃ ಕಟ್ಟುವೆನು. ಅವು ಕಟ್ಟಡಗಳಾಗುವವು. ನೀನು ಮತ್ತೆ ದಮ್ಮಡಿಗಳಿಂದ ವೈಭವಗೊಂಡು ವಿನೋದಪಡುವವರ ನಾಟ್ಯಗಳಲ್ಲಿ ಸೇರಿಕೊಳ್ಳುವಿ.**

ಪ್ರವಾದಿಯಾದ ಯೆರೆಮಿಯನ ಮೂಲಕವಾಗಿ ಬರಲಿರುವ ಬ್ಯಾಬಿಲೋನಿಯರ ಕೈಯಿಂದ ಸೆರೆಯಾಳು ಮತ್ತು ವಿಪತ್ತುಗಳ ಕುರಿತು ತನ್ನ ಜನರಿಗೆ ದೇವರು ಎಚ್ಚರಿಸಿದಾಗಲೂ, ದೇವರು ಅವರಿಗೆ ತನ್ನ ಪ್ರೀತಿಯ ಭರವಸೆಕೊಟ್ಟನು. ಆತನು ಮರುಭೂಮಿಯಲ್ಲಿ ಕೃಪೆಯನ್ನು ಪಡೆದುಕೊಂಡಂತಹ ಜನರು, ಶಾಶ್ವತ ಪ್ರೇಮದಿಂದಲೇ ತನ್ನ ಜನರನ್ನು ಪ್ರೀತಿಸಿದ್ದನ್ನು ಮತ್ತು ಅವರು ತಿರುಗಿ ನವೀಕರಿಸುವ ಮತ್ತು ಪುನಃ ಕಟ್ಟುವ ಭರವಸೆಯ ಕುರಿತು ಆತನು ಮಾತನಾಡುತ್ತಾನೆ.

**ಹೋಶೇಯ 14:1-7**

**1 ಇಸ್ರಾಯೇಲೇ, ನೀನು ಹಿಂದಿರುಗಿ ನಿನ್ನ ದೇವರಾದ ಯೆಹೋವನನ್ನು ಸೇರಿಕೋ ನಿನ್ನ ಅಪರಾಧದಿಂದಲೇ ನೀನು ಮುಗ್ಗರಿಸಿ ಬಿದ್ದಿ.**

**2 (ಪಶ್ಚಾತ್ತಾಪದ) ಮಾತುಗಳನ್ನು ತೆಗೆದುಕೊಂಡು ಯೆಹೋವನ ಬಳಿಗೆ ಹಿಂದಿರುಗಿ ಆತನಿಗೆ ನಮ್ಮ ಅಪರಾಧವನ್ನು ಸಂಪೂರ್ಣವಾಗಿ ನಿವಾರಣೆ ಮಾಡಿ (ನಮ್ಮಲ್ಲಿನ) ಒಳ್ಳೆಯದನ್ನು ಅಂಗೀಕರಿಸಿ ನಮ್ಮ ಸ್ತೋತ್ರಗಳೆಂಬ ಹೋರಿಗಳನ್ನು ಅರ್ಪಿಸುವೆವು.**

**[3] ಅಶ್ಶೂರವು ನಮ್ಮನ್ನು ರಕ್ಷಿಸುವದೆಂದು ನಂಬೆವು (ಐಗುಪ್ತದ) ಕುದುರೆಗಳನ್ನು ಹತ್ತೆವು. ನಮ್ಮ ಕೈಕೆಲಸದ ಬೊಂಬೆಗಳಿಗೆ ನೀವು ನಮ್ಮ ದೇವರುಗಳು ಎಂದು ಇನ್ನು ಹೇಳೆವು, ನೀನೇ ಅನಾಥರನ್ನು ಕರುಣಿಸುವಿ ಎಂಬದಾಗಿ ಅರಿಕೆ ಮಾಡಿಕೊಳ್ಳಿರಿ.**
**[4] ನಾನು ನನ್ನ ಜನರ ಭ್ರಷ್ಟತ್ವವನ್ನು ಪರಿಹರಿಸಿ ಅವರನ್ನು ಮನಃಪೂರ್ವಕವಾಗಿ ಪ್ರೀತಿಸುವೆನು. ನನ್ನ ಕೋಪವು ಅವರ ಕಡೆಯಿಂದ ತೊಲಗಿ ಹೋಯಿತು.**
**[5] ನಾನು ಇಸ್ರಾಯೇಲಿಗೆ ಇಬ್ಬನಿಯಂತಾಗುವೆನು, ಅದು ತಾವರೆಯಂತೆ ಒಡೆಯುವದು ಲೆಬನೋನಿನ (ದೇವದಾರುಗಳು) ಹಾಗೆ ಬೇರು ಬಿಟ್ಟುಕೊಳ್ಳುವದು.**
**[6] ಅದರ ರೆಂಬೆಗಳು ಹರಡುವವು, ಅದರ ಅಂದವು ಒಲೀವ ಮರದಂತೆ ಕಂಗೊಳಿಸುವದು, ಅದರ ಪರಿಮಳವು ಲೆಬನೋನಿನ ಹಾಗೆ ಮನೋಹರವಾಗಿರುವದು.**
**[7] ಅದರ ನೆರಳನ್ನು ಆಶ್ರಯಿಸಿರುವವರು ಹಿಂದಿರುಗಿ ಬೆಳೆಯನ್ನು ಬೆಳೆದು ದ್ರಾಕ್ಷೆಯಂತೆ ಪಲ್ಲವಿಸುವರು; ಅದರ ಕೀರ್ತಿಯು ಲೆಬನೋನಿನ ದ್ರಾಕ್ಷಾರಸದ ಹಾಗೆ ಸ್ವಾರಸ್ಯವಾಗಿರುವದು.**

ಇಸ್ರಾಯೇಲು ಒಂದು ದೇಶದಂತೆ ಸಮೃದ್ಧಿಯಾಗುತ್ತಿರುವ ಸಮಯದಲ್ಲಿ ಅವಧಿಯಲ್ಲಿ ಹೋಶೇಯನು ಪ್ರವಾದಿಸಿದನು. ಆದರೆ ಜನರು ಆತ್ಮೀಕವಾಗಿ ದಾರಿತಪ್ಪಿದ್ದರು ಮತ್ತು ಕರ್ತನಿಂದ ದೂರವಾಗಿ ಹೋಗಿದ್ದರು. ಇಲ್ಲಿ ಮತ್ತೆ ದೇವರ ಜನರು ಆತನ ಬಳಿಗೆ ಹಿಂತಿರುಗಿ ಬರಬೇಕೆಂದು ದೇವರು ಆಹ್ವಾನಿಸುವಂತಹ ಸಂದೇಶವನ್ನು ಹೋಶೇಯನು ಬಿಡುಗಡೆ ಮಾಡುವುದನ್ನು ನಾವು ನೋಡುತ್ತೇವೆ. ಆತನು ಉಚಿತವಾಗಿ ಅವರನ್ನು ಪ್ರೀತಿಸುತ್ತಾನೆ, ಹಿಂಜಾರಿ ಹೋದವರನ್ನು ಸ್ವಸ್ಥಪಡಿಸುತ್ತಾನೆ ಮತ್ತು ಅವರನ್ನು ಪುನಃಸ್ಥಾಪಿಸುತ್ತಾನೆಂಬ ಭರವಸೆ ನೀಡುತ್ತಾನೆ.

ದೇವರ ವಿಮೋಚನೆಯ ಶ್ರೇಷ್ಟ ಯೋಜನೆಯು ದೇವರ ಅನಿಯಂತ್ರಿತ ಪ್ರೀತಿಯಿಂದ ಪ್ರೇರೇಪಿಸಲ್ಪಟ್ಟಿದೆ.

**ರೋಮಾಪುರದವರಿಗೆ 5:8**
**ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ.**

ಪ್ರೀತಿ, ಆತನ ಜನರಿಗಾಗಿರುವ ದೇವರ ಪ್ರೀತಿಯು ಅವರನ್ನು ಉಜ್ಜೀವನಗೊಳಿಸಲು, ಪುನಃಕಟ್ಟಲು ಮತ್ತು ಪುನಃಸ್ಥಾಪಿಸಲು ಮತ್ತು ವಿಮೋಚಿಸಲು ದೇವರಿಗೆ ಪ್ರಮುಖ ಪ್ರೇರಕವಾಗಿದೆ. ಆತನು ಶಾಶ್ವತವಾದ ಪ್ರೇಮದೊಡನೆ ಪ್ರೀತಿಸುತ್ತಾನೆ. ಆತನು ಉಚಿತವಾಗಿ ಪ್ರೀತಿಸುತ್ತಾನೆ. ನಮಗಾಗಿರುವ ದೇವರ ಪ್ರೀತಿಯಲ್ಲಿ ನಾವು ಸುರಕ್ಷಿತರಾಗಿರುವುದನ್ನು ಕಲಿಯಬೇಕು. ಕೆಲವು ಸಮಯಗಳಲ್ಲಿ ನಮ್ಮನ್ನು ನಾವೇ ಗುರುತಿಸಿಕೊಳ್ಳುವಂತಹ ಪರಿಸ್ಥಿತಿಗಳು ನಮ್ಮ

ತಪ್ಪು ಮಾಡುವುದರ ಫಲಿತಾಂಶವಾಗಿರುತ್ತವೆ. ನಾವು ದೇವರಿಂದ ದಾರಿತಪ್ಪಿದೆವು ಮತ್ತು ಅಲೆದಾಡಿದೆವು. ನಾವು ದಂಗೆ ಎದ್ದವರಾದೆವು ಮತ್ತು ಪಾಪದಲ್ಲಿ ಜೀವಿಸಿದೆವು. ನಮ್ಮ ಸ್ವಂತ ಜೀವಿತಗಳನ್ನು ನಾಶಪಡಿಸಿಕೊಂಡೆವು. ಆದರೆ ಈಗ ದೇವರ ಕಡೆ ತಿರುಗಿಕೊಂಡು ನಮ್ಮ ಪರಿಸ್ಥಿತಿಯಿಂದ ನಮ್ಮನ್ನು ವಿಮೋಚಿಸಲು ಆತನನ್ನು ನೋಡುತ್ತೇವೆ. ನಾವು ಇದನ್ನು ಮಾಡಲು ಕಾರಣವೇನೆಂದರೆ, ಆತನು ನಮ್ಮನ್ನು ಇನ್ನೂ ಪ್ರೀತಿಸುತ್ತಾನೆ ಎಂಬುದನ್ನು ತಿಳಿದಿರುವುದರಿಂದಲೇ ಆಗಿದೆ. ನಾವು ಎಷ್ಟರ ಮಟ್ಟಿಗೆ ಅಸ್ತವ್ಯಸ್ತ ಮಾಡಿಕೊಂಡಿದ್ದೇವೆಂಬುದನ್ನು ಮತ್ತು ಎಷ್ಟು ಕೆಟ್ಟ ವಿಷಯಗಳು ಆಗಿರಬಹುದು ಎಂಬುದನ್ನು ಲೆಕ್ಕಿಸದೇ ಆತನು ನಮ್ಮನ್ನು ಪ್ರೀತಿಸುತ್ತಾನೆ. ನಮಗಾಗಿರುವ ಆತನ ಪ್ರೀತಿಯಿಂದ ನಮ್ಮನ್ನು ಆತನು ವಿಮೋಚಿಸುತ್ತಾನೆ. *''ನಾವು ಉಳಿದಿರುವದು ಯೆಹೋವನ ಕರುಣೆಯೇ. ಆತನ ಕೃಪಾವರಗಳು ನಿಂತುಹೋಗವು. ದಿನದಿನವು ಹೊಸ ಹೊಸದಾಗಿ ಒದಗುತ್ತವೆ. ನಿನ್ನ ಸತ್ಯಸಂಧತೆಯು ದೊಡ್ಡದು ಯೆಹೋವನೇ ನನ್ನ ಪಾಲು. ಆದಕಾರಣ ಆತನನ್ನು ನಿರೀಕ್ಷಿಸುವೆನು ಎಂದು ನನ್ನ ಅಂತರಾತ್ಮವು ಅಂದುಕೊಳ್ಳುತ್ತದೆ. ಯೆಹೋವನು ತನ್ನನ್ನುನಿರೀಕ್ಷಿಸುವವರಿಗೂ ಹುಡುಕುವವರಿಗೂ ಮಹೋಪಕಾರಿಯಾಗಿದ್ದಾನೆ''* (ಪ್ರಲಾಪಗಳು 3:22–25).

ಅದೇ ರೀತಿಯಾಗಿ, ನಮ್ಮ ಸುತ್ತ ಮುತ್ತಲಿರುವವರ ಜೀವಿತಗಳಲ್ಲಿ ಆತನ ವಿಮೋಚನೆಯ ಕಾರ್ಯದಲ್ಲಿ ನಾವು ದೇವರೊಡನೆ ಜೊತೆ ಕೆಲಸದವರಾಗಿರುವಾಗ, ದೇವರಂಥ ಪ್ರೀತಿಯಲ್ಲಿ ನಡೆಯುವುದನ್ನು ನಾವು ಕಲಿಯಬೇಕು. ನಾವು ಅವರೊಂದಿಗೆ ಅಪರಿಮಿತವಾದ, ಶಾಶ್ವತವಾದ, ಉಚಿತವಾಗಿ ಕೊಡಲ್ಪಟ್ಟ ದೇವರ ಪ್ರೀತಿಯಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕು. ಖಂಡಿತವಾಗಿಯೂ ನಾವು ಇದನ್ನು ಮಾಡಲು ಸಾಧ್ಯವಿಲ್ಲ. ದೇವರ ಪ್ರೀತಿಯಲ್ಲಿ ನಾವು ನಡೆಯಲು ಆತ್ಮನಿಂದ ಅಧಿಕಾರ ಹೊಂದಿದ್ದೇವೆ (ರೋಮಾಪುರದವರಿಗೆ 5:5; ಗಲಾತ್ಯದವರಿಗೆ 5:22). ಇಂತಹ ಬಗೆಯ ಪ್ರೀತಿಯು ನಮ್ಮ ಹೃದಯದಲ್ಲಿ ಕ್ಷಮಾಪಣೆ ಹುಟ್ಟಿಸುತ್ತದೆ, ತಾಳ್ಮೆಯನ್ನು ಬಲಪಡಿಸುತ್ತದೆ, ನಮ್ಮ ಸುತ್ತಲಿರುವ ಜನರಲ್ಲಿ ದೇವರ ವಿಮೋಚನೆಯ ಕಾರ್ಯವು ನಡೆಯುವುದನ್ನು ನೋಡುವ ಕಡೆಗೆ ನಾವು ಶ್ರಮಿಸುತ್ತಿರುವಾಗ ದಯೆಯನ್ನು ತೋರಿಸುತ್ತದೆ (1 ಕೊರಿಂಥದವರಿಗೆ 13:4–8).

## ದೇವರ ವಿಮೋಚನಾ ಕಾರ್ಯವು ಅಪ್ರಾಕೃತವಾದದ್ದು, ಆದರೆ ನಮ್ಮ ಜೊತೆ-ಪರಿಶ್ರಮ ಒಳಗೊಂಡಿದೆ

ದೇವರು ಸರ್ವಶಕ್ತನು, ಎಲ್ಲಾ ಶಕ್ತಿ ಶಾಲಿ ಮತ್ತು ಆತನಿಗೆ ಅಸಾಧ್ಯವಾದದ್ದು ಏನು ಇಲ್ಲ. ಆತನು ಅತ್ಯಂತ ಹತಾಶ ಪರಿಸ್ಥಿತಿಗಳನ್ನು ತಿರುಗಿಸಲು ಶಕ್ತನಾಗಿದ್ದಾನೆ.

ಸಂಪೂರ್ಣವಾಗಿ ಹಾಳಾಗಿರುವುದನ್ನು ಆತನು ಪುನಃಕಟ್ಟಲು ಮತ್ತು ಪುನಃ ಸ್ಥಾಪಿಸಲು ಶಕ್ತನಾಗಿದ್ದಾನೆ. ನಮ್ಮ ಅತ್ಯಂತ ಗಂಭೀರವಾದ ತಪ್ಪುಗಳಿಗಿಂತ ಆತನು ದೊಡ್ಡವನಾಗಿದ್ದಾನೆ. ಕಳೆದು ಹೋದ ಸಮಯಗಳಿಗಿಂತ ಆತನು ದೊಡ್ಡವನಾಗಿದ್ದಾನೆ ಮತ್ತು ಸಮಯವನ್ನು ಪುನಃ ಪಡೆಯಲು ನಮಗೆ ಸಹಾಯ ಮಾಡುತ್ತಾನೆ. ಆತನ ವಿಮೋಚನೆಯ ಕಾರ್ಯದಲ್ಲಿ ದೇವರ ಅಪ್ರಾಕೃತ ಬಲವು ವಿಷಯಗಳನ್ನು ತಿರುಗಿಸುತ್ತದೆ. ದೇವರು ನಮ್ಮನ್ನು ಮತ್ತು ನಮ್ಮ ಪರಿಸ್ಥಿತಿಗಳನ್ನು ವಿಮೋಚಿಸಲು ಸಂಧಿಸುತ್ತಾನೆ. ಆದರೆ ನಾವು ಪ್ರತಿಕ್ರಿಯೆ ತೋರಬೇಕು ಮತ್ತು ನಮ್ಮ ಜೀವಿತದಲ್ಲಿ ಆತನ ವಿಮೋಚನಾ ಕಾರ್ಯವನ್ನು ಪಡೆಯಲು ಆತನೊಡನೆ ಜೊತೆ-ಕೆಲಸದವರಾಗಿರಬೇಕು. ಉದಾಹರಣೆಗಾಗಿ ದೇವರ ವಿಮೋಚನೆಯ ಕಾರ್ಯವನ್ನು ನಾವು ಪಶ್ಚಾತ್ತಾಪ ಪಡುವಾಗ, ನಂಬಿಕೆ ಅಭ್ಯಸಿಸುವಾಗ, ಮತ್ತು ಒಂದು ಅಥವಾ ಅನೇಕ ಕ್ಷೇತ್ರಗಳು ನಮ್ಮ ಜೀವಿತದಲ್ಲಿ ವಿಮೋಚನೆಗೊಂಡದ್ದನ್ನು ಮತ್ತು ಪುನಃಸ್ಥಾಪಿಸಲ್ಪಡುವುದನ್ನು ನೋಡುವ ಕಡೆಗೆ ತಾಳ್ಮೆಯಲ್ಲಿ ನಡೆಯುವುದನ್ನು ಪಡೆಯುತ್ತೇವೆ.

## *ಪಶ್ಚಾತ್ತಾಪ*

ಪಶ್ಚಾತ್ತಾಪವು ನಿಜವಾಗಿ ಬದಲಾದ ಮನಸ್ಸನ್ನು ಹೊಂದಿರುವುದಾಗಿದೆ. ಇದರ ಅರ್ಥವು ನಾನು ಮೊದಲು ಒಂದು ನಿರ್ದಿಷ್ಟ ರೀತಿಯಲ್ಲಿ ಆಲೋಚಿಸಿದಾಗಲೂ, ಈಗ ನಾನು ನನ್ನ ಹಿಂದಿನ ಆಲೋಚನೆಗೆ ಸಂಪೂರ್ಣವಾಗಿ ಹೊಂದಿಕೆಯಾಗುವ ರೀತಿಯಲ್ಲಿ ಯೋಚಿಸುತ್ತೇನೆ. ಈ ಬದಲಾವಣೆಯು ಸಂಪೂರ್ಣ ವ್ಯತಿರಿಕ್ತವಾಗಿದೆ. ಇದು ಹಿಂದಿನ ಆಲೋಚನಾ ವಿಧಾನದ ನಿಖರವಾದ ವಿರುದ್ಧವಾಗಿದೆ. ಪಶ್ಚಾತ್ತಾಪವು ಮನಸ್ಸಿನ ಬದಲಾವಣೆಯಾಗಿದ್ದು ಅದು ಹಿಂದಿನ ಜೀವನ ವಿಧಾನದಿಂದ ಸಂಪೂರ್ಣವಾಗಿ ವಿಭಿನ್ನವಾದದ್ದಕ್ಕೆ ತಿರುಗಿಸುವಂತದ್ದಾಗಿರುತ್ತದೆ. ನಮ್ಮ ಆಲೋಚನೆಯಲ್ಲಿನ ಬದಲಾವಣೆಯು, ನಮ್ಮ ಕ್ರಿಯೆಯಲ್ಲಿ, ನಮ್ಮ ಮಾತುಗಳಲ್ಲಿ ಮತ್ತು ನಮ್ಮ ಪ್ರತಿಕ್ರಿಯೆಗಳಲ್ಲಿ ಮತ್ತು ನಮ್ಮ ಹಿಂದಿನ ಮನಸ್ಸಿನ ಸ್ಥಿತಿಯ ಅಧೀನದಲ್ಲಿ ನಾವು ಮಾಡುತ್ತಿದ್ದವುಗಳನ್ನು ಬದಲಾಯಿಸುವುದರ ಫಲಿತಾಂಶ ನೀಡುತ್ತದೆ.

ಆತನ ಒಳ್ಳೆಯತನದ ಮೂಲಕವಾಗಿ ಪಶ್ಚಾತ್ತಾಪದ ಸ್ಥಳಕ್ಕೆ ದೇವರು ನಮ್ಮನ್ನು ಸೆಳೆಯುತ್ತಾನೆ. *''ಆತನ ಅಪಾರವಾದ ದಯಾ ಸಹನ ದೀರ್ಘಶಾಂತಿಗಳನ್ನು ಅಸಡ್ಡೆ ಮಾಡುತ್ತೀಯಾ? ಮನಸ್ಸನ್ನು ಬೇರೆಮಾಡಿಕೊಳ್ಳುವುದಕ್ಕೆ ದೇವರ ಉಪಕಾರವು ನಿನ್ನನ್ನು ಪ್ರೇರಿಸುತ್ತದೆಂಬದು ನಿನಗೆ ಗೊತ್ತಿಲ್ಲವೇ?''* (ರೋಮಾಪುರದವರಿಗೆ 2:4).

ಪಶ್ಚಾತ್ತಾಪ ಪಡಲು ಮತ್ತು ಪಶ್ಚಾತ್ತಾಪದಿಂದ ತಂದಂತಹ ಬದಲಾವಣೆಯೊಡನೆ ಹಿಂಬಾಲಿಸಲು ನಮಗೆ ಇಷ್ಟವಿಲ್ಲದಿರುವುದಾದರೆ, ಇದು ದೇವರ ಅತ್ಯದ್ಭುತಕರವಾದ ವಿಮೋಚನಾಕಾರ್ಯ ಅನುಭವಿಸಲು ನಮಗೆ ಅಡ್ಡಿಯನ್ನುಂಟು ಮಾಡುತ್ತದೆ.

## *ನಂಬಿಕೆ*

ನಮ್ಮನ್ನು ವಿಮೋಚಿಸಲು ಆತನು ಮಾಡುವುದರಲ್ಲಿ ನಾವು ನಂಬಿಕೆಯಿಡಬೇಕು. ಗಂಭೀರತೆ, ಹತಾಶೆ ಮತ್ತು ಪರಿಸ್ಥಿತಿಯ ಹತಾಶತೆ ನೈಜವಾಗಿದ್ದರೂ ನಮ್ಮ ವಿಮೋಚಕನಲ್ಲಿ ನಮ್ಮ ನಂಬಿಕೆಯನ್ನು ದುರ್ಬಲಗೊಳಿಸಬಾರದು. ನಮ್ಮ ಪರಿಸ್ಥಿತಿಗಳ ಗುರುತ್ವಾಕರ್ಷಣೆ ಮತ್ತು ಸಂಕೀರ್ಣತೆಗಿಂತ ದೇವರು ದೊಡ್ಡವನಾಗಿದ್ದಾನೆ. ನಾವು ವ್ಯರ್ಥಮಾಡಿದ ಸಮಯಕ್ಕಿಂತಲೂ ದೇವರು ದೊಡ್ಡವನಾಗಿದ್ದಾನೆ ಮತ್ತು ಅದನ್ನು ಪುನಃ ಸ್ಥಾಪಿಸಲು ಶಕ್ತನಾಗಿದ್ದಾನೆ.

**ಕೀರ್ತನೆಗಳು 27:13**
**ಜೀವಲೋಕದಲ್ಲಿಯೇ ಯೆಹೋವನ ದಯೆಯನ್ನು ಅನುಭವಿಸುವೆನೆಂದು ದೃಢವಾಗಿ ನಂಬಿದ್ದೇನೆ.**

ನಮ್ಮ ಜೀವಿತಗಳಲ್ಲಿ ದೇವರು ತರಲು ಅಪೇಕ್ಷಿಸುವ ವಿಮೋಚನಾಕಾರ್ಯದ ಸಂಪೂರ್ಣತೆಗೆ ನಾವು ನಂಬಿಕೆಯಿಂದ ಪ್ರಯಾಣಿಸುತ್ತೇವೆ. ನಂಬಿಕೆ ನಿಷ್ಕ್ರಿಯವಲ್ಲ. ವಿಷಯಗಳು ವಿಮೋಚಿಸಲ್ಪಡುವುದು ಮತ್ತು ಪುನಃ ಸ್ಥಾಪಿಸಲ್ಪಡುವುದನ್ನು ನೋಡಲು ನಾವು ಏನು ಮಾಡಬೇಕೆಂಬುದಾಗಿ ದೇವರು ಬಯಸುತ್ತಾನೆಂಬುದನ್ನು ಮಾಡುವದೇ ನಂಬಿಕೆಯ ಅರ್ಥವಾಗಿದೆ. ಉದಾಹರಣೆಗೆ ನಾವು ಹಣಕಾಸಿನಲ್ಲಿ ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿದ್ದರೆ ಸಾಲದಲ್ಲಿ ಅಧಿಕವಾದದ್ದನ್ನು ಕಳೆದುಕೊಂಡಿದ್ದರೆ ಮತ್ತು ಇತರ ಹಣಕಾಸಿನ ಮುನ್ಸೂಚನೆಗಳು ಇರುವಾಗ ನಮ್ಮ ಎಲ್ಲಾ ತೊಂದರೆಗಳಿಂದ ವಿಮೋಚಿಸುವಾತನಾದ ದೇವರನ್ನು ನಾವು ನೋಡುತ್ತೇವೆ. ಆತನ ವಿಮೋಚನಾ ಕಾರ್ಯದಿಂದ ಇಂತಹ ಹಣಕಾಸಿನ ತೊಂದರೆಗಳಿಂದ ಸಂಪೂರ್ಣವಾಗಿ ನಮ್ಮನ್ನು ನಾವೇ ಬಿಡುಗಡೆಗೊಂಡಿರುವುದನ್ನು ನಂಬಿಕೆಯಿಂದ ನೋಡಬಹುದು. ಆಮೇಲೆ ನಾವು ಮಾಡಬೇಕಾದದ್ದನ್ನು ಕ್ರಮೇಣ ಮಾಡಲು ಪ್ರಯತ್ನಿಸಬಹುದು. ನಾವು ಒಳ್ಳೆಯ ಉದ್ಯೋಗಕ್ಕಾಗಿ ದೇವರನ್ನು ನಂಬುವುದರಿಂದ ನಮ್ಮನ್ನು ಹೊರಗೆ ತರುವ ದೇವರ ಒಂದು ಮಾರ್ಗವಾಗಿರುತ್ತದೆ. ಆಮೇಲೆ ನಮ್ಮ ಸಾಲಗಳನ್ನು ತೀರಿಸಲು ಪ್ರಾರಂಭಿಸಬೇಕು. ಆಮೇಲೆ ದೇವರ ಆಶೀರ್ವಾದದ ಹಸ್ತವು ನಮ್ಮನ್ನು ಹೇರಳವಾಗಿ ಮೇಲೆತ್ತುವುದನ್ನು ನೋಡಬಹುದು. ಈ

ಸಂಪೂರ್ಣ ಪ್ರಕ್ರಿಯೆಯ ಉದ್ದಕ್ಕೂ ನಮ್ಮ ಹಣಕಾಸಿನಲ್ಲಿ ಸಂಪೂರ್ಣ ವಿಮೋಚನೆ ಕಾರ್ಯವನ್ನು ನೋಡಲು ಆತನನ್ನು ನಾವು ನಂಬಿಕೆಯಿಂದ ನೋಡಬೇಕು.

ದಾವೀದನು ಯುದ್ಧದಲ್ಲಿ ನಿರತನಾದ ನಂತರ ಚಿಕ್ಲಗ್‌ನಗರಕ್ಕೆ ಹಿಂತಿರುಗಿದಾಗ ಅಮಾಲೇಕ್ಯರು ಚಿಕ್ಲಗ್‌ನ್ನು ಆಕ್ರಮಣ ಮಾಡಿದ್ದನ್ನು ಮತ್ತು ದಾವೀದನ ಹೆಂಡತಿಯರನ್ನು ಮತ್ತು ಅವನ ಮನುಷ್ಯರನ್ನು ಸೆರೆಯಾಳುಗಳಾಗಿ ತೆಗೆದುಕೊಂಡು ಹೋಗಿದ್ದನ್ನು ಕಂಡನು (1 ಸಮುವೇಲನ 30:1,2). ದಾವೀದನು ತನ್ನನ್ನು ಕರ್ತನಲ್ಲಿ ಪ್ರೋತ್ಸಾಹ ಪಡಿಸಿಕೊಂಡು ಪ್ರಾರ್ಥಿಸಿದನು ಮತ್ತು ಕರ್ತನ ಮನಸ್ಸನ್ನು ಹುಡುಕಿದನು. ದೇವರು ದಾವೀದನೊಂದಿಗೆ ಮಾತನಾಡಿದನು ಮತ್ತು ಅಮಾಲೇಕ್ಯರನ್ನು ಬೆನ್ನಟ್ಟಲು ಉಪದೇಶಿಸಿದನು. ದಾವೀದನು ಎಲ್ಲವನ್ನು ಮರಳಿಪಡೆಯುವುದಾಗಿ ವಾಗ್ದಾನ ಹೊಂದಿದನು (1 ಸಮುವೇಲನು 30:8). ಆದರೆ ದಾವೀದನು ಎದ್ದೇಳಲು ಮತ್ತು ವೈರಿಯನ್ನು ಬೆನ್ನಟ್ಟಲು, ನಂಬಿಕೆ ಮತ್ತು ಪ್ರೋತ್ಸಾಹ ತೆಗೆದುಕೊಂಡಿತ್ತು. ಇಬ್ರಿಯರಿಗೆ ಬರೆದ ಪುಸ್ತಕವು ಹೇಳುವಂತೆ ನಂಬಿಕೆಯಿಂದ *''ನಿರ್ಬಲರಾಗಿದ್ದು ಬಲಿಷ್ಟರಾದರು, ಯುದ್ಧದಲ್ಲಿ ಪರಾಕ್ರಮ ಶಾಲಿಗಳಾದರು''* (ಇಬ್ರಿಯರಿಗೆ 11:34). ವೈರಿಗಳನ್ನು ಓಡಿಸಿಬಿಟ್ಟರು ಮತ್ತು ನಿಜಕ್ಕೂ ಎಲ್ಲವನ್ನು ಮರಳಿ ಪಡೆದುಕೊಂಡರು.

### *ತಾಳ್ಮೆ*

ದೇವರಲ್ಲಿನ ನಂಬಿಕೆ ಯಾವಾಗಲೂ ತಾಳ್ಮೆಯೊಂದಿಗೆ ಸೇರಿಕೊಳ್ಳಬೇಕು. ತಾಳ್ಮೆಯು ಸಮಯ ಕಳೆದಂತೆ ಅಗತ್ಯವಾಗಿರುತ್ತದೆ. ಸಮಯದ ಮೂಲಕ ನಾವು ಏನು ಮಾಡಬೇಕೆಂಬುದನ್ನು ಮಾಡುವಂತಹ ರೀತಿಯಲ್ಲಿ ಇರಿಸುವುದು ತಾಳ್ಮೆಯ ಸಾಮರ್ಥ್ಯವಾಗಿದೆ. ನಮ್ಮ ಜೀವಿತಗಳಲ್ಲಿ ದೇವರ ವಿಮೋಚನಾ ಕಾರ್ಯಗಳು ಪ್ರಾರಂಭಗಳು ತೆರೆದುಕೊಳ್ಳುವಾಗ, ಸಮಯದಿಂದ ಸಮಯಕ್ಕೆ ಆತನೊಡನೆ ತಾಳ್ಮೆಯೊಂದಿಗೆ ನಾವು ನಡೆದುಕೊಳ್ಳಬೇಕು. ನಮ್ಮಲ್ಲಿ ಹಲವರು ತತ್‌ಕ್ಷಣದ ಕೆಲಸವನ್ನು ಬಯಸುತ್ತಾರೆ. ಹೌದು, ''ತಕ್ಷಣವೇ'' ಸಂಗತಿಗಳು ಸಂಪೂರ್ಣವಾಗಿ ಬದಲಾಗುವ ಸಮಯಗಳು ಇವೆ. ಇದು ಅದ್ಭುತಕರವಾದದು ಮತ್ತು ಇದು ಜರುಗುವಾಗ ಸಂತೋಷ ಭರಿತವಾಗಿರುತ್ತದೆ. ಆದರೆ ತುಂಬಾ ದೇವರ ವಿಮೋಚನಾ ಕಾರ್ಯದ ಕೆಲಸವು ಒಂದು ನಿರ್ದಿಷ್ಟ ಅವಧಿಯಲ್ಲಿ ನಡೆಯುತ್ತದೆ ಮತ್ತು ಕಾರ್ಯವು ಸಂಪೂರ್ಣಗೊಂಡಿದ್ದನ್ನು ನೋಡಲು ನಂಬಿಕೆಯಲ್ಲಿ ಆತನೊಡನೆ ತಾಳ್ಮೆಯಲ್ಲಿ ನಾವು ನಡೆಯಬೇಕು. ಆಗಾಗ್ಗೆ ದೇವರ ಕುರಿತು

ಅಧಿಕವಾಗಿ ಕಲಿಯುತ್ತೇವೆ ಮತ್ತು ''ತತ್‌ಕ್ಷಣದ'' ಮೂಲಕವಾಗಿರುವುದಕ್ಕಿಂತ ಬದಲಾಗಿ ನಮ್ಮ ಪ್ರಯಾಣವನ್ನು ನಾವು ಹಾದು ಹೋಗುವಾಗ ನಮ್ಮನ್ನು ಬಲಪಡಿಸಿಕೊಳ್ಳಬೇಕು.

ಕೀರ್ತನೆಗಾರನು ತನ್ನನ್ನು ಭಯಾನಕ ಗುಂಡಿಯಲ್ಲಿ ಗುರುತಿಸಿಕೊಂಡನು. ಆದಾಗ್ಯೂ ತನ್ನ ಹೃದಯದಲ್ಲಿ ತಾಳ್ಮೆ ಮತ್ತು ನಂಬಿಕೆಯಿಂದ ಅವನು ನೋಡಿದನು.

**ಕೀರ್ತನೆಗಳು 40:1-3**

**[1] ನಾನು ಯೆಹೋವನಿಗೋಸ್ಕರ ನಿರೀಕ್ಷಿಸಿಯೇ ನಿರೀಕ್ಷಿಸಿದೆನು. ಆತನು ನನ್ನ ಮೊರೆಗೆ ಕಿವಿಗೊಟ್ಟು ಲಕ್ಷಿಸಿದನು.**

**[2] ನನ್ನನ್ನು ನಾಶನದ ಗುಂಡಿಯೊಳಗಿಂದ ಎತ್ತಿದನು. ಕೆಸರಿನೊಳಗಿಂದ ನನ್ನನ್ನು ತೆಗೆದು ಬಂಡೆಯ ಮೇಲೆ ನಿಲ್ಲಿಸಿ ನಾನು ದೃಢವಾಗಿ ಹೆಜ್ಜೆಯಿಡುವಂತೆ ಮಾಡಿದನು.**

**[3] ಆತನು ನನ್ನ ಬಾಯಲ್ಲಿ ನೂತನ ಕೀರ್ತನೆಯನ್ನು ಹುಟ್ಟಿಸಿದ್ದಾನೆ ಅದು ನಮ್ಮ ದೇವರ ಸ್ತೋತ್ರವೇ. ಆತನ ಮಹತ್ಕಾರ್ಯಗಳನ್ನು ನೋಡಿದ ಅನೇಕರು ಭಯಭಕ್ತಿಯುಳ್ಳವರಾಗಿ ಯೆಹೋವನಲ್ಲಿ ನಂಬಿಕೆಯಿಡುವರು.**

ನಮ್ಮ ವಿಮೋಚನೆಗೆ ದೇವರೊಡನೆ ತಾಳ್ಮೆಯೊಂದಿಗೆ ಪ್ರಯಾಣಿಸುವ ಭಾಗವಾಗಿ ಹಿಂದಿನದ್ದನ್ನು ಬಿಟ್ಟುಕೊಡುವದರಲ್ಲಿ ಮನಸ್ಸು ಚಿತ್ತವುಳ್ಳವರಾಗಿರಬೇಕು. ಆತನ ವಿಮೋಚನೆಯನ್ನು ಅನುಭವಿಸಲು ಹಿಂದಿನದನ್ನು ಬಿಟ್ಟುಕೊಡಲು ನಾವು ಸಿದ್ಧರಿರಬೇಕು. ಇಸ್ರಾಯೇಲ್ ಜನರನ್ನು ಐಗುಪ್ತದಿಂದ ಹೊರತಂದು ವಾಗ್ದಾನ ಮಾಡಲ್ಪಟ್ಟ ದೇಶಕ್ಕೆ ಅವರನ್ನು ಕರೆದುಕೊಂಡು ಹೋಗುವಂತಹ ಉದಾಹರಣೆಯನ್ನು ಪರಿಗಣಿಸಿರಿ. ಆತನು ಅವರಿಗೆ ಅದ್ಭುತಕರವಾದ ಕೆಲವು ವಾಗ್ದಾನಗಳನ್ನು ಮಾಡಿದನು.

**ವಿಮೋಚನಕಾಂಡ 6:6-8**

**[6] ನಾನು ಮಾಡಿದ ವಾಗ್ದಾನವನ್ನು ನೆನಸಿಕೊಂಡೆನು. ಆದದರಿಂದ ನೀನು ಇಸ್ರಾಯೇಲ್ಯರಿಗೆ ನನ್ನ ಹೆಸರಿನಲ್ಲಿ ಹೇಳಬೇಕಾದದ್ದೇನಂದರೆ—ನಾನು ಯೆಹೋವನು; ಐಗುಪ್ತ್ಯರು ನಿಮ್ಮಿಂದ ಮಾಡಿಸುವ ಬಿಟ್ಟೀಕೆಲಸಗಳನ್ನು ನಾನು ತಪ್ಪಿಸಿ ಅವರಲ್ಲಿ ನಿಮಗಿರುವ ದಾಸತ್ವವನ್ನು ತೊಲಗಿಸಿ ನನ್ನ ಕೈ ಚಾಚಿ ಅವರಿಗೆ ಮಹಾಶಿಕ್ಷೆಗಳನ್ನು ವಿಧಿಸಿ ನಿಮ್ಮನ್ನು ರಕ್ಷಿಸುವೆನು.**

**[7] ನಾನು ನಿಮ್ಮನ್ನು ನನ್ನ ಪ್ರಜೆಯೆಂದು ಆರಿಸಿಕೊಂಡು ನಿಮಗೆ ದೇವರಾಗಿರುವೆನು. ಐಗುಪ್ತ್ಯರು ಮಾಡಿಸುವ ಬಿಟ್ಟೀ ಸೇವೆಯನ್ನು ನಾನು ನಿಮಗೆ ತಪ್ಪಿಸಿದಾಗ ಯೆಹೋವನು ಎಂಬ ನಾನೇ ನಿಮ್ಮ ದೇವರಾಗಿದ್ದೇನೆಂಬದು ನಿಮಗೆ ತಿಳಿದುಬರುವದು.**

**8 ಇದಲ್ಲದೆ ಅಬ್ರಹಾಮ ಇಸಾಕ ಯಾಕೋಬರಿಗೆ ಕೊಡುವೆನೆಂದು ನಾನು ಪ್ರಮಾಣವಾಗಿ ಹೇಳಿದ ದೇಶಕ್ಕೆ ನಿಮ್ಮನ್ನು ಸೇರಿಸಿ ಅದನ್ನು ನಿಮಗೆ ಸ್ವದೇಶವನ್ನಾಗಿ ಕೊಡುವೆನು; ಯೆಹೋವನೇ ನಾನು; ಹೀಗೆ ಅವರಿಗೆ ಹೇಳು ಅಂದನು.**

**ಯಾಜಕಕಾಂಡ 26:13**
**ನೀವು ಐಗುಪ್ತ್ಯರಿಗೆ ದಾಸರಾಗಿರಬಾರದೆಂದು ನಿಮ್ಮನ್ನು ಅವರ ದೇಶದೊಳಗಿಂದ ಬರಮಾಡಿದ ನಿಮ್ಮ ದೇವರಾದ ಯೆಹೋವನು ನಾನೇ ನಿಮ್ಮನ್ನು ಕುಗ್ಗಿಸಿದ ನೊಗವನ್ನು ಮುರಿದು ನೀವು ನೆಟ್ಟಗೆ ನಿಂತು ನಡೆಯುವಂತೆ ಮಾಡಿದೆನಲ್ಲವೇ.**

ದೇವರು ತನ್ನ ಜನರನ್ನು ವಾಗ್ದಾನ ದೇಶಕ್ಕೆ ಕರೆದೊಯ್ಯುತ್ತಿದ್ದರೂ ದಾರಿಯುದ್ದಕ್ಕೂ ಅವರು ಐಗುಪ್ತ್ಯದ ಬಗ್ಗೆ ಹಂಬಲಿಸುತ್ತಿದ್ದರು. ಅವರು ಇನ್ನೂ ಹಿಂದಿನದನ್ನು ಮತ್ತೆ ಹಿಂತಿರುಗಿ ನೋಡುತ್ತಿದ್ದರು. ಅವರ ಭವಿಷ್ಯತ್ತಿನಲ್ಲಿ ಕಾಯುತ್ತಿದ್ದ ಹೆಚ್ಚಿನ ಆಶೀರ್ವಾದಗಳನ್ನು ಎದುರು ನೋಡುವುದಕ್ಕಿಂತ ಹೆಚ್ಚಾಗಿ ಅವರು ಹೊಂದಿದ್ದನ್ನು ಅವರ ಬಯಸಿದರು. ಅವರ ಪ್ರಯಾಣದ ಸವಾಲು ಅವರಿಗೆ ತಮ್ಮ ಭವಿಷ್ಯಕ್ಕಿಂತ ತಮ್ಮ ಹಿಂದಿನದು ಉತ್ತಮವಾಗಿದೆ ಎಂಬ ಭಾವನೆ ಮೂಡಿಸಿತ್ತು. ಆದರೆ ಅವರು ತಪ್ಪಾಗಿದ್ದರು. ಇದರ ನಿಮಿತ್ತ ಐಗುಪ್ತದಿಂದ ಅವರನ್ನು ವಿಮೋಚಿಸುವುದರಿಂದ ಅವರಿಗೆ ದೇವರು ಕೊಡಬೇಕೆಂಬುದಾಗಿ ಇದ್ದಂತಹ ಸಂಪೂರ್ಣತೆಗೆ ಪ್ರವೇಶಿಸುವುದರ ಬದಲಾಗಿ ಮರುಭೂಮಿಯಲ್ಲಿ ಅವರಲ್ಲಿ ಅನೇಕರು ಸತ್ತುಹೋದರು.

## ದೇವರ ವಿಮೋಚನಾ ಕಾರ್ಯವು ಶಿಸ್ತು ಮತ್ತು ಕೆಲವೊಮ್ಮೆ ನ್ಯಾಯ ತೀರ್ಪನ್ನು ಒಳಗೊಂಡಿದೆ

ದೇವರ ವಿಮೋಚನಾ ಕಾರ್ಯದ ಭಾಗವಾಗಿ ನಮ್ಮ ಜೀವಿತದಲ್ಲಿ ತಪ್ಪಾದ ವಿಷಯಗಳನ್ನು ಆತನು ಸರಿಪಡಿಸುವ ಅವಶ್ಯಕತೆಯಿರುತ್ತದೆ. ತಪ್ಪು ವರ್ತನೆಗಳು, ನಮ್ಮಲ್ಲಿರುವ ತಪ್ಪು ನಡವಳಿಕೆಗಳು, ತಪ್ಪು ಪ್ರೇರಣೆಗಳು, ಗ್ರಹಿಕೆಗಳನ್ನು ಗುರುತಿಸಿ ನಮ್ಮಷ್ಟಕ್ಕೆ ನಾವೇ ಸ್ವಇಚ್ಛೆಯಿಂದ ಶೀಘ್ರವಾಗಿ ಗುರುತಿಸಿದರೆ ಅದು ಅದ್ಭುತಕರವಾಗಿರುತ್ತದೆ. ಆದರೆ ನಮ್ಮಲ್ಲಿ ಹೆಚ್ಚಿನವರು ಒಪ್ಪತಕ್ಕವರಲ್ಲ. ನಾವು ಹಿಡಿದಿಡಲು ಇಷ್ಟಪಡುವ ವಿಷಯಗಳನ್ನು ಬಿಟ್ಟುಕೊಡುವುದನ್ನು ವಿರೋಧಿಸುತ್ತೇವೆ. ಕೆಲವೊಮ್ಮೆ ಈ ವಿಷಯಗಳಲ್ಲಿ ತಪ್ಪಾಗಿರುವವುಗಳನ್ನು ಸಹ ನಾವು ನೋಡುವುದಿಲ್ಲ. ಆದ್ದರಿಂದ ನಮ್ಮ ಜೀವಿತದಲ್ಲಿ ಆತನ ವಿಮೋಚನಾ ಕಾರ್ಯವನ್ನು ಆತನು ತೆರೆದಿಡುವಾಗ ನಮ್ಮ ಜೀವಿತದಲ್ಲಿ ದೇವರು ತಿದ್ದುಪಡಿ ತರಲು ಅವಶ್ಯಕತೆಯಿರುತ್ತದೆ.

ಒಂದು ಉದಾಹರಣೆ ತೆಗೆದುಕೊಳ್ಳಿರಿ: ಒಬ್ಬ ಗಂಡ ಮತ್ತು ಹೆಂಡತಿಯು ತಮ್ಮ ಮದುವೆಯನ್ನು ವಿಮೋಚಿಸಲು ಮತ್ತು ತಮ್ಮ ಸಂಬಂಧವನ್ನು ಪುನಃ ಸ್ಥಾಪಿಸಲು ದೇವರನ್ನು ನಂಬುತ್ತಾರೆ. ಅವರಿಬ್ಬರು ಸಹ ತಮ್ಮ ತಪ್ಪು ವರ್ತನೆಗಳು ಮತ್ತು ನಡವಳಿಕೆಗಳನ್ನು ಸರಿಪಡಿಸಿಕೊಳ್ಳುವುದು ಅಗತ್ಯವಾಗಿದೆ. ಕೆಲವುಬಾರಿ, ಇವುಗಳು ಅವರ ದೃಷ್ಟಿ ಹೀನತೆಯ ಭಾಗವಾಗಿರಬಹುದು ಮತ್ತು ಅವರು ಸರಿ ಎಂಬುದಾಗಿ ಆಲೋಚಿಸಿದ ನಿರ್ದಿಷ್ಟ ನಡವಳಿಕೆಗಳ ಅಥವಾ ವರ್ತನೆಗಳ ನಿಮಿತ್ತದಿಂದ ಅವರ ಮದುವೆಯು ನಾಶವಾಗಿರುವುದನ್ನು ಅವರು ಇನ್ನೂ ಅರಿತುಕೊಂಡಿರುವುದಿಲ್ಲ. ಅವರು ಪ್ರಕ್ರಿಯೆಯ ಮೂಲಕವಾಗಿ ಕಾರ್ಯಮಾಡುವಾಗ, ತಿದ್ದುಪಡಿ ಮಾಡಿಕೊಳ್ಳಲು ಮತ್ತು ಬದಲಾಯಿಸಿಕೊಳ್ಳಲು ತಮ್ಮನ್ನು ಸಾಕಷ್ಟು ತಗ್ಗಿಸಿಕೊಳ್ಳಬೇಕು.

ಆತನು ಪ್ರೀತಿಸುವವರನ್ನು ದೇವರು ಶಿಸ್ತುಗೊಳಿಸುತ್ತಾನೆ. ಆತನ ಶಿಸ್ತು ಪ್ರೀತಿಯ ತಿದ್ದುಪಡಿ, ನಮ್ಮ ಯೋಗಕ್ಷೇಮಕ್ಕಾಗಿ ಉದ್ದೇಶಿಸಲ್ಪಟ್ಟಿರುವುದು ನಮ್ಮ ನಾಶನಕ್ಕಾಗಿ ಇರುವುದಿಲ್ಲ. ನಮ್ಮ ಸ್ವಂತ ಮೂರ್ಖತನದಿಂದ ನಮ್ಮನ್ನು ವಿಮೋಚಿಸಲು ಹುಡುಕುವ, ಒಂದು ವಿಮೋಚನಾ ಹೃದಯದಿಂದ ಇದು ಬಂದಿದೆ.

ಇಬ್ರಿಯರಿಗೆ **12:5-11**

**5 ಮಕ್ಕಳಿಗೆ ಹೇಳುವಂತೆ ನಿಮಗೆ ಹೇಳಿದ ಎಚ್ಚರಿಕೆಯ ಮಾತನ್ನು ಮರೆತುಬಿಟ್ಟಿದ್ದೀರೋ? ಏನಂದರೆ ಮಗನೇ ಕರ್ತನ ಶಿಕ್ಷೆಯನ್ನು ತತ್ಸಾರ ಮಾಡಬೇಡ. ಆತನು ನಿನ್ನನ್ನು ಗದರಿಸುವಾಗ ಬೇಸರಗೊಳ್ಳಬೇಡ.**

**6 ಕರ್ತನು ತಾನು ಪ್ರೀತಿಸುವವನನ್ನೇ ಶಿಕ್ಷಿಸುತ್ತಾನೆ, ತಾನು ಸೇರಿಸಿಕೊಳ್ಳುವ ಪ್ರತಿಯೊಬ್ಬ ಮಗನನ್ನು ಹೊಡೆಯುತ್ತಾನೆ ಎಂಬುದು.**

**7 ನೀವು ಶಿಕ್ಷಿತರಾಗುವದಕ್ಕಾಗಿಯೇ ನಿಮಗೆ ಶಿಕ್ಷೆಯಾಗುತ್ತದೆಂದು ತಿಳಿದು ಅದನ್ನು ಸಹಿಸಿಕೊಳ್ಳಿರಿ. ದೇವರು ನಿಮ್ಮನ್ನು ಮಕ್ಕಳೆಂದು ನಡಿಸುತ್ತಾನೆ.**

**8 ತಂದೆಯಿಂದ ಶಿಕ್ಷೆ ಹೊಂದದ ಮಗನೆಲ್ಲಿ? ಮಕ್ಕಳೆಲ್ಲರೂ ಹೊಂದುವ ಶಿಕ್ಷೆಯು ನಿಮಗುಂಟಾಗದಿದ್ದರೆ ನೀವು ಹಾದರದಿಂದ ಹುಟ್ಟಿದವರೇ ಹೊರತು ಪುತ್ರರಲ್ಲ.**

**9 ಇದು ಮಾತ್ರವಲ್ಲದೆ ನಮ್ಮನ್ನು ಶಿಕ್ಷಿಸಿದಂಥ ಶರೀರ ಸಂಬಂಧವಾದ ತಂದೆಗಳನ್ನು ಸನ್ಮಾನಿಸಿದೆವಷ್ಟೆ. ನಮ್ಮ ಆತ್ಮಗಳಿಗೆ ತಂದೆಯಾಗಿರುವಾತನಿಗೆ ನಾವು ಇನ್ನೂ ಹೆಚ್ಚಾಗಿ ಒಳಪಟ್ಟು ಜೀವಿಸಬೇಕಲ್ಲವೇ**

**10 ಆ ತಂದೆಗಳು ಕೆಲವು ದಿವಸಗಳ ಪ್ರಯೋಜನವನ್ನು ಲಕ್ಷ್ಯಕ್ಕೆ ತೆಗೆದುಕೊಂಡು ತಮ್ಮ ಮನಸ್ಸಿಗೆ ತೋರಿದಂತೆ ನಮ್ಮನ್ನು ಶಿಕ್ಷಿಸಿದರು. ಆತನಾದರೋ ನಾವು ತನ್ನ ಪರಿಶುದ್ಧತೆಯಲ್ಲಿ ಪಾಲುಗಾರರಾಗಬೇಕೆಂದು ನಮ್ಮ ಹಿತಕ್ಕಾಗಿಯೇ ಶಿಕ್ಷಿಸುತ್ತಾನೆ.**

**[11] ಯಾವ ಶಿಕ್ಷೆಯಾದರೂ ತತ್ಕಾಲಕ್ಕೆ ಸಂತೋಷಕರವಾಗಿ ತೋಚದೆ ದುಃಖಕರವಾಗಿ ತೋಚುತ್ತದೆ. ಆದರೂ ತರುವಾಯ ಅದು ಶಿಕ್ಷೆ ಹೊಂದಿದವರಿಗೆ ನೀತಿಯೆಂಬ ಫಲವನ್ನು ಕೊಟ್ಟು ಮನಸ್ಸಿಗೆ ಸಮಾಧಾನವನ್ನು ಉಂಟುಮಾಡುತ್ತದೆ.**

ಆತನು ನಮ್ಮನ್ನು ತನ್ನ ವಾಕ್ಯದ ಮೂಲಕ, ತನ್ನ ಆತ್ಮನ ಕಾರ್ಯದ ಮೂಲಕ, ನಮ್ಮ ಸುತ್ತಲಿನ ಜನರ ಮೂಲಕ, ಮತ್ತು ಕೆಲವು ಬಾರಿ ಪರಿಸ್ಥಿತಿಗಳ ಮೂಲಕ ನಮ್ಮ ಒಳಿತಿಗಾಗಿ ಆತನು ವಿವಿಧ ಪರಿಸ್ಥಿತಿಗಳನ್ನು ಉಂಟು ಮಾಡುತ್ತಾನೆ. ಆತನು ನಮ್ಮ ಜೀವಿತದಲ್ಲಿ ತರುವಂತಹ ತಿದ್ದುಪಡಿಗೆ ನಾವು ಗ್ರಹಿಸುವವರಾಗಿರಬೇಕು.

ನಮ್ಮ ಜೀವನದಲ್ಲಿ ಆತನ ವಿಮೋಚನಾಕಾರ್ಯದ ಭಾಗವಾಗಿ ನಾವು ನ್ಯಾಯತೀರ್ಪನ್ನು ಎದುರಿಸುತ್ತೇವೆ. ನಮ್ಮ ಪಾಪವು ಬಹಿರಂಗಗೊಳ್ಳುತ್ತದೆ ಮತ್ತು ನಮ್ಮ ತಪ್ಪುಕಾರ್ಯಗಳಿಗಾಗಿ ಒಂದು ಸಮಯದ ಅವಧಿಗಾಗಿ ನಾವು ಪರಿಣಾಮಗಳನ್ನು ಎದುರಿಸುತ್ತೇವೆ. ಆದರೆ ಇದರ ಮೂಲಕವಾಗಿ, ನಮ್ಮ ಪುನಃ ಸ್ಥಾಪನೆ ಮತ್ತು ವಿಮೋಚನೆಯನ್ನು ದೇವರು ಹುಡುಕುತ್ತಾನೇ ಹೊರತು ನಮ್ಮ ಸಂಪೂರ್ಣ ನಾಶನವಲ್ಲ. ಅರಸನಾದ ದಾವೀದನ ಕೊಲೆ ಮತ್ತು ವ್ಯಭಿಚಾರದ ಪಾಪವು ಬಹಿರಂಗಗೊಂಡ ಸಮಯದಲ್ಲಿ ಅವನು ಹಾದು ಹೋಗುವಾಗ ಇದನ್ನು ಅರ್ಥಮಾಡಿಕೊಂಡನು. ದೇವರು ಅವನನ್ನು ಪುನಃ ಕಟ್ಟಿದನು ಮತ್ತು ಅವನು ತನ್ನ ಜೀವಿತದಲ್ಲಿ ದೇವರ ಕೃಪೆ ಮತ್ತು ಶುಭವುಳ್ಳ ಹಸ್ತವು ಮುಂದುವರೆಯುವುದನ್ನು ನೋಡಿದನು.

ಆತನ ದೈವಿಕ ಶಿಸ್ತಿನ ವ್ಯವಹಾರಗಳು ಕರುಣೆಯೊಂದಿಗೆ ವ್ಯಕ್ತಪಡಿಸಲ್ಪಟ್ಟವು.

**ಯೆಶಾಯ 54:8**
**ತಟ್ಟನೆ ಉಬ್ಬಿ ಹರಿಯುವ ಕೋಪದಿಂದ ಒಂದು ಕ್ಷಣ ಮಾತ್ರ ನನ್ನ ಮುಖವನ್ನು ನಿನಗೆ ಮರೆಮಾಡಿಕೊಂಡಿದ್ದೆನು. ಶಾಶ್ವತ ಕೃಪೆಯಿಂದ ನಿನ್ನನ್ನು ಕರುಣಿಸುವೆನು ಎಂದು ನಿನ್ನ ವಿಮೋಚಕನಾದ ಯೆಹೋವನು ಅನ್ನುತ್ತಾನೆ.**

## ದೇವರ ವಿಮೋಚನಾಕಾರ್ಯವು ಪುನಃ ಸ್ಥಾಪನೆ ಮಾತ್ರವಲ್ಲದೆ ಹಾಗೆಯೇ ಮೇಲೇರಿಸುತ್ತದೆ

ದೇವರು ನಮ್ಮ ಜೀವಿತದಲ್ಲಿ ಆತನ ಕಾರ್ಯದಲ್ಲಿ ನಮ್ಮನ್ನು ಮಹಿಮೆಯಿಂದ ಶ್ರೇಷ್ಟವಾದ ಮಹಿಮೆಗೆ, ನಂಬಿಕೆಯಿಂದ ಶ್ರೇಷ್ಟವಾದ ನಂಬಿಕೆಗೆ ಮತ್ತು ಬಲದಿಂದ ಹೆಚ್ಚಿನ ಬಲಕ್ಕೆ ತೆಗೆದುಕೊಂಡು ಹೋಗುತ್ತಾನೆ. ದೇವರು ಇದನ್ನು

ಮಾಡುವಾಗ ಪ್ರಾರಂಭಿಸುವುದಕ್ಕಿಂತ ಮುಕ್ತಾಯವು ಉತ್ತಮವಾಗಿರುತ್ತದೆ, ಆರಂಭಕ್ಕಿಂತಲೂ ಅಂತ್ಯವು ಉತ್ತಮವಾಗಿರುತ್ತದೆ. ಅದೇ ರೀತಿಯಾಯಾಗಿ, ನಮ್ಮನ್ನು ವಿಮೋಚಿಸುವಾಗ, ದೇವರು ಇದನ್ನು ಪುನಃ ಸ್ಥಾಪಿಸುವುದಲ್ಲದೆ, ಅದನ್ನು ಮೀರಿ ಆರಂಭಕ್ಕಿಂತ ಉತ್ತಮವಾದ ಮಾರ್ಗಕ್ಕೆ ನಮ್ಮನ್ನು ಕರೆದೊಯ್ಯುತ್ತಾನೆ.

### *ಯೋಸೇಫನು*

ಯೋಸೇಫನನ್ನು ಕುರಿತು ಆಲೋಚಿಸಿರಿ. ಸುಮಾರು 13 ವರ್ಷಗಳ ದುಃಖದ ನಂತರ ದೇವರು ಅವನನ್ನು ಕರೆತಂದದ್ದು ತುಂಬಾ ಅದ್ಭುತವಾಗಿದೆ, ಯೋಸೇಫನು ತನ್ನ ಪುತ್ರರಿಗೆ ನೀಡಿದ ಹೆಸರುಗಳಲ್ಲಿ ಇದನ್ನು ವ್ಯಕ್ತಪಡಿಸಿದನು.

**ಆದಿಕಾಂಡ 41:51,52**

**51 ಚೊಚ್ಚಲ ಮಗನು ಹುಟ್ಟಿದಾಗ ಯೋಸೇಫನು ನಾನು ನನ್ನ ಎಲ್ಲಾ ಕಷ್ಟವನ್ನೂ ತಂದೆಯ ಮನೆಯವರನ್ನೂ ಮರೆತುಬಿಡುವಂತೆ ದೇವರು ಮಾಡಿದ್ದಾನಲ್ಲಾ ಎಂದು ಹೇಳಿ ಅವನಿಗೆ ಮನಸ್ಸೆ ಎಂದು ಹೆಸರಿಟ್ಟನು.**

**52 ಎರಡನೆ ಮಗನು ಹುಟ್ಟಿದಾಗ ಅವನು ನನಗೆ ಸಂಕಟ ಬಂದ ದೇಶದಲ್ಲೇ ''ದೇವರು ಅಭಿವೃದ್ಧಿಯನ್ನು ದಯಪಾಲಿಸಿದ್ದಾನೆಂದು ಹೇಳಿ ಆ ಮಗನಿಗೆ ಎಫ್ರಾಯಿಮ್ ಎಂದು ಹೆಸರಿಟ್ಟನು.''**

ಅವನ ತಂದೆಯ ಮನೆಯಲ್ಲಿ ತುಂಬಾ ಪ್ರೀತಿ ಹೊಂದಿದವನಾಗಿದ್ದುದರಿಂದ, ಫರೋಹನ ಆಸ್ಥಾನ ಮತ್ತು ಇಡೀ ಐಗುಪ್ತ ದೇಶದಲೆಲ್ಲಾ ಅತ್ಯಂತ ದಯೆಯುಳ್ಳವನಾಗಿ ಕಂಡು ಬಂದನು. ವಿಶೇಷ ಬಣ್ಣದ ನಿಲುವಂಗಿಯನ್ನು ಧರಿಸಿದ ಅವನು ಈಗ ಅಪ್ಪಟ ನಾರುಬಟ್ಟೆಗಳನ್ನು ಧರಿಸಿದ್ದನು ಮತ್ತು ಐಗುಪ್ತದ ಅತ್ಯುತ್ತಮ ಚಿನ್ನದ ಸರಗಳೊಡನೆ ಅಲಂಕರಿಸಲ್ಪಟ್ಟನು. ಅವನ ಸ್ವಂತ ಸಹೋದರರಿಂದ ತಿರಸ್ಕಾರ ಮತ್ತು ದ್ರೋಹ ಹೊಂದಿದವನಾಗಿದ್ದನು. ಈಗ ಅವನು ಎಲ್ಲಾ ಐಗುಪ್ತ್ಯರಿಂದ ಘನತೆ ಮತ್ತು ಗೌರವದಿಂದ ಕಾಣಲ್ಪಟ್ಟನು. ದೇವರು ಅವನ ಎಲ್ಲಾ ತೊಂದರೆಗಳಿಂದ ಅವನನ್ನು ವಿಮೋಚಿಸಿದನು ಮತ್ತು ಪ್ರಾರಂಭದ ಜೀವಿತಕ್ಕಿಂತ ಅತ್ಯಂತ ಶ್ರೇಷ್ಟವಾದ ಮುಂದಿನ ಜೀವಿತದ ಸ್ಥಳಕ್ಕೆ ಅವನನ್ನು ಕರೆತಂದನು. ಇದು ವಿಮೋಚನೆಯಾಗಿದೆ.

### *ಯೋಬನು*

ಯೋಬನಿಗೆ ದೇವರು ಮಾಡಿದ್ದನ್ನು ಆಲೋಚಿಸಿರಿ, ಅವನ ಅಲ್ಪ ಸಮಯದ ಶೋಧನೆಯು (ಯೋಬನು ಎಷ್ಟು ಸಮಯದವರೆಗೆ ಬಾಧೆ ಹೊಂದಿದ್ದನು

ಎಂಬುದಾಗಿ ಸತ್ಯವೇದದಲ್ಲಿ ಸ್ಪಷ್ಟವಾಗಿಲ್ಲ ಆದರೆ ಇದು ತುಂಬಾ ತಿಂಗಳುಗಳ ಅವಧಿ ಇರಬಹುದು ಮತ್ತು ಕೆಲವು ಯೆಹೂದಿ ಸಂಪ್ರದಾಯಗಳ ಪ್ರಕಾರ ಒಂದು ವರ್ಷದ ಅವಧಿ ಇರಬಹುದು) ಅವನು ಸುಮಾರು 140 ವರ್ಷಗಳು ಅನುಭವಿಸಿದ ಎರಡರಷ್ಟು ಆಶೀರ್ವಾದಕ್ಕೆ ಹೋಲಿಸಲು ಸಾಧ್ಯವಿಲ್ಲ.

**ಯೋಬನು 42:10**

**ಯೋಬನು ತನ್ನ ಸ್ನೇಹಿತರಿಗೋಸ್ಕರ ಪ್ರಾರ್ಥಿಸಿದ ಬಳಿಕ ಯೆಹೋವನು ಅವನ ದುಸ್ಥಿತಿಯನ್ನು ಹೋಗಲಾಡಿಸಿ ಅವನ ಸೊತ್ತನ್ನು ಮೊದಲಿಗಿಂತ ಎರಡರಷ್ಟಾಗಿ ಹೆಚ್ಚಿಸಿದನು.**

**ಯೋಬನು 42:12,16,17**

**[12] ಯೆಹೋವನು ಯೋಬನ ಮೊದಲನೆಯ ಸ್ಥಿತಿಗಿಂತಲೂ ಅವನ ಕಡೆಯ ಸ್ಥಿತಿಯನ್ನು ಹೀಗೆ ಹೆಚ್ಚಾಗಿ ಆಶೀರ್ವದಿಸಿದನು. ಅವನಿಗೆ ಹದಿನಾಲ್ಕು ಸಾವಿರ ಕುರಿಗಳೂ ಆರು ಸಾವಿರ ಒಂಟೆಗಳು ಒಂದು ಸಾವಿರ ಜೋಡಿ ಎತ್ತುಗಳೂ ಒಂದು ಸಾವಿರ ಹೆಣ್ಣು ಕತ್ತೆಗಳೂ ಉಂಟಾದವು.**
**[16] ಆಮೇಲೆ ಯೋಬನು ನೂರನಾಲ್ವತ್ತು ವರುಷ ಬಾಳಿ ತನ್ನ ಮಕ್ಕಳನ್ನು ಮೊಮ್ಮಕ್ಕಳನ್ನು ಅಂತು ತನ್ನ ಸಂತಾನದ ನಾಲ್ಕು ತಲೆಗಳನ್ನು ಕಂಡನು.**
**[17] ತರುವಾಯ ಯೋಬನು ಮುಪ್ಪಿನ ಮುದುಕನಾಗಿ ಗತಿಸಿದನು.**

## *ಇಸ್ರಾಯೇಲ್ ಜನರು*

''ಕಬ್ಬಿಣ-ಕರಗಿಸುವ ಕುಲುಮೆ'' ಎಂದು ಅವರು ಉಲ್ಲೇಖಿಸಲ್ಪಟ್ಟಂತಹ ಐಗುಪ್ತ್ಯದ ಗುಲಾಮಗಿರಿಯಿಂದ ತನ್ನ ಜನರಾದ ಇಸ್ರಾಯೇಲ್ಯರನ್ನು ದೇವರು ವಿಮೋಚಿಸಿದನು ಮತ್ತು ಆತನು ಅವರನ್ನು ''ತನ್ನ ಸ್ವಾಸ್ತ್ಯದ ಜನರಾಗಿ'' ಮಾಡಿದನು. ಒಮ್ಮೆ ಗುಲಾಮರಾಗಿದ್ದವರು ಈಗ ಆತನ ಸ್ವಂತ ವಿಶೇಷ ಜನರು ಆಗಿದ್ದಾರೆ. ಅವರು ಗುಲಾಮರಂತೆ ಕೆಲಸ ಮಾಡಿದ ದೇಶದಿಂದ ಅವರನ್ನು ತೆಗೆದುಕೊಂಡು ಹಾಲು ಮತ್ತು ಜೇನೂ ಹರಿಯುವ ದೇಶಕ್ಕೆ ಕರೆತಂದನು. ಅವರು ಕರೆತರಲ್ಪಟ್ಟದ್ದು, ಅವರು ಹಿಂದೆ ತಿಳಿಯಲಾರದಂತಹ ಎಲ್ಲದ್ದಕ್ಕಿಂತ ಆತ್ಮೀಕವಾಗಿ ಮತ್ತು ಪ್ರಾಕೃತದಲ್ಲಿ ತುಂಬಾ ದೊಡ್ಡದೂ ಆಗಿತ್ತು.

**ಧರ್ಮೋಪದೇಶಕಾಂಡ 4:20**

**ನಿಮ್ಮನ್ನಾದರೋ ಯೆಹೋವನು ತನಗೆ ಸ್ವಕೀಯ ಜನರನ್ನಾಗಿ ಮಾಡಿಕೊಳ್ಳಬೇಕೆಂದು ಸಂಕಲ್ಪಿಸಿ ಕಬ್ಬಿಣವನ್ನು ಕರಗಿಸುವ ಕುಲುಮೆ ಯೋಪಾದಿಯಲ್ಲಿದ್ದ ಐಗುಪ್ತದೇಶದಿಂದ ತಪ್ಪಿಸಿದನು. ಆ ಸಂಕಲ್ಪವು ಈಗ ನೆರವೇರಿತಲ್ಲಾ.**

**ಧರ್ಮೋಪದೇಶಕಾಂಡ 6:21-23**
**21 ನೀವು ಅವರಿಗೆ ನಾವು ಐಗುಪ್ತದೇಶದಲ್ಲಿ ಫರೋಹನಿಗೆ ದಾಸರಾಗಿದ್ದಾಗ ಯೆಹೋವನು ತನ್ನ ಭುಜಬಲದಿಂದ ನಮ್ಮನ್ನು ಬಿಡುಗಡೆ ಮಾಡಿದನು.**
**22 ಆತನು ಐಗುಪ್ತ್ಯರನ್ನೂ ಫರೋಹನನ್ನೂ ಅವನ ಮನೆಯವರನ್ನೂ ಬಾಧಕವಾದ ದೊಡ್ಡ ಮಹತ್ಕಾರ್ಯಗಳಿಂದಲೂ ಉತ್ಪಾತಗಳಿಂದಲೂ ನಮ್ಮ ಕಣ್ಣೆದುರಿನಲ್ಲಿ ಶಿಕ್ಷಿಸಿ.**
**23 ತಾನು ನಮ್ಮ ಪಿತೃಗಳಿಗೆ ಪ್ರಮಾಣಮಾಡಿಕೊಟ್ಟ ದೇಶದಲ್ಲಿ ನಮ್ಮನ್ನು ಸೇರಿಸುವುದಕ್ಕಾಗಿ ಐಗುಪ್ತದೇಶದೊಳಗಿಂದ ಬರಮಾಡಿದನು.**

## *ದಾರಿತಪ್ಪಿಹೋದ ಮಗ*

ತಪ್ಪಿಹೋದ ಮಗನು ಮನೆಗೆ ಹಿಂತಿರುಗಿ ಬಂದಾಗ ತಂದೆಯು ಮಾಡಿದಂತಹದ್ದು ಅವನ ಪುತ್ರರಿಗೆ ಹಿಂದೆ ಅವನು ಮಾಡದಿದ್ದಂತಹ ಕಾರ್ಯವಾಗಿತ್ತು. ತಪ್ಪಿಹೋದ ಮಗನು ಮನೆಗೆ ಬಂದಾಗ ಶ್ರೇಷ್ಟವಾದ ನಿಲುವಂಗಿ, ಕೈಗೆ ಉಂಗುರ ಮತ್ತು ಆ ಕ್ಷಣಕ್ಕೆ ಮುಂಚಿತವಾಗಿ ಆ ಮನೆಯಲ್ಲಿ ಮಾಡಿದ ಯಾವುದಕ್ಕಿಂತ ಒಂದು ಭಿನ್ನವಾದ ದೊಡ್ಡ ಆಚರಣೆಯಾಗಿತ್ತು. ನಾವು ಲೂಕನು 15:29ರಲ್ಲಿ ಹಿರಿಯ ಮಗನು ತೋರಿದ ಪ್ರತಿಕ್ರಿಯೆಯಿಂದ ಇದನ್ನು ನಾವು ಊಹಿಸಿಕೊಳ್ಳಬಹುದು.

## *ವಿಮೋಚನೆಯ ಶ್ರೇಷ್ಟ ಯೋಜನೆ*

ನಾವು ವಂಚಿತ ಪಾಪಿಗಳಾಗಿದ್ದರೂ, ತನ್ನ ಮಗನಾದ ಯೇಸು ಕ್ರಿಸ್ತನ ಮೂಲಕವಾಗಿ ನಾವು ಸೈತಾನ ಮತ್ತು ಪಾಪದಿಂದ ವಿಮೋಚಿಸಲ್ಪಟ್ಟಿದ್ದು ಮಾತ್ರವಲ್ಲದೇ, ದೇವರ ಕುಟುಂಬಕ್ಕೆ ಕರೆಯಲ್ಪಟ್ಟಿದ್ದೇವೆ ಮತ್ತು ದೇವರ ಬಾಧ್ಯಸ್ಥರಾಗಿ ಮಾಡಲ್ಪಟ್ಟಿದ್ದೇವೆ ಮತ್ತು ಕ್ರಿಸ್ತನೊಂದಿಗೆ ಜೊತೆ-ಬಾಧ್ಯಸ್ಥರಾಗಿದ್ದೇವೆ. ನಾವು ತಂದೆಯ ಬಲಭಾಗದಲ್ಲಿ ಕ್ರಿಸ್ತನೊಡನೆ ಒಟ್ಟಾಗಿ ಕುಳಿತುಕೊಳ್ಳಲು ಮಾಡಲ್ಪಟ್ಟಿದ್ದೇವೆ. ಆತ್ಮೀಕ ಕ್ಷೇತ್ರದಲ್ಲಿ ಮೊದಲ ಮನುಷ್ಯ ಆದಾಮನು ಸಹ ಅಂತಹ ಸ್ಥಾನ ಅನುಭವಿಸಿರುವ ಯಾವುದೇ ಸೂಚನೆಯಿಲ್ಲ.

ದೇವರ ವಿಮೋಚನೆ ಕಾರ್ಯವು ನಮ್ಮ ಹಿಂದಿನ ಸ್ಥಿತಿಯನ್ನು ಪುನಃ ಸ್ಥಾಪಿಸುವುದು ಮಾತ್ರವಲ್ಲದೇ, ಆರಂಭಕ್ಕಿಂತ ಮಹೋನ್ನತವಾದ ಕ್ಷೇತ್ರಕ್ಕೆ ನಮ್ಮನ್ನು ಮೇಲೆತ್ತುತ್ತದೆ.

## ನಿಮ್ಮ ಜೀವಿತದಲ್ಲಿ ದೇವರು ವಿಮೋಚಿಸಲು ನೀವು ಅಪೇಕ್ಷಿಸುವಂತದ್ದು ಏನು?

ದೇವರು ನಿಮ್ಮ ವಿಮೋಚಕನಾಗಿದ್ದಾನೆ. ಆತನ ವಿಮೋಚಿಸುವ ಸಾಮರ್ಥ್ಯಕ್ಕಿಂತ ಮಿಗಿಲಾದದು ಯಾವುದು ಇಲ್ಲ. ಬಹುಶಃ ನಿಮ್ಮ ಜೀವಿತದಲ್ಲಿ ಯಾವುದಾದರೂ ಒಂದು ಅಥವಾ ಅನೇಕ ವಿಷಯಗಳನ್ನು ದೇವರು ವಿಮೋಚಿಸುವ ಅಗತ್ಯವಿರುತ್ತದೆ. ದೇವರಿಂದ ಪ್ರೇರಿತವಾದದೆಂದು ನೀವು ತಿಳಿದ ಒಂದು ದರ್ಶನದೊಡನೆ ನೀವು ಪ್ರಾರಂಭಿಸಬಹುದು. ಆದರೆ ಆ ಕ್ಷಣದಲ್ಲಿ ಜೀವನದ ಸನ್ನಿವೇಶಗಳು ನೀವು ವಿಷಯಗಳನ್ನು ಎಂದಾದರೂ ಪುನಃ ಸ್ಥಾಪಿಸಲಾಗುತ್ತದೆಯೇ ಎಂದು ನೀವು ಆಶ್ಚರ್ಯಪಡುತ್ತೀರಿ. ನಿಮ್ಮ ಪರಿಸ್ಥಿತಿಗಳು ಏನಾಗಿವೆ ಎಂಬುದನ್ನು ಪರಿಗಣಿಸದೇ ನಂಬಿಕೆಯಲ್ಲಿ ನೀವು ಆತನನ್ನು ನೋಡುತ್ತೀರೋ?

ನಿಮ್ಮ ಜೀವಿತದಲ್ಲಿ ದೇವರು ತನ್ನ ವಿಮೋಚನಾ ಕಾರ್ಯವನ್ನು ಹೇಗೆ ಬಿಚ್ಚಿಡಬೇಕೆಂದು ನಿರ್ದೇಶಿಸಲು ಪ್ರಯತ್ನಿಸಬೇಡಿರಿ. ನಿಮ್ಮ ಜೀವಿತದಲ್ಲಿ ನಿಮ್ಮ ಪರಿಸ್ಥಿತಿಯನ್ನು ವಿಮೋಚಿಸಲು ದೇವರು ಮಾಡುವುದೇನು ಮತ್ತು ಇದನ್ನು ಆತನು ಮಾಡುವಂತಹ ಕುರಿತಾದುದು ಹೇಗೆ ಎಂಬುದು ಬೇರೆಯವರಿಗಾಗಿ ಆತನ ಮಾಡಿದಂತದ್ದಕ್ಕಿಂತ ತುಂಬಾ ವಿಭಿನ್ನವಾಗಿರಬಹುದು. ನಿಮ್ಮ ಜೀವನದ ಪರಿಸ್ಥಿತಿಗಳು ವಿಮೋಚನೆಗೊಂಡಿರುವುದನ್ನು ನೋಡುವುದರೊಡನೆ ಪ್ರಯಾಣಿಸುವುದನ್ನು ಕಲಿಯಿರಿ. ಆತನು ನಿಮಗೆ ತರುವಂತಹ ದೊಡ್ಡದಾದ ಮಹಿಮೆಯು ಆತನಿಂದ ನಿಶ್ಚಯಿಸಲ್ಪಟ್ಟಿರುತ್ತದೆ. ಆತನು ನಿಮಗಾಗಿ ಮಾಡುತ್ತಾನೆ ಎಂದು ನೀವು ಭಾವಿಸುವಂತಿಲ್ಲ. ಅದು ಸಂಪೂರ್ಣವಾಗಿ ವಿಭಿನ್ನವಾಗಿರಬಹುದು. ಬೇರೆಯವರಿಗೆ ಮಾಡಿದಂತಹ ರೀತಿಯ ಒಂದು ನಕಲು ಪ್ರತಿಯಂತೆ ಇರುವುದಿಲ್ಲ. ನಿಮ್ಮ ನಿರ್ಧಿಷ್ಟ ಜೀವನದ ಪರಿಸ್ಥಿತಿಯಲ್ಲಿ ಆತನ ವಿಮೋಚನಾ ಕಾರ್ಯದ ಫಲಿತಾಂಶದಂತೆ ಸರಿಸಾಟಿಯಿಲ್ಲದ ಮತ್ತು ವಿಶೇಷವಾದಂತದ್ದನ್ನು ನೀವು ಹೊಂದಬೇಕೆಂದು ಆತನು ಅದನ್ನು ಬಯಸಿದ್ದಾನೆ. ಆತನೇ ಬೂದಿಗೆ ಸೌಂದರ್ಯವನ್ನು ಕೊಡುವಾತನು ಮತ್ತು ನಿಮ್ಮ ಜೀವಿತವನ್ನು ಸೌಂದರ್ಯಗೊಳಿಸುವುದೇನು ಎಂಬುದಾಗಿ ನಿಖರವಾಗಿ ಆತನಿಗೆ ಗೊತ್ತಿದೆ. ಆದ್ದರಿಂದ ಆತನ ಮಹಿಮೆ ಮಾತ್ರವೇ ಪ್ರಕಾಶಿಸುವಂತದ್ದಾಗಿದೆ.

ದೇವರ ವಿಮೋಚನಾ ಕಾರ್ಯವು ಮಿತಿಗಳನ್ನು ತಿಳಿದಿಲ್ಲದ, ನಿರಂತರ ಅನಿಯಂತ್ರಿತ ಪ್ರೀತಿಯಿಂದ ಪ್ರೇರೇಪಿಸಲ್ಪಟ್ಟಿದೆ. ನಿಮಗಾಗಿ ಇರುವ ಆತನ ಪ್ರೀತಿಯ ಬಗ್ಗೆ ಖಚಿತವಾಗಿರಿ. ದೇವರ ವಿಮೋಚನ ಕಾರ್ಯವು ಅತ್ಯದ್ಭುತಕರವಾದದ್ದು. ಆದರೆ ನಮ್ಮ ಜೊತೆ–ಪರಿಶ್ರಮವನ್ನು ಒಳಗೊಂಡಿರುತ್ತದೆ. ನಿಮ್ಮ ಜೀವಿತದಲ್ಲಿ ವಿಷಯಗಳು ಪುನಃಸ್ಥಾಪಿಸಲು ಮತ್ತು ವಿಮೋಚಿಸಲು ಆತನ ಬಲವು ಬಿಡುಗಡೆಗೊಳ್ಳುವುದನ್ನು ನೋಡಲು ದೇವರೊಡನೆ ಜೊತೆ–ಕೆಲಸದವರಾಗಿರಬೇಕು.

ಅಗತ್ಯವಿರುವಾಗ, ದೇವರ ವಿಮೋಚನಾ ಕಾರ್ಯವು ಶಿಸ್ತು ಮತ್ತು ಕೆಲವು ಸಂದರ್ಭಗಳಲ್ಲಿ ನ್ಯಾಯ ತೀರ್ಪು ಒಳಗೊಂಡಿರುತ್ತದೆ. ನೀವು ಸರಿಪಡಿಸಬೇಕಾದ ವಿಷಯಗಳಿದ್ದರೆ ಹಾಗೆ ಮಾಡಿರಿ. ದೇವರ ತಿದ್ದುಪಡಿಗೆ ಒಳಗಾಗಿರಿ. ಅದನ್ನು ವಿರೋಧಿಸಬೇಡಿರಿ.

ದೇವರ ವಿಮೋಚನಾಕಾರ್ಯವು ನಮ್ಮ ಹಿಂದಿನ ಸ್ಥಿತಿಗೆ ನಮ್ಮನ್ನು ಪುನಃ ಸ್ಥಾಪಿಸುವುದಲ್ಲದೆ, ಆರಂಭಕ್ಕಿಂತಲೂ ದೊಡ್ಡದಾದ ಕ್ಷೇತ್ರಕ್ಕೆ ನಮ್ಮನ್ನು ಎತ್ತರಿಸುತ್ತದೆ. ಹೆಚ್ಚಿನ ಮಹಿಮೆಯನ್ನು ನಿರೀಕ್ಷಿಸಿ!

## ವೈಯಕ್ತಿಕ ಧ್ಯಾನ

1) ದೇವರು ವಿಮೋಚಿಸಬೇಕೆಂದು ನೀವು ಬಯಸುವ ನಿಮ್ಮ ಜೀವನದ ಒಂದು ಅಥವಾ ಹೆಚ್ಚಿನ ಕ್ಷೇತ್ರಗಳಿಗಾಗಿ ಪ್ರಾರ್ಥನೆಯಲ್ಲಿ ಕರ್ತನ ಮುಂದೆ ಹೋಗಿರಿ. ದೇವರಲ್ಲಿ ನಿಮ್ಮ ನಂಬಿಕೆ ವ್ಯಕ್ತಪಡಿಸಿ ಮತ್ತು ವಿಷಯಗಳನ್ನು ಪುನಃಪಡೆದುಕೊಳ್ಳಲು ಮತ್ತು ಪುನಃ ಸ್ಥಾಪಿಸಲು ಆತನೊಂದಿಗೆ ಪ್ರಯಾಣಿಸಲು ಆತನ ಮುಂದೆ ಒಪ್ಪಂದವನ್ನು ಮಾಡಿರಿ.

2) ನಿಮಗೆ ತಿಳಿದಿರುವ ಬೇರೊಬ್ಬರಿಗಾಗಿ ಅವಶ್ಯಕವಿರುವ ದೇವರ ವಿಮೋಚನಾ ಕಾರ್ಯವನ್ನು ಅವರ ಜೀವಿತದಲ್ಲಿ ನೋಡಲು ಪ್ರಾರ್ಥಿಸಿರಿ. ಅವರಿಗಾಗಿ ನಂಬಿಕೆಯಲ್ಲಿ ಪ್ರಾರ್ಥಿಸಿರಿ.

# 3

# ದೇವರ ವಿಮೋಚನಾ ಪ್ರಕ್ರಿಯೆಯಲ್ಲಿನ ಮುಖ್ಯ ಅಂಶಗಳು

ದೇವರು ನಮ್ಮನ್ನು ತನ್ನಂತೆಯೇ ಇರಲು, ಸ್ವಭಾವದಲ್ಲಿ ವಿಮೋಚನೆಗೊಂಡವರಾಗಿರಲು ಆಹ್ವಾನಿಸುತ್ತಾನೆ. ನಮ್ಮ ಸ್ವಂತ ಜೀವನ ಸಂದರ್ಭಗಳನ್ನು ನೋಡಿದಾಗ ಅಥವಾ ನಮ್ಮ ಸುತ್ತಮುತ್ತಲಿನ ಜನರೊಂದಿಗೆ ಕೆಲಸಮಾಡುವಾಗ, ನಾವು ಸ್ವಭಾವದಲ್ಲಿ ವಿಮೋಚಕರಾಗಿರಬೇಕು. ವಿಮೋಚಿಸಲು, ಪುನಃ ಪಡೆಯಲು, ಉಜ್ಜೀವನಗೊಳಿಸಲು, ನವೀಕರಿಸಲು ಮತ್ತು ಪುನಃ ಸ್ಥಾಪಿಸುವುದನ್ನು ನಾವು ಹುಡುಕಬೇಕು. ಈ ಅಧ್ಯಾಯದಲ್ಲಿ ದೇವರು ನಮ್ಮ ಜೀವಿತದಲ್ಲಿ ತನ್ನ ವಿಮೋಚನಾ ಕಾರ್ಯವನ್ನು ಬಿಚ್ಚಿಡುವ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ನಾವು ಪ್ರಯತ್ನಿಸೋಣ.

ದೇವರ ವಿಮೋಚನಾ ಪ್ರಕ್ರಿಯೆಯು **ಸಮಯ, ತ್ಯಾಗ, ಕ್ಷಮಾಪಣೆ** ಮತ್ತು **ಪುನಃ ಸ್ಥಾಪನೆಯ** ಪ್ರಮುಖ ಅಂಶಗಳನ್ನು ಒಳಗೊಂಡಿವೆ. ಈ ವಿಮೋಚನಾ ಪ್ರಕ್ರಿಯೆಯಲ್ಲಿ ದೇವರೊಡನೆ ಜೊತೆ-ಕೆಲಸದವರಾಗಿರಲು ನಾವು ಇಲ್ಲಿದ್ದೇವೆ. ನಾವು ದೇವರೊಂದಿಗೆ ಕಾರ್ಯ ಮಾಡಬೇಕು, ಆತನ ವಿಮೋಚನೆಯ ಪ್ರತಿ ಅಂಶಗಳನ್ನು ನಮ್ಮ ಜೀವಿತದಲ್ಲಿ ವಿಷಯಗಳನ್ನು ವಿಮೋಚಿಸಲು ಆತನು ಕಾರ್ಯಮಾಡುವಂತೆ ಹಾಗೂ ಇತರ ಜನರ ಜೀವಿತದಲ್ಲಿ ಆತನ ವಿಮೋಚನೆಯ ಕಾರ್ಯ ಜರುಗುವುದನ್ನು ನೋಡಲು ಆತನೊಡನೆ ಜೊತೆ-ಕೆಲಸದವರಾಗಿರುವಂತೆ ಗುರುತಿಸಿಕೊಂಡು ಹಿಂಬಾಲಿಸಬೇಕು ಮತ್ತು ಗುರುತಿಸಬೇಕು.

## ಸಮಯ

ದೇವರು ಸಂಪೂರ್ಣತೆಯ ಸಮಯದಲ್ಲಿ ತನ್ನ ವಿಮೋಚನೆಯ ಕಾರ್ಯವನ್ನು ತೆರೆದಿಡುತ್ತಾನೆ.

ದೇವರು ಯಾವಾಗಲೂ ಕೆಲಸ ಮಾಡುತ್ತಿದ್ದಾನೆ. ಆದರೆ ಆತನ ವಿಮೋಚನೆಯ ಕಾರ್ಯವು 'ಕೈರೋಸ್' ಸಮಯದಲ್ಲಿ ಎಂಬುದಾಗಿ ಸತ್ಯವೇದ

ವರ್ಣಿಸುವ ಪರಿಪೂರ್ಣವಾದ ಸಮಯದಲ್ಲಿ ಜರುಗುವುದನ್ನು ನಾವು ನೋಡುತ್ತೇವೆ. ಗ್ರೀಕ್ ನಲ್ಲಿ *'ಕೈರೋಸ್'* ಅಂದರೆ ''ಗೊತ್ತುಪಡಿಸುವುದಕ್ಕಾಗಿ, ಕ್ರಮವಾದ ಅಥವಾ ತಕ್ಕ ಸಮಯ ಅಥವಾ ಋತುವಾಗಿದೆ.'' ಇದು ವಿಷಯಗಳು ಮಾಗಿದ ಸಮಯವಾಗಿದೆ.

## *ರಕ್ಷಣೆಯ ದೊಡ್ಡ ಯೋಜನೆ*

**ಗಲಾತ್ಯದವರಿಗೆ 4:4,5**

**4-5 ಆದರೆ ಕಾಲವು (ಗ್ರೀಕ್ *ಕೈರೋಸ್*) ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು.**

ರಕ್ಷಣೆಯ ದೊಡ್ಡ ಯೋಜನೆಯಲ್ಲಿ ಏದೇನ್ ತೋಟದಲ್ಲಿ ಸ್ತ್ರೀಯ ಸಂತಾನದ ಬರುವಿಕೆಯನ್ನು ದೇವರು ಘೋಷಿಸಿದ್ದಾಗಲೂ ಆತನ ವಿಮೋಚನೆಯ ನಿಬಂಧನೆಯನ್ನು ಕೈಗೊಳ್ಳಲು ದೇವರು ತನ್ನ ಮಗನನ್ನು ಕಳುಹಿಸುವ ಮೊದಲು 4000 ವರ್ಷಗಳು ಕಳೆದವು. ಈ 4000 ವರ್ಷಗಳಲ್ಲಿ ದೇವರು ಕೆಲಸ ಮಾಡುತ್ತಿದ್ದನು. ಜನರನ್ನು, ಸ್ಥಳವನ್ನು ಮತ್ತು ಸರಿಯಾದ ಸಮಯವನ್ನು ಸಿದ್ಧಪಡಿಸುತ್ತಿದ್ದನು. ಕರ್ತನಾದ ಯೇಸು ತನ್ನ ಪ್ರಾಣವನ್ನು ಈಡಾಗಿ (ತನ್ನನ್ನು ವಿಮೋಚನಾ ಶುಲ್ಕವಾಗಿ) ಕೊಟ್ಟನು. ಇದು ಮೊದಲೇ ಸಾಕ್ಷಿಯಾಗಿ ಘೋಷಿಸಲ್ಪಟ್ಟಿತ್ತು (ತಿಳಿಸಲ್ಪಟ್ಟಿತ್ತು) (2 ತಿಮೊಥೆಯನಿಗೆ 2:5,6).

## *ನಿತ್ಯತ್ವದ ಉದ್ದೇಶ*

**ಎಫೆಸದವರಿಗೆ 1:9,10**

**9 ತಾನು ಕಾಲವು (ಗ್ರೀಕ್ *ಕೈರೋಸ್*) ಪರಿಪೂರ್ಣವಾದಾಗ ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು ಆತನು ಕ್ರಿಸ್ತನಲ್ಲಿ ಮೊದಲೇ ನಿಷ್ಕರ್ಷೆ ಮಾಡಿಕೊಂಡಿದ್ದನು.**
**10 ಅದೇನೆಂದರೆ ಭೂ ಪರಲೋಕಗಳಲ್ಲಿರುವ ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬದೇ.**

ದೇವರ ನಿತ್ಯತ್ವದ ಉದ್ದೇಶದ ತೆರೆದಿಡುವಿಕೆಯು ಸಂಪೂರ್ಣತೆಯ ಸಮಯದಲ್ಲಿ ಜರುಗುತ್ತದೆ.

ನಮ್ಮ ದೃಷ್ಟಿಕೋನದಲ್ಲಿ ಇವೆಲ್ಲವೂ ತುಂಬಾ ಸಮಯ ತೆಗೆದುಕೊಳ್ಳುತ್ತಿರುವಂತೆ ತೋರುತ್ತದೆ. ಆದರೆ ತಾನು ಏನು ಮಾಡುತ್ತಿದ್ದಾನೆ ಮತ್ತು ಯಾವಾಗ ವಿಷಯಗಳನ್ನು ಸುತ್ತಿಕೊಳ್ಳುತ್ತಾನೆಂಬುದು ದೇವರಿಗೆ ಚೆನ್ನಾಗಿ ತಿಳಿದದೆ.

ದೇವರ ವಿಮೋಚನೆಯ ಕಾರ್ಯದಲ್ಲಿಯೂ ಸಹ ವೈಯಕ್ತಿಕ, ಅಥವಾ ಗುಂಪುಗಳು ಅಥವಾ ಜನರ ಜೀವಿತಗಳಲ್ಲಿ ಆತನು ತಕ್ಕ ಸಮಯದಲ್ಲಿ ಕೆಲಸ ಮಾಡುತ್ತಾನೆಂಬುದನ್ನು ನಾವು ನೋಡುತ್ತೇವೆ. ಯೋಬನ ಜೀವಿತದಲ್ಲಿ (ಯಾಕೋಬನು 5:7–11), ಯೋಸೇಫನ ಜೀವಿತದಲ್ಲಿ, (ಕೀರ್ತನೆಗಳು 105:19), ದೇವರು ಕಾಲಗಳು ಮತ್ತು ಋತುಗಳಿಗನುಸಾರವಾಗಿ ಕಾರ್ಯಮಾಡುತ್ತಾನೆ (ಪ್ರಸಂಗಿ 3:11).

ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ನಮ್ಮ ವೈಯಕ್ತಿಕ ಜೀವನದಲ್ಲಿ ದೇವರ ವಿಮೋಚನಾ ಕಾರ್ಯವನ್ನು ಬಿಚ್ಚಿಡುವುದರಿಂದ ನಾವು ತಾಳ್ಮೆಯಿಂದಿರಬೇಕು. ದೇವರು ಪುನಃಸ್ಥಾಪನೆ ತರುವಂತೆ, ಹರಿದು ಹೋದದ್ದನ್ನು ದೇವರು ಪುನಃ ಕಟ್ಟುತ್ತಿದ್ದಂತೆ, ಕಳೆದು ಹೋದದ್ದನ್ನು ಮರಳಿ ನಾವು ಪಡೆಯಲು ದೇವರ ಸಹಾಯ ಮಾಡಿದಂತೆ, ಸಮಯದ ಮೂಲಕ ಆತನೊಡನೆ ನಾವು ನಡೆಯಬೇಕು.

ದೇವರ ವಿಮೋಚನೆಯು ಕಾರ್ಯವು ಜನರನ್ನು ರಕ್ಷಣೆಗೆ ಮುನ್ನಡೆಸುವುದರಲ್ಲಿ, ಧರ್ಮಶಾಸ್ತ್ರವು ಅವರ *''ಸಂದರ್ಶನದ ದಿನದ''* ಕುರಿತು ಮಾತಾಡುವುದನ್ನು ನಾವು ನೋಡುತ್ತೇವೆ (1 ಪೇತ್ರನು 2:12). ಅದೇ ರೀತಿಯಾಗಿ ಥುವತ್ತೈರ ಸಭೆಯಲ್ಲಿನ ಸ್ತ್ರೀಯರಿಗಾಗಿ ಕರ್ತನು ಹೀಗೆ ಹೇಳಿದ್ದಾನೆ *''ದೇವರ ಕಡೆಗೆ ತಿರುಗಿಕೊಳ್ಳುವುದಕ್ಕೆ ನಾನು ಅವಳಿಗೆ ಸಮಯವನ್ನು ಕೊಟ್ಟೆನು. ಆದರೆ ದೇವರ ಕಡೆಗೆ ತಿರುಗಿ ಕೊಂಡು ತನ್ನ ಜಾರತ್ವವನ್ನು ಬಿಟ್ಟು ಬಿಡುವದಕ್ಕೆ ಅವಳಿಗೆ ಇಷ್ಟವಿಲ್ಲ''* (ಪ್ರಕಟನೆ 2:21). ಆದ್ದರಿಂದ ಹಾಗೆಯೇ ನಗರಕ್ಕಾಗಿ (ಯೆರೂಸಲೇಮ ಪಟ್ಟಣ) ಕರ್ತನಾದ ಯೇಸುವು ಅದರ ಮೇಲೆ ಕಣ್ಣೀರಿಟ್ಟನು. ಯಾಕೆಂದರೆ ಜನರು ತಮ್ಮ *''ಭೇಟಿಯ ಸಮಯವನ್ನು''* ಗುರ್ತಿಸಲು ಸೋತು ಹೋದರು (ಲೂಕ 19:41–44).

ದೇವರು ಜನರಿಗೆ ಸಮಯ ಕೊಡುತ್ತಾನೆ. ಹಾಗೆಯೇ ಅವರನ್ನು ಸೆಳೆಯಲು ಆತನು ಕಾರ್ಯನಿರತನಾಗಿರುತ್ತಾನೆ. ಆತನು ತಕ್ಕ ಸಮಯಗಳಲ್ಲಿ ಅವರನ್ನು ಸಂಧಿಸಿ ವಿಭಿನ್ನ ರೀತಿಯಲ್ಲಿ ಸೆಳೆಯುತ್ತಾನೆ.

ಜೊತೆ-ಕೆಲಸದವರಂತೆ ನಮ್ಮ ಗುರಿಯು ದೇವರು ಮಾಡುತ್ತಿರುವುದನ್ನು ಗುರುತಿಸಬೇಕು ಮತ್ತು ಅದರೊಡನೆ ಹರಿಯುತ್ತಿರಬೇಕು.

ದೇವರು ಏನನ್ನಾದರೂ ಮಾಡಬೇಕೆಂದು ನಿರ್ದೇಶಿಸಲು ಪ್ರಯತ್ನ ಮತ್ತು ತಾಳ್ಮೆಯಿಲ್ಲದವರಾಗಿ ಕಂಡುಬರುವ ಶೋಧನೆಯನ್ನು ನಿರಾಕರಿಸಬೇಕು. ದೇವರೊಂದಿಗೆ ಜೊತೆ-ಕೆಲಸದವರಂತೆ, ಯಾವುದೂ ಜರುಗುತ್ತಿಲ್ಲ ಎಂಬುದಾಗಿ ಕಾಣಿಸುವಾಗಲೂ, ದೇವರು ಕಾರ್ಯನಿರತನಾಗಿದ್ದಾನೆಂಬುದನ್ನು ನಾವು ಸ್ವೀಕರಿಸುತ್ತೇವೆ.

ಉದಾಹರಣೆಗೆ, ಕುಟುಂಬದ ಸದಸ್ಯರು ಕರ್ತನ ಬಳಿಗೆ ಬರುವುದನ್ನು ಮತ್ತು ದೇವರ ವಿಮೋಚನೆ ಕಾರ್ಯವು ಅವರ ಜೀವಿತದಲ್ಲಿ ನಡೆಯುವುದನ್ನು ನೋಡಲು ನೀವು ದೇವರೊಂದಿಗೆ ಕೆಲಸ ಮಾಡುವಾಗ, ಈ ಒಂದು ಪ್ರಕ್ರಿಯೆಯಲ್ಲಿ ಸಮಯದ ಮೂಲಾಂಶವನ್ನು ಅರ್ಥಮಾಡಿಕೊಳ್ಳಬೇಕು. ಇಂದು ರಕ್ಷಣೆಯ ದಿನ ಮತ್ತು ಎಲ್ಲರಿಗಾಗಿ ಅಂಗೀಕಾರದ ಸಮಯವಾಗಿದ್ದಾಗಲೂ (2 ಕೊರಿಂಥದವರಿಗೆ 6:2), ವಿಭಿನ್ನ ಸಮಯಗಳಲ್ಲಿ ದೇವರ ರಕ್ಷಣೆಯ ಪೂರೈಕೆಯನ್ನು ಪ್ರತಿಯೊಬ್ಬ ವ್ಯಕ್ತಿಯು ಪಡೆದುಕೊಳ್ಳುತ್ತಾನೆ. ವಿಮೋಚನೆ ಪ್ರಕ್ರಿಯೆಯು ಜರುಗುವುದಕ್ಕಾಗಿ ಸಮಯವನ್ನು ನೀವು ಕಾರ್ಯ ಮಾಡುತ್ತಿರುವ ವ್ಯಕ್ತಿ ಮತ್ತು ದೇವರಿಗೆ ಕೊಡಿರಿ. ಅವರು ವೈಯಕ್ತಿಕವಾಗಿ ಕ್ರಿಸ್ತನನ್ನು ಸಂಧಿಸುವಾಗ ಪ್ರತಿದಿನವು ಆ ಕ್ಷಣಕ್ಕೆ ಹತ್ತಿರವಾಗಿ ತರುವುದು ನಿಮಗೆ ತಿಳಿದಿದೆ ಮತ್ತು ದೇವರು ಅವರ ಜೀವಿತದಲ್ಲಿ ದೊಡ್ಡ ಕಾರ್ಯಗಳನ್ನು ಮಾಡುತ್ತಾನೆ. ಹೇಗಾದರೂ ಅಲ್ಲಿಯವರೆಗೆ ನೀನು ಈಗ ಏನು ಮಾಡಬೇಕು?

- ಅವಕಾಶಗಳು ಬರುವಾಗಲೆಲ್ಲಾ ನಂಬಿಕೆಯಲ್ಲಿ ದೇವರ ವಾಕ್ಯದ ಬೀಜಗಳನ್ನು ಬಿತ್ತುತ್ತೀರಿ. ಬೀಜಗಳು ಯಾವರೀತಿ ಬೆಳೆಯುತ್ತವೆ ಎಂಬುದನ್ನು ನೋಡಲೂ ಅಗೆಯಲು ಹೋಗಬೇಡಿರಿ. ನೀವು ಬಿತ್ತಿದ ಬೀಜವನ್ನು ನೀವು ನಾಶ ಮಾಡಬಹುದು. ಫಲನೀಡಲು ಆತನ ವಾಕ್ಯದ ಬಲದಲ್ಲಿ ಭರವಸೆಯಿಡಿರಿ.
- ಪ್ರಾರ್ಥನೆಯಲ್ಲಿ ಬೀಜಗಳಿಗೆ ನೀರು ಹಾಕಿರಿ ಮತ್ತು ಅವರ ವೈಯಕ್ತಿಕ ಜೀವಿತಗಳಿಗಾಗಿ ನಂಬಿಕೆಯ ಘೋಷಣೆ ಮಾಡಿರಿ.
- ಆ ವ್ಯಕ್ತಿಯ ಕಡೆಗೆ ದೇವರ ಕ್ಷಮಾಪಣೆ, ಕರುಣೆ ಮತ್ತು ಪ್ರೀತಿಯನ್ನು ಪ್ರದರ್ಶಿಸಿರಿ. ನಿಮ್ಮಲ್ಲಿ ಮತ್ತು ನಿಮ್ಮ ಮೂಲಕವಾಗಿ ದೇವರ ಪ್ರೀತಿಯನ್ನು ಅವರು ನೋಡಲಿ.

- ಅವರ ಜೀವಿತಗಳ ಮೇಲೆ ಪುನಃಸ್ಥಾಪನೆ ಮತ್ತು ವಿಮೋಚನೆಯನ್ನು ನುಡಿಯಿರಿ. ಅವರ ಜೀವಿತಗಳಿಗಾಗಿ ದೇವರ ಪ್ರವಾದನೆಯ ನಿರ್ದಿಷ್ಟಸ್ಥಾನದ ಕರೆ ನೀಡಿರಿ.

ಇತರ ಜನರುಗಳ ಜೀವಿತಗಳಲ್ಲಿ ಆತನ ವಿಮೋಚನೆಯ ಕಾರ್ಯಕ್ಕಾಗಿ ಆತನೊಡನೆ ನಾವು ಜೊತೆ-ಕೆಲಸದವರಂತೆ ಇರುವಾಗ ನಮಗೆ ವೈಯಕ್ತಿಕವಾಗಿ ದೇವರು ಕಾರ್ಯಮಾಡುತ್ತಾನೆಂಬುದನ್ನು ನೆನೆಸಿಕೊಳ್ಳಿರಿ. ಈ ಪ್ರಕ್ರಿಯೆಯ ಮೂಲಕವಾಗಿ ದೇವರ ಕುರಿತು ಅತ್ಯಧಿಕವಾಗಿ ನಾವು ಕಲಿಯುತ್ತೇವೆ. ಬೇರೊಬ್ಬರ ಜೀವಿತದಲ್ಲಿ ಆತನ ವಿಮೋಚನೆ ಕಾರ್ಯವನ್ನು ನಾವು ಹುಡುಕುವಾಗ ನಮ್ಮನ್ನು ನಾವೇ ಬದಲಾಯಿಸಿಕೊಳ್ಳುತ್ತೇವೆ.

ನಮ್ಮ ಸ್ವಂತ ವೈಯಕ್ತಿಕ ಜೀವಿತದಲ್ಲಿ ದೇವರ ವಿಮೋಚನೆಯ ಕಾರ್ಯವನ್ನು ನಾವು ಹುಡುಕುವಾಗ ನಮ್ಮ ಸ್ವಂತ ಜೀವಿತಗಳಲ್ಲಿ ಇಂತಹದೇ ಸತ್ಯಗಳನ್ನು ಅನ್ವಯಿಸಿಕೊಳ್ಳೋಣ.

## ಬಲಿದಾನ

ದೇವರ ವಿಮೋಚನಾ ಪ್ರಕ್ರಿಯೆಯ ಎರಡನೆಯ ಪ್ರಮುಖ ಮೂಲ ಅಂಶವು ತ್ಯಾಗವಾಗಿದೆ.

### *ದೇವರ ವಿಮೋಚನೆಯ ದೊಡ್ಡ ಯೋಜನೆಯಲ್ಲಿ ಬಲಿದಾನ*

ವಿಮೋಚನೆಯು ಸಾಧ್ಯಕರವಾಗಿದೆ. ಯಾಕಂದರೆ ವಿಮೋಚನೆಯ ಬೆಲೆಯು (ಬಿಡುಗಡೆ ಶುಲ್ಕ, ತ್ಯಾಗ) ಪಾವತಿಸಲ್ಪಟ್ಟಿದೆ. ಕರ್ತನಾದ ಯೇಸು ತನ್ನನ್ನೇ ಎಲ್ಲರಿಗಾಗಿ ವಿಮೋಚನೆಯ ಬೆಲೆ ಅಥವಾ ಬಿಡುಗಡೆಯ ಶುಲ್ಕದಂತೆ ನೀಡಿದ್ದಾನೆ.

**1 ತಿಮೊಥೆಯನಿಗೆ 2:5,6**

**5 ಏಕೆಂದರೆ ದೇವರು ಒಬ್ಬನೇ, ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ. ಆತನು ಮನುಷ್ಯನಾಗಿರುವ ಕ್ರಿಸ್ತಯೇಸುವೇ;**
**6 ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. ಇದೇ ತಕ್ಕ ಸಮಯಗಳಲ್ಲಿ ಹೇಳಬೇಕಾದ ಸಾಕ್ಷಿಯು.**

ತಪ್ಪು ನಡತೆಗಳಿಗಾಗಿ ಅಥವಾ ಸಾಲದ ತೀರಿಸುವಿಕೆಗಾಗಿ ಪ್ರಾಯಶ್ಚಿತ್ತದಂತೆ ಬಲಿದಾನ ನೀಡಲಾಗುತ್ತದೆ. ಪ್ರಾಯಶ್ಚಿತ್ತವು ವಿಮೋಚನೆಯನ್ನು ಸಾಧ್ಯಕರವಾಗಿಸುತ್ತದೆ.

### *ವಿಮೋಚನೆಗಾಗಿ ಅಗತ್ಯವಿರುವ ಬಲಿದಾನದ ಹಳೆಯ ಒಡಂಬಡಿಕೆ ತಿಳುವಳಿಕೆ*

ಬಲಿದಾನ ರಕ್ತಸಂಬಂಧಿ–ವಿಮೋಚಕನಲ್ಲಿ ಕಾಣಿಸುತ್ತದೆ. ಒಬ್ಬ ಮನುಷ್ಯನು ಸಾಲದಲ್ಲಿದ್ದರೆ ರಕ್ತಸಂಬಂಧಿ–ವಿಮೋಚಕನು ಅವನ ವಿಮೋಚನೆಗಾಗಿ ಬೆಲೆಯನ್ನು ಪಾವತಿಸುತ್ತಾನೆ.

ಹಳೆಯ ಒಡಂಬಡಿಕೆಯಲ್ಲಿ, ಎಲ್ಲಾ ತರದ ದೋಷ ಪರಿಹಾರಕ ಯಜ್ಞಗಳು (ಉದಾಹರಣೆಗೆ ದಹನ ಬಲಿಗಳು) ''ಪ್ರಾಯಶ್ಚಿತ್ತದ'' (ಕಾಪರ್) ವಿಧಗಳಲ್ಲಿ ವಿವರಿಸಲ್ಪಟ್ಟದೆ. ಪ್ರಾಯಶ್ಚಿತ್ತದ ವಾರ್ಷಿಕ ದಿನವು (ಯವಮ್‌ಕಿಪ್ಪೂರ್) ಯಾಜಕಕಾಂಡ 16ರಲ್ಲಿ ವಿವರವಾಗಿ ವ್ಯಾಖ್ಯಾನಿಸಿದಂತೆ ಕ್ರಿಸ್ತನ ವಿಮೋಚನಾ ಕಾರ್ಯವನ್ನು ಸೂಚಿಸುತ್ತಿತ್ತು.

ಆತ್ಮೀಕ ಯಜ್ಞಗಳಾದ ಮಧ್ಯಸ್ಥಿಕೆ, ಆರಾಧನೆ, ಒಂದು ಬಿಡುಗಡೆಯ ಶುಲ್ಕದಂತೆ ಸೇವೆಸಲ್ಲಿಸುವ, ಬಿಡುಗಡೆಗಾಗಿ ವಿಮೋಚನೆಯ ಒಂದು ಬೆಲೆ, ಹಳೆಯ ಒಡಂಬಡಿಕೆಯಲ್ಲಿ ಕಾಣುವಂತೆ ಕಾರ್ಯನಿರ್ವಹಿಸುತ್ತವೆ.

ಸತ್ಯವೇದದ ಬಹಳ ಹಳೆಯ ಪುಸ್ತಕವಾದ ಯೋಬನ ಪುಸ್ತಕದಲ್ಲಿ ಸಹ ನೋಡುವಂತೆ ವಿಮೋಚನೆಯ ಬೆಲೆಯಂತೆ (ಬಿಡುಗಡೆಗಾಗಿ) ಒಂದು ಬಿಡುಗಡೆಯ ಶುಲ್ಕವು ಅಗತ್ಯವಾಗಿತ್ತೆಂದು ಅರ್ಥಮಾಡಿಕೊಳ್ಳಬೇಕು.

**ಯೋಬನು 33:23,24**

**[23] ಮನುಷ್ಯ ಕರ್ತವ್ಯವನ್ನು ತೋರಿಸತಕ್ಕ ಸಹಸ್ರದೂತರಲ್ಲಿ ಒಬ್ಬನು ಅವನಿಗೆ ಮಧ್ಯಸ್ಥನಾಗಿ ಬೇಡುವದರಿಂದ,**

**[24] ದೇವರು ಒಂದುವೇಳೆ ಆ ಮನುಷ್ಯನಿಗೆ ಮೆಚ್ಚಿ ಈಡು ಸಿಕ್ಕಿತು ಅಧೋಲೋಕಕ್ಕೆ ಇಳಿಯದಂತೆ ಇವನನ್ನು ರಕ್ಷಿಸು ಎಂದು ಅಪ್ಪಣೆ ಕೊಟ್ಟರೆ.**

ಯೋಬನು ತನ್ನ ತೊಂದರೆಗಳ ಮೂಲಕ ಹಾದು ಹೋಗುವಾಗ ಯಾರಾದರೂ ಅವನ ಪರವಾಗಿ ದೇವರ ಮುಂದೆ ನಿಂತು ಮಧ್ಯಸ್ಥಿಕೆ ವಹಿಸಿ, ಚಿಂತಿಸಿ ಮತ್ತು ಅವನನ್ನು ಹೊರಗಡೆ ತರುವುದಕ್ಕಾಗಿ ಮಧ್ಯಸ್ಥಿಕೆಗಾರನಿಗಾಗಿ ಅವನು ಹಾತೊರೆಯುತ್ತಿದ್ದನು.

**ಯೋಬನು 9:32,33**

**[32] ಆತನು ನನ್ನಂಥವನಲ್ಲ ಮನುಷ್ಯನಲ್ಲ, ನಾನು ಆತನೊಂದಿಗೆ ವಾದಿಸುವದು ಹೇಗೆ? ನಾವಿಬ್ಬರೂ ನ್ಯಾಯಾಸನದ ಮುಂದೆ ಕೂಡುವುದು ಹೇಗೆ?**

**[33] ನಮ್ಮಿಬ್ಬರ ಮೇಲೆ ಕೈಯಿಡುವವನಾಗಿಯೂ ಮಧ್ಯಸ್ಥನಾಗಿಯೂ ಇರುವ ನ್ಯಾಯಾಧಿಪತಿಯು ಯಾರೂ ಇಲ್ಲ.**

**ಯೋಬನು 16:21**
**ನನ್ನ ನ್ಯಾಯವನ್ನು ದೇವರ ಮುಂದೆಯೂ ಸ್ಥಾಪಿಸಲಿ ಎಂದು ದೇವರಿಗೇನೇ ಕಣ್ಣೀರು ಸುರಿಸುತ್ತೇನೆ.**

ದೇವರ ಜನರಿಗಾಗಿ ಮೋಶೆಯು ಮಧ್ಯಸ್ಥಿಕೆವಹಿಸಿದನು. ಮತ್ತು ಕೆಲವೊಮ್ಮೆ ಅವರು ಸ್ವತಃದೇವರ ವಿರುದ್ಧ ದಂಗೆ ಎದ್ದಾಗಲೂ ಅವರ ವಿಮೋಚನಾ ನಿರ್ದಿಷ್ಟಸ್ಥಾನದ ಮೂಲಕವಾಗಿ ದೇವರು ಅವರನ್ನು ತೆಗೆದುಕೊಂಡು ಹೋದದ್ದನ್ನು ಕಂಡನು.

**ಕೀರ್ತನೆಗಳು 106:23**
**ಆದದರಿಂದ ಆತನು ಅವರನ್ನು ಸಂಹರಿಸುವೆನೆನ್ನಲು ಆತನು ಆರಿಸಿಕೊಂಡ ಮೋಶೆಯು ಮಧ್ಯಸ್ಥನಾಗಿ ಅವರನ್ನು ಸಂಹರಿಸಿದಂತೆ ಆತನ ಕೋಪವನ್ನು ಶಾಂತಪಡಿಸಿದನು.**

## *ಕ್ರಿಸ್ತನ ಒದಗಿಸುವಿಕೆಯನ್ನು ಬಿಡುಗಡೆಗೊಳಿಸುವುದು*

ಕರ್ತನಾದ ಯೇಸು ಈಗಾಗಲೇ ಎಲ್ಲಾ ಮಾನವ ಕುಲಕ್ಕಾಗಿ ರಕ್ಷಣೆಯನ್ನು (ವಿಮೋಚನೆ) ಒದಗಿಸಿದ್ದಾನೆ. ಆದಾಗ್ಯೂ ಆತನ ವಿಮೋಚನೆಯನ್ನು ವೈಯಕ್ತಿಕವಾಗಿ ಅನುಭವಿಸಲು ಜನರಿಗೆ ಒದಗಿಸಿದ್ದನ್ನು ತಲುಪಿಸಲು ನಾವು ಆತನ ರಾಯಭಾರಿಗಳಾಗಿದ್ದೇವೆ. ಆತನ ವಿಮೋಚನೆಯ ಪ್ರಕ್ರಿಯೆಯಲ್ಲಿ ಜೊತೆ-ಕೆಲಸದವರುಗಳಾಗಿ, ನಾವು ತ್ಯಾಗ ಮಾಡಲು ಸಿದ್ಧರಾಗಿರಬೇಕು. ಈ *''ತ್ಯಾಗವು''* ಪ್ರಾರ್ಥನೆ, ಮಧ್ಯಸ್ಥಿಕೆ ವಹಿಸುವುದು, ಹಣಕಾಸಿನಲ್ಲಿ ಕೊಡುವಿಕೆ, ಕಷ್ಟಕರವಾದ ಸ್ಥಳಗಳಿಗೆ ಹೋಗುವುದು ಸೌಕರ್ಯಗಳನ್ನುಬಿಟ್ಟುಕೊಡುವುದು, ಅಥವಾ ನಾವು ಪಾವತಿಸುವ ಬೇರೆ ಇತರ ಬೆಲೆ ಮುಂತಾದ ಪರಿಭಾಷೆಯಲ್ಲಿರಬಹುದು.

ಇಲ್ಲಿ ಮಧ್ಯಸ್ಥಿಕೆಯ ಪಾತ್ರವನ್ನು ಒತ್ತಿ ಹೇಳಲು ನಾವು ಬಯಸುತ್ತೇವೆ. ಕ್ರಿಸ್ತನ ರಕ್ಷಣೆಯ ಪೂರೈಕೆಯ ಬಿಡುಗಡೆಯ ಈ ಪ್ರಕ್ರಿಯೆಯ ಭಾಗವಾಗಿ ರಕ್ಷಿಸಲ್ಪಡುವವರ ಪರವಾಗಿ ಮಧ್ಯಸ್ಥಿಕೆ ನೀಡುವುದಾಗಿದೆ. ಶಿಲುಬೆಯ ಮೇಲೆ ಕ್ರಿಸ್ತನ ತ್ಯಾಗವು ಮಧ್ಯಸ್ಥಿಕೆಯ ಕಾರ್ಯವೆಂಬುದಾಗಿ ಕರೆಯಲ್ಪಟ್ಟಿದೆ (ಯೆಶಾಯ 53:12).

ಮಧ್ಯಸ್ಥಿಕೆಯಂತಹ ಆತ್ಮೀಕ ತ್ಯಾಗಗಳು ದೇವರ ವಿಮೋಚನಾ ಪ್ರಕ್ರಿಯೆಯಲ್ಲಿ ಪ್ರಮುಖ ಮೂಲ ಅಂಶಗಳಾಗಿವೆ. ಮಧ್ಯಸ್ಥಿಕಗಾರನು ಒಂದು ಬಲಿತ್ಯಾಗವನ್ನು, ಒಂದು ಬಿಡುಗಡೆ ಶುಲ್ಕವನ್ನು ಆತನು ಗುರುತಿಸಿರುವುದರಿಂದ ಆತನು ವಿಮೋಚಿಸುತ್ತಾನೆ. ಆದಕಾರಣ ನೀವು ಬೇರೆಯವರಿಗಾಗಿ ಮಧ್ಯಸ್ಥಿಕೆ ವಹಿಸುತ್ತಿರುವಾಗ ಅದು ಅವರ ಜೀವಿತದಲ್ಲಿ ದೇವರ ವಿಮೋಚನಾ ಕಾರ್ಯಕ್ಕೆ ಕೀಲಿಕೈಯಾಗಿರುತ್ತದೆ.

ಅವರ ವಿಮೋಚನೆಗಾಗಿ ನಾವು ಬೆಲೆಯನ್ನು ಪಾವತಿಸುತ್ತಿದ್ದೇವೆಂಬುದಾಗಿ ಇದರ ಅರ್ಥವಲ್ಲ. ಒಂದೇ ಒಂದು ಸಂಪೂರ್ಣ ಯಜ್ಞವಿದೆ. ಅದನ್ನು ಕ್ರಿಸ್ತನು ಈಗಾಗಲೇ ಪಾವತಿಸಿದ್ದಾನೆ. ಬದಲಿಗೆ ದೇವರ ವಿಮೋಚನೆಯ ಪ್ರಕ್ರಿಯೆಯಲ್ಲಿ ಜೊತೆ–ಕೆಲಸದವರಾಗಿ ಜನರಿಗೆ ಒದಗಿಸಿದ್ದನ್ನು ಪಡೆಯಲು ಮತ್ತು ಜನರು ಅನುಭವಿಸುವ ಕ್ರಮದಲ್ಲಿ ತ್ಯಾಗಮಾಡುವ, ನಮ್ಮ ಭಾಗವನ್ನು ನಾವು ಮಾಡುತ್ತಿದ್ದೇವೆ (ಕೊಲೊಸ್ಸೆಯವರಿಗೆ 1:24,25ರಲ್ಲಿ ಪೌಲನು ವ್ಯಾಖ್ಯಾನಿಸಿದ್ದನ್ನು ನೋಡಿರಿ). ಅವರುಗಳು ನಮ್ಮ ಯಜ್ಞದ ನಿಮಿತ್ತದಿಂದ ರಕ್ಷಿಸಲ್ಪಡಲಿಲ್ಲ, ಆದರೆ ಯೇಸುವು ಅವರಿಗಾಗಿ ಮಾಡಿದ್ದರಿಂದ ಮಾತ್ರ ರಕ್ಷಣೆ ಹೊಂದಿದ್ದಾರೆ. ಆತನು ವಿಮೋಚಿಸಲು ಹುಡುಕುವ ನೊಂದಂತಹ ಜನರನ್ನು ಸಂಧಿಸುವ ಆತನ ವಿಮೋಚನೆ ಪ್ರಕ್ರಿಯೆಯಲ್ಲಿ ದೇವರೊಂದಿಗೆ ನಾವು ಜೊತೆ–ಕೆಲಸದವರು ಮಾತ್ತವೇ ಆಗಿದ್ದೇವೆ.

ಆತ್ಮೀಕ ಯಜ್ಞಗಳಾದ ಪ್ರಾರ್ಥನೆ, ಆರಾಧನೆ, ಮಧ್ಯಸ್ಥಿಕೆ ಮುಂತಾದವುಗಳನ್ನು ಸಲ್ಲಿಸುವಾಗ ನಿಮ್ಮ ಸ್ವಂತ ಜೀವಿತದಲ್ಲಿ ದೇವರ ವಿಮೋಚನೆ ಕಾರ್ಯವನ್ನು ಪಡೆಯಲು ನಿಮ್ಮನ್ನು ಸಿದ್ಧಗೊಳಿಸುತ್ತದೆ. ನಿಮ್ಮ ಪರವಾಗಿ ಇತರರು ಆತ್ಮೀಕ ಯಜ್ಞಗಳನ್ನು ಸಮರ್ಪಿಸುವುದನ್ನು ಪಡೆಯುವುದು ತುಂಬಾ ಬಲಿಯುತವಾಗಿದೆ.

ಅದೇರೀತಿಯಾಗಿ, ನಮ್ಮ ಸುತ್ತಮುತ್ತಲಿನ ಜನರ ಜೀವಿತಗಳಲ್ಲಿ ಆತನ ವಿಮೋಚನೆ ಕಾರ್ಯವನ್ನು ತರಲು ದೇವರೊಂದಿಗೆ ಜೊತೆ-ಕೆಲಸದವರಂತೆ ನಾವು ಅವರ ಪರವಾಗಿ ಆತ್ಮೀಕ ಯಜ್ಞಗಳನ್ನು ಸಮರ್ಪಿಸುತ್ತೇವೆ. ನಾವು ಹೋಗಿ ಸೇವೆ ಮಾಡಲು ಮತ್ತು ಅವರನ್ನು ಸಂಧಿಸಲು ಯಜ್ಞಗಳನ್ನು ಮಾಡುತ್ತೇವೆ.

## ಕ್ಷಮಾಪಣೆ

ದೇವರ ವಿಮೋಚನಾ ಪ್ರಕ್ರಿಯೆಯಲ್ಲಿ ಮುಂದಿನ ಮುಖ್ಯ ಮೂಲಾಂಶವು ಕ್ಷಮಾಪಣೆಯಾಗಿದೆ.

**ಎಫೆಸದವರಿಗೆ 1:7**
**ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ.**

ದೇವರು ಮಗನಾದ ಯೇಸುಕ್ರಿಸ್ತನ ಮೂಲಕವಾಗಿ ನಮಗೆ ಕೊಡುವ ಕ್ಷಮಾಪಣೆಯನ್ನು ನಾವು ವೈಯಕ್ತಿಕವಾಗಿ ಹೊಂದಿಕೊಂಡಿರಬೇಕು. ನಮ್ಮ ಒಂದು ದೊಡ್ಡ ಸಮಸ್ಯೆಯೆಂದರೆ, ದೇವರು ನಮ್ಮನ್ನು ಕ್ಷಮಿಸುತ್ತಾನೆ ಎಂದು ನಾವು ಬೌದ್ಧಿಕವಾಗಿ ಅರ್ಥಮಾಡಿಕೊಂಡರೆ. ನಮ್ಮನ್ನು ನಾವು ಕ್ಷಮಿಸಲ್ಪಟ್ಟ ಜನರಂತೆ ನೋಡಲು ಸಾಧ್ಯವಾಗುವುದಿಲ್ಲ. ಅಥವಾ ಕೆಲವೊಮ್ಮೆ ನಾವು ಮಾಡಿದ ತಪ್ಪಿಗೆ ನಮ್ಮನ್ನು ಕ್ಷಮಿಸಲು ಸಾಧ್ಯವಾಗುವುದಿಲ್ಲ. ನಾವು ಇರುವ ಸ್ಥಳಕ್ಕೆ ನಡೆಸಿರುವಂತಹ ಅಧಿಕವಾದ ತಪ್ಪನ್ನು ನಾವು ಮಾಡಿರಬಹುದು ಎಂಬುದು ಸತ್ಯವಾಗಿದೆ. ಆದಾಗ್ಯೂ ಆತನ ಮಗನಾದ ಯೇಸುಕ್ರಿಸ್ತನ ನಂಬಿಕೆಯಲ್ಲಿನ ನಿಮಿತ್ತದಿಂದ ಮತ್ತು ಆತನ ವಿಮೋಚಿಸುವ ರಕ್ತದ ಬಲದಲ್ಲಿ ನಾವು ಕ್ಷಮಿಸಲ್ಪಟ್ಟವರಾಗಿ ನಿಂತುಕೊಂಡಿದ್ದೇವೆ. ಆದದರಿಂದ ನಾವು ಎಲ್ಲಾ ಅಪರಾಧ, ಅವಮಾನ ಮತ್ತು ಖಂಡನೆಯಿಂದ ಸ್ವತಂತ್ರರಾಗಿ ನಡೆಯುತ್ತೇವೆ.

ಕೆಲವೊಮ್ಮೆ ನಾವು ನಮ್ಮನ್ನು ಸಮಸ್ಯೆಗಳಲ್ಲಿ ಗುರ್ತಿಸಿಕೊಳ್ಳುವುದು ಇತರ ಜನರು ನಮ್ಮ ವಿರುದ್ಧ ಮಾಡಿದಂತಹ ತಪ್ಪಿನಿಂದಾಗಿರಬಹುದು. ನಾವು ಕ್ಷಮಿಸಲ್ಪಟ್ಟಂತೆ ನಮಗೆ ತಪ್ಪು ಮಾಡಿದವರಿಗೆ ಕ್ಷಮಾಪಣೆಯನ್ನು ನಾವು ಬಿಡುಗಡೆ ಮಾಡಬೇಕು. ಅವರ ವಿರುದ್ಧವಾಗಿ ಯಾವುದನ್ನಾದರೂ ಹಿಡಿದಿಟ್ಟುಕೊಳ್ಳಲು ನಮಗೆ ಹಕ್ಕಿಲ್ಲ. ಕ್ಷಮಾಪಣೆಯನ್ನು ಬಿಡುಗಡೆ ಮಾಡುವುದರಲ್ಲಿ ಇದು ತುಂಬಾ ಶಕ್ತಿಶಾಲಿಯಾಗಿರುವಂತದ್ದು. ಸ್ತೆಫನನು ತನ್ನ ಮೇಲೆ ಕಲ್ಲೆಸೆಯುವ ಮೇಲ್ವಿಚಾರಣೆ ವ್ಯಕ್ತಿಯಾದ ಸೌಲನಿಗೆ ಕ್ಷಮಾಪಣೆ ಬಿಡುಗಡೆ ಮಾಡಿದನು. ನಾವು ನೋಡುವಂತಹ ಮುಂದಿನ ಸಂಗತಿಯು ಸೌಲನು ಯೇಸುವನ್ನು ಸಂಧಿಸಿದನು!

ಅದೇರೀತಿಯಾಗಿ, ಜನರ ಜೀವಿತಗಳಲ್ಲಿ ದೇವರ ವಿಮೋಚನೆ ಕಾರ್ಯವು ಜರುಗುವುದನ್ನು ನೋಡಲೂ ನಾವು ಕೆಲಸ ಮಾಡುವಾಗ, ಜನರ ಜೀವಿತಗಳಿಗೆ ದೇವರ ಕ್ಷಮಾಪಣೆಯ ಭರವಸೆಯನ್ನು ನಾವು ತರಬೇಕು. ಅವರು ತೊಳೆಯಲ್ಪಟ್ಟವರು, ನೀತಿವಂತರೆಂದು ನಿರ್ಣಯಿಸಲ್ಪಟ್ಟವರು ಮತ್ತು ಕ್ರಿಸ್ತನಲ್ಲಿ ಶುದ್ಧೀಕರಿಸಲ್ಪಟ್ಟವರು (1 ಕೊರಿಂಥದವರಿಗೆ 6:11) ಆಗಿದ್ದಾರೆ ಎಂಬುದಾಗಿ ಅವರು ತಿಳಿಯುವಂತೆ ಮಾಡಬೇಕು. ಮತ್ತು ಅವರಿಗೆ ವಿರುದ್ಧವಾಗಿ ದೇವರು ಯಾವುದನ್ನು ಹಿಡಿದಿಟ್ಟುಕೊಳ್ಳುವುದಿಲ್ಲ.

ದೇವರ ವಿಮೋಚನೆಯ ಪ್ರಕ್ರಿಯೆಯು, ವಿಮೋಚಿಸಲ್ಪಟ್ಟ ಜನರಂತೆ ಸತ್ಕರಿಸುವ ಮತ್ತು ನೋಡುವಂತಹ ಸಮುದಾಯಕ್ಕೆ ಜನರು ಸ್ವೀಕರಿಸುವುದನ್ನು ಒಳಗೊಂಡಿದೆ. ಕೊರಿಂಥ ಸಭೆಯಲ್ಲಿ ಅನೈತಿಕತೆಯ ಪಾಪ ಮಾಡಿದಂತ ವ್ಯಕ್ತಿ ಅವನು ಪಶ್ಚಾತ್ತಾಪಪಟ್ಟಾಗ ಒಬ್ಬ ಕ್ಷಮಿಸಲ್ಪಟ್ಟ ವ್ಯಕ್ತಿಯಂತೆ ಅಂಗೀಕರಿಸಲ್ಪಟ್ಟನು.

**2 ಕೊರಿಂಥದವರಿಗೆ 2:6-11**

**6 ಇಂಥವನಿಗೆ ನಿಮ್ಮಲ್ಲಿ ಹೆಚ್ಚಾದ ಜನರಿಂದುಂಟಾದ ಆ ಶಿಕ್ಷೆಯೇ ಸಾಕು.**

**7 ಇನ್ನೂ ಅವನನ್ನು ಶಿಕ್ಷಿಸದೆ ಮನ್ನಿಸಿರಿ, ಸಂತೈಸಿರಿ, ಇಲ್ಲವಾದರೆ ಅವನು ಅಧಿಕವಾದ ದುಃಖದಲ್ಲಿ ಮುಳುಗಿ ಹೋದಾನು.**

**8 ಆದದರಿಂದ ಅವನಿಗೆ ನಿಮ್ಮ ಪ್ರೀತಿಯನ್ನು ನಿಶ್ಚಯಪಡಿಸಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ.**

**9 ಸರ್ವ ವಿಷಯದಲ್ಲೂ ನೀವು ವಿಧೇಯರಾಗಿದ್ದೀರೋ ಏನೋ ನಿಮ್ಮ ಗುಣವನ್ನು ಪರೀಕ್ಷಿಸಿ ತಿಳುಕೊಳ್ಳಬೇಕೆಂಬುವ ಉದ್ದೇಶದಿಂದಲೇ ಮೊದಲು ಬರೆದೆನು.**

**10 ನೀವು ಯಾರಿಗೆ ಯಾವುದನ್ನು ಮನ್ನಿಸುತ್ತೀರೋ ನಾನು ಸಹ ಮನ್ನಿಸುತ್ತೇನೆ. ನಾನು ಯಾವದನ್ನಾದರೂ ಮನ್ನಿಸಿದ್ದರೆ ಕ್ರಿಸ್ತನ ಸನ್ನಿಧಾನದಲ್ಲಿ ನಿಮ್ಮ ನಿಮಿತ್ತವೇ ಮನ್ನಿಸಿದೆನು.**

**11 ಸೈತಾನನು ನಮ್ಮನ್ನು ವಂಚಿಸಿ ನಷ್ಟಪಡಿಸಬಾರದು, ಅವನ ಯೋಚನೆಗಳನ್ನು ನಾವು ಅರಿಯದವರಲ್ಲವಲ್ಲಾ.**

ಫಿಲೆಮೋನನ ಪುಸ್ತಕವು ಓಡಿಹೋದ ಓನೇಸಿಮನೆಂಬ ದಾಸನ ಕುರಿತ ಅದ್ಭುತವಾದ ಕಥೆಯಾಗಿದೆ. ಇವನು ತನ್ನ ಯಜಮಾನನಾದ, ಪೌಲನ ಜೊತೆ-ಕೆಲಸದವರಲ್ಲಿ ಒಬ್ಬನಾಗಿದ್ದ ಮತ್ತು ಒಬ್ಬ ವಿಶ್ವಾಸಿಯಾಗಿದ್ದ ಕೊಲೊಸ್ಸೆಯಲ್ಲಿನ ಫಿಲೆಮೋನನಿಂದ ಕಳ್ಳತನ ಮಾಡಿದ್ದನು. ಓನೇಸಿಮನು ಓಡಿಹೋಗುತ್ತಾನೆ ಮತ್ತು ಪೌಲನನ್ನು ರೋಮ್ ಸೆರೆಮನೆಯಲ್ಲಿ ಭೇಟಿ ಮಾಡುತ್ತಾನೆ! ಅಲ್ಲಿ ಪೌಲನು ಅವನನ್ನು ಕರ್ತನ ಕಡೆಗೆ ನಡೆಸುತ್ತಾನೆ ಮತ್ತು ತನ್ನ ಪತ್ರದೊಡನೆ ಫಿಲೆಮೋನನ ಬಳಿಗೆ ಅವನನ್ನು ಕಳುಹಿಸುತ್ತಾನೆ. ಪೌಲನು ಫಿಲೆಮೋನನಿಗೆ ಓನೇಸಿಮನನ್ನು ಕ್ಷಮಿಸಲು ಮತ್ತು ಸ್ವೀಕರಿಸಲು ಒತ್ತಾಯಿಸುವಂತಹ ಸುಂದರವಾದ ಕಥೆಯಾಗಿದೆ.

**ಫಿಲೆಮೋನನಿಗೆ 1:12,16,17**

**12 ಅವನು ನನಗೆ ಪ್ರಾಣದಂತಿದ್ದರೂ ಅವನನ್ನು ನಿನ್ನ ಬಳಿಗೆ ಹಿಂದಕ್ಕೆ ಕಳುಹಿಸಿಕೊಟ್ಟಿದ್ದೇನೆ.**

**16 ಇನ್ನು ಮೇಲೆ ಅವನು ದಾಸನಾಗದೆ ದಾಸನಿಗಿಂತ ಉತ್ತಮನಾಗಿ ಪ್ರಿಯ ಸಹೋದರನಂತಾಗಬೇಕು. ಅವನು ನನಗೆ ಬಹಳ ಪ್ರಿಯನಾಗಿರುವಲ್ಲಿ ನಿನಗೆ ಲೋಕಸಂಬಂಧದಲ್ಲಿಯೂ ಕರ್ತನ ಸಂಬಂಧದಲ್ಲಿಯೂ ಇನ್ನೂ ಎಷ್ಟೋ ಪ್ರಿಯನಾಗಿರುವನು.**

**17 ಹಾಗಾದರೆ ನೀನು ನನ್ನನ್ನು ಜೊತೆಗಾರನೆಂದು ಎಣಿಸಿದರೆ ನನ್ನನ್ನು ಸೇರಿಸಿಕೊಳ್ಳುವ ಪ್ರಕಾರವೇ ಅವನನ್ನು ಸೇರಿಸಿಕೋ.**

ಈ ಲೋಕದಲ್ಲಿ ಆತನ ವಿಮೋಚನೆಯ ಪ್ರಕ್ರಿಯೆಯಲ್ಲಿ ದೇವರೊಡನೆ ಜೊತೆ-ಕೆಲಸದವರಾಗಿರುವ ಒಂದು ಸಮುದಾಯ ನಾವಾಗಿರಬೇಕಾದರೆ ಕ್ಷಮಾಪಣೆಯ ಬಲವನ್ನು ನಾವು ಅಭ್ಯಸಿಸಬೇಕು. ಕ್ಷಮಾಪಣೆಯು ಅವರ ಪಾಪಗಳ ವಿರುದ್ಧವಾಗಿ ಇನ್ನು ಮುಂದೆ ಯಾವುದನ್ನು ಇಟ್ಟುಕೊಳ್ಳುವುದಾಗಿದೆ. ಅವರನ್ನು ಖಂಡನೆಯ ಕಣ್ಣಿನೊಡನೆ ಇನ್ನೂ ಮುಂದೆ ನೋಡುವುದಿಲ್ಲ. ನಾವು ದೇವರ ಮುಂದೆ ಮತ್ತು ಪರಸ್ಪರರ ಮುಂದೆ ನಿಲ್ಲುವ ಸ್ವತಂತ್ರ ಮತ್ತು ಸ್ವಾತಂತ್ರ್ಯದಲ್ಲಿ ನಾವು ಸಂತೋಷಿಸುತ್ತೇವೆ.

## ಪುನಃಸ್ಥಾಪನೆ

ದೇವರ ವಿಮೋಚನ ಪ್ರಕ್ರಿಯೆಯ ನಾಲ್ಕನೇ ಪ್ರಮುಖ ಮೂಲ ಅಂಶವು ಪುನಃ ಸ್ಥಾಪನೆಯಾಗಿದೆ.

ದೇವರು ತನ್ನ ವಿಮೋಚನಾ ಹೃದಯದಿಂದ ವಿಷಯಗಳನ್ನು ಹೇಗೆ ನೋಡುತ್ತಾನೆ ಹೊರತು ಪ್ರಸ್ತುತವಾದ ವಿಷಯಗಳ ರೀತಿಯಲ್ಲಿ ಅಲ್ಲ. ವಿಮೋಚನಾ ಕಣ್ಣುಗಳು ಯಾವಾಗಲೂ ನಿರೀಕ್ಷೆಯೊಡನೆ ನೋಡುತ್ತವೆ. ವಿಮೋಚಕ ಕಣ್ಣುಗಳು ಭವಿಷ್ಯವು ಏನೆಂದು ಊಹಿಸುತ್ತದೆ ಮತ್ತು ಅದನ್ನು ನಿಜವಾಗಿಸಲು ಕೆಲಸ ಮಾಡುತ್ತದೆ. ವಿಮೋಚಕ ಕಣ್ಣುಗಳು ಪ್ರಸ್ತುತದ ವಿನಾಶದಿಂದ ಮಸುಕಾಗುವುದಿಲ್ಲ.

ಪುನಃ ಸ್ಥಾಪನೆಯು ಸ್ವತಃ ಒಂದು ಪ್ರಕ್ರಿಯೆಯಾಗಿದೆ, ಅಲ್ಲಿ ದೇವರು ವಿಷಯಗಳನ್ನು ತಮ್ಮ ಮೂಲ ಸ್ಥಿತಿಗೆ ಹಿಂತಿರುಗಿಸಲು ಪ್ರಾರಂಭಿಸುತ್ತಾನೆ. ಮತ್ತು ವಿಷಯಗಳನ್ನು ನಮ್ಮನ್ನು ಇನ್ನೂ ಉನ್ನತ ಮಟ್ಟಕ್ಕೆ ಏರಿಸುತ್ತಾನೆ. ನಾವು ಮೊದಲು ತಿಳಿದಿದ್ದಕ್ಕಿಂತಲೂ ಹೆಚ್ಚಿಸಿ.

ಪುನಃಸ್ಥಾಪನೆಗಾಗಿ ನಾವು ದೇವರನ್ನು ನಂಬಬೇಕು ಮತ್ತು ನಮ್ಮ ಜೀವನದಲ್ಲಿ ಮತ್ತು ನಮ್ಮ ಸುತ್ತಮುತ್ತಲಿನವರ ಜೀವನದಲ್ಲಿ ನಡೆಯುವಂತೆ ಕೆಲಸ ಮಾಡಬೇಕು. ಪುನಃಸ್ಥಾಪನೆ ನೋಡಲು, ನಾವು ನಂಬಿಕೆಯ ಕಣ್ಣುಗಳ ಮೂಲಕ ನೋಡಬೇಕು. ಮತ್ತು ನಂಬಿಕೆಯಿಂದ ಅದರೊಳಗೆ ಪ್ರಯಾಣಿಸಬೇಕು.

ದೇವರ ವಿಮೋಚನೆಯ ಕಾರ್ಯವು

- ಕಳೆದುಹೊದದ್ದನ್ನು ಚೇತರಿಸಿಕೊಡುತ್ತದೆ,
- ವ್ಯರ್ಥವಾದದ್ದನ್ನು ಪುನಃ ಪಡೆದುಕೊಳ್ಳುತ್ತದೆ,

- ಹಾಳಾದದ್ದನ್ನು ಪುನಃಸ್ಥಾಪಿಸುತ್ತದೆ,
- ನಾಶವಾದುದ್ದನ್ನು ಪುನಃ ನಿರ್ಮಿಸುತ್ತದೆ,
- ವಿಕಾರಗೊಂಡಿರುವುದನ್ನು ಸುಂದರಗೊಳಿಸುತ್ತದೆ,
- ಗಾಯಗೊಂಡಿದ್ದನ್ನು ಸ್ವಸ್ಥಪಡಿಸುತ್ತದೆ,
- ಸವೆದುಹೋದದ್ದನ್ನು ನವೀಕರಿಸುತ್ತದೆ,
- ಸಾಯುತ್ತಿರುವುದನ್ನು ಉಜ್ಜೀವನಗೊಳಿಸುತ್ತದೆ ಮತ್ತು
- ಸತ್ತದ್ದನ್ನು ಪುನರುತ್ಥಾನಗೊಳಿಸುತ್ತದೆ.

## ವೈಯಕ್ತಿಕ ಧ್ಯಾನ

1) ನಿಮ್ಮ ಸ್ವಂತ ಜೀವಿತದಲ್ಲಿ 4 ಪ್ರಮುಖ ಮೂಲಾಂಶಗಳಾದ ಸಮಯ, ಯಜ್ಞ, ಕ್ಷಮಾಪಣೆ ಮತ್ತು ಪುನಃಸ್ಥಾಪನೆಯನ್ನು ಪರಿಗಣಿಸುವುದರಿಂದ ನಿರ್ದಿಷ್ಟ ಜೀವಿತದ ಪರಿಸ್ಥಿತಿಗಳಿಂದ ವಿಮೋಚಿಸಲ್ಪಟ್ಟಿದ್ದನ್ನು ನೋಡಲು ಆತನ ವಿಮೋಚನಾ ಪ್ರಕ್ರಿಯೆಯಲ್ಲಿ ದೇವರೊಡನೆ ಹೇಗೆ ತೊಡಗಿಸಿಕೊಳ್ಳಬೇಕೆಂಬುದನ್ನು ವಿಚಾರಮಾಡಿರಿ.

2) ನೀವು ಕಾರ್ಯ ಮಾಡುತ್ತಿರುವ ಬೇರೆಯವರೊಡನೆ, 4 ಪ್ರಮುಖ ಮೂಲಾಂಶಗಳಾದ ಸಮಯ, ತ್ಯಾಗ, ಕ್ಷಮಾಪಣೆ ಮತ್ತು ಪುನಃ ಸ್ಥಾಪನೆಗಳು ಅವರ ಜೀವಿತದ-ಪರಿಸ್ಥಿತಿಗಳನ್ನು ವಿಮೋಚಿಸುವುದನ್ನು ನೋಡಲು ಆತನ ವಿಮೋಚನಾ ಪ್ರಕ್ರಿಯೆಯಲ್ಲಿ ದೇವರೊಂದಿಗೆ ನೀವು ಹೇಗೆ ತೊಡಗಿಸಿಕೊಳ್ಳಬಹುದೆಂಬುದನ್ನು ವಿಚಾರ ಮಾಡಿರಿ.

## ನಿಮ್ಮ ಪ್ರೀತಿ ಎಂದಿಗೂ ವಿಫಲವಾಗುವುದಿಲ್ಲ

ಕ್ರಿಸ್ ಕ್ವಿಲಾಲಾ ಅವರಿಂದ / ಯೇಸುವಿನ ಸಂಸ್ಕೃತಿ

**ಚರಣ 1**

ನಾನು ಓಡಿಹೋದರೂ ಯಾವುದು
ನನ್ನನ್ನು ಬೇರ್ಪಡಿಸಲು ಸಾಧ್ಯವಿಲ್ಲ
ನಿನ್ನ ಪ್ರೀತಿ ಸೋಲುವುದಿಲ್ಲ

ನಾನು ಇನ್ನೂ ತಪ್ಪುಗಳನ್ನು ಮಾಡುತ್ತೇನೆಂದು ನನಗೆ ಗೊತ್ತು
ಆದರೆ ಪ್ರತಿದಿನ ನೀನು ನನಗಾಗಿ ಹೊಸ ಕರುಣೆಯನ್ನು ದಯಪಾಲಿಸಿದ್ದಿ
ನಿನ್ನ ಪ್ರೀತಿ ಸೋತುಹೋಗುವುದಿಲ್ಲ.

**ಪಲ್ಲವಿ**

ಯುಗಗಳುದ್ದಕ್ಕೂ ನೀನು ಅದೇ ರೀತಿಯಲ್ಲಿದ್ದಿ
ನಿನ್ನ ಪ್ರೀತಿ ಎಂದಿಗೂ ಬದಲಾಗುವುದಿಲ್ಲ.
ರಾತ್ರಿಯಲ್ಲಿ ದುಃಖವಿರಬಹುದು, ಆದರೆ ಮುಂಜಾನೆಯಲ್ಲಿ ಆನಂದವು ಬರುತ್ತದೆ.

**ಚರಣ 2**

ಗಾಳಿ ಪ್ರಬಲವಾಗಿದೆ ಮತ್ತು ನೀರು ಆಳವಾಗಿದೆ
ಆದರೆ ಈ ತೆರೆದ ಸಮುದ್ರಗಳಲ್ಲಿ ನಾನು ಒಬ್ಬಂಟಿಗನಾಗಿಲ್ಲ,
ನಿನ್ನ ಪ್ರೀತಿ ಎಂದಿಗೂ ವಿಫಲವಾಗುವುದಿಲ್ಲ

ಆಳವಾದ ಹಳ್ಳ ತುಂಬಾ ವಿಸ್ತಾರವಾಗಿದೆ
ನಾನು ಇನ್ನೊಂದು ಬದಿಯನ್ನು ತಲುಪುತ್ತೇನೆಂದು ನಾನು ಎಂದಿಗೂ ಯೋಚಿಸಲಿಲ್ಲ, ಆದರೆ ನಿನ್ನ ಪ್ರೀತಿ ಎಂದಿಗೂ ವಿಫಲವಾಗುವುದಿಲ್ಲ

**ನಡುದಾರಿ**

ನನ್ನ ಒಳಿತಿಗಾಗಿ ನೀನು ಎಲ್ಲವನ್ನೂ ಅನೂಕೂಲಕರವಾಗುವಂತೆ ಮಾಡುತ್ತೀ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವನ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ–ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ 5000 ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಕಾರ್ಯಗಳು, ದೇವರು ಒಳ್ಳೆಯ ದೇವರಾಗಿದ್ದಾನೆ, ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಆತನು ಬಯಸುತ್ತಾನೆ. ಆತನು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ನಮಗೆ ಪ್ರಕಟಿಸುತ್ತಾನೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಸರಿ ಕಾಣದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಸುತ್ತದೆ ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''***ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ***'' ಎಂದು ಹೇಳುತ್ತದೆ **(ರೋಮಾಪುರದವರಿಗೆ 6:23)**. ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಜೀವದಿಂದ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ ಮತ್ತು ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ. ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ

ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ—ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

***''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''*** **(ಅಪೊಸ್ತಲರ ಕೃತ್ಯಗಳು 10:43).**

***''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವುದು ಎಂಬುದು''*** **(ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪಾಪ ಪರಿಹಾರಗಳನ್ನು ಹೊಂದಿಕೊಳ್ಳಬಹುದು.

*ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.*

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ, ನನ್ನ ಬಾಯಿಂದ ನೀನು ನನಗಾಗಿ ಮರಣವನ್ನು ಹೊಂದಿದೆ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು. ಆಮೆನ್*

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರಕ್ಕೆ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ಆಲ್ ಪೀಪಲ್ಸ್ ಸಭೆಯು **ಯೇಸು ಕಿಸ್ತನನ್ನು ಪ್ರೀತಿಸುವ, ವಾಕ್ಯದ ಮೇಲೆ ಕೇಂದ್ರಿಕರಿಸಲ್ಪಟ್ಟ, ಆತ್ಮನಿಂದ ತುಂಬಿಸಲ್ಪಟ್ಟ,** ಒಂದು ಸಜ್ಜುಗೊಳಿಸುವ ಕೇಂದ್ರ, ಸೇವಾ ತಳಹದಿಯ ಮತ್ತು ದೇಶಗಳನ್ನು ಸಂಧಿಸುವ ಒಂದು ಕುಟುಂಬ ಸಭೆಯಾಗಿದೆ.

- **ಕುಟುಂಬ ಸಭೆಯಾಗಿ,** ನಾವು ಕ್ರಿಸ್ತನ ಕೇಂದ್ರಿತ ಸಹಭಾಗಿತ್ವ, ದೇವರ ಸಭೆಯಂತೆ ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಪರಸ್ಪರ ಕಾಳಜಿ ಮತ್ತು ಸೇವೆ ಮಾಡುವಂತಹ ಒಂದು ಸಮುದಾಯವಾಗಿ ಒಟ್ಟಿಗೆ ಬೆಳೆಯುತ್ತೇವೆ.
- **ಒಂದು ಸಜ್ಜುಗೊಳಿಸುವ ಕೇಂದ್ರವಾಗಿ,** ನಾವು ಪ್ರತಿ ವಿಶ್ವಾಸಿಯು ವಿಜಯಶಾಲಿಯಾಗಿ ಜೀವಿಸಲು, ಕ್ರಿಸ್ತನಂತೆ ಪ್ರಬುದ್ಧರಾಗಿ ಮತ್ತು ಅವರ ಜೀವಿತಗಳಿಗಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ಸಜ್ಜುಗೊಳಿಸುತ್ತೇವೆ ಮತ್ತು ಅಧಿಕಾರ ನೀಡುತ್ತೇವೆ.
- **ಒಂದು ಸೇವಾ ನೆಲೆಯಾಗಿ,** ದೇವರ ವಾಕ್ಯದ ಮೂಲಕವಾಗಿ ಯೇಸುಕ್ರಿಸ್ತನ ಸಂಪೂರ್ಣ ಸುವಾರ್ತೆಯೊಂದಿಗೆ ಮತ್ತು ಪವಿತ್ರಾತ್ಮದ ಬಲದ ಅಪ್ರಾಕೃತ ತೋರ್ಪಡಿಸುವಿಕೆಗಳೊಡನೆ ನಮ್ಮ ನಗರ, ದೇಶ ಮತ್ತು ದೇಶಗಳನ್ನು ಆಶೀರ್ವದಿಸಲು ಅರ್ಥಪೂರ್ಣ ಸೇವೆಯಲ್ಲಿ ನಾವು ತೊಡಗುತ್ತೇವೆ.
- **ಪ್ರಪಂಚವನ್ನು ಸಂಧಿಸುವವರಾಗಿ,** ದೇವರ ರಾಜ್ಯಕ್ಕಾಗಿ ತಮ್ಮ ಪ್ರದೇಶಗಳ ಮೇಲೆ ಪ್ರಭಾವ ಬೀರುವ ದೈವಿಕ ನಾಯಕರು ಮತ್ತು ಆತ್ಮಭರಿತ ಸಭೆಗಳನ್ನು ಪೋಷಿಸುವುದರಿಂದ ಸ್ಥಳೀಯವಾಗಿ ಮತ್ತು ಜಾಗತಿಕವಾಗಿ ನಾವು ಸೇವೆ ಸಲ್ಲಿಸುತ್ತೇವೆ.

ಆಲ್ ಪೀಪಲ್ಸ್ ಸಭೆಯಲ್ಲಿನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ದತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕ ಕಾರ್ಯ, ಅದ್ಭುತಕಾರ್ಯ, ಮಹಾತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2:4,5; ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಮುಖ್ಯ ನೆಲೆಯೊಡನೆ ಭಾರತದಲ್ಲಿ ಅನೇಕ ಇತರ ಸಭೆಗಳನ್ನು ಹೊಂದಿದೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿರಿ. **apcwo.org/locations** ಅಥವಾ **contact@apcwo.org** ಗೆ ಇ-ಮೇಲ್ ಕಳುಹಿಸಿರಿ.

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

A Church in Revival
A Real Place Called Heaven
A Time for Every Purpose
Ancient Landmarks
Baptism in the Holy Spirit
Being Spiritually Minded and Earthly Wise
Biblical Attitude Towards Work
Breaking Personal and Generational Bondages
Change
Code of Honor
Divine Favor
Divine Order in the Citywide Church
Don’t Compromise Your Calling
Don’t Lose Hope
Equipping the Saints
Foundations (Track 1)
Fulfilling God’s Purpose for Your Life
Gifts of the Holy Spirit
Giving Birth to the Purposes of God
God Is a Good God
God’s Word—The Miracle Seed
How to Help Your Pastor
Integrity
Kingdom Builders
Laying the Axe to the Root
Living Life Without Strife
Marriage and Family
Ministering Healing and Deliverance
Offenses—Don’t Take Them
Open Heavens
Our Redemption
Receiving God’s Guidance
Revivals, Visitations and Moves of God
Shhh! No Gossip!
Speak Your Faith
The Conquest of the Mind
The Father’s Love
The House of God
The Kingdom of God
The Mighty Name of Jesus
The Night Seasons of Life
The Power of Commitment
The Presence of God
The Redemptive Heart of God
The Refiner’s Fire
The Spirit of Wisdom, Revelation and Power
The Wonderful Benefits of Speaking in Tongues
Timeless Principles for the Workplace
Understanding the Prophetic
Water Baptism
We Are Different
Who We Are in Christ
Women in the Workplace
Work Its Original Design

ಹೊಸ ಪುಸ್ತಕಗಳು ನಿಯಮಿತವಾಗಿ ಬಿಡುಗಡೆಗೊಳ್ಳುತ್ತವೆ. ಆಲ್ ಪೀಪಲ್ಸ್ ಸಭೆಯ ಕ್ರಿಸ್ತೀಯ ಉಚಿತ ಪುಸ್ತಕಗಳನ್ನು ಪಿ.ಡಿ.ಎಫ್ ನಲ್ಲಿ, ಆಡಿಯೋ ಮತ್ತು ಇತರ ಸ್ವರೂಪಗಳಲ್ಲಿ ಡೌನ್ಲೋಡ್ ಮಾಡಲು ದಯವಿಟ್ಟು **apcwo.org/books** ನಿಂದ ಸಂಗ್ರಹಿಸಿರಿ.ಇವುಗಳಲ್ಲಿ ಅನೇಕ ಪುಸ್ತಕಗಳು ಇತರ ಭಾಷೆಗಳಲ್ಲೂ ಸಹ ದೊರೆಯುತ್ತವೆ. ಉಚಿತ ಆಡಿಯೋ ಮತ್ತು ವಿಡಿಯೋ ಸಂದೇಶಗಳು, ಪ್ರಸಂಗ ಟಿಪ್ಪಣಿಗಳು ಮತ್ತು ಇತರ ಉಚಿತ ಅಧ್ಯಯನ ಸಂಗ್ರಹಗಳಿಗಾಗಿ ದಯವಿಟ್ಟು **apcwo.org/sermons** ನ್ನು ಸಂಪರ್ಕಿಸಿರಿ.

# ಕ್ರಿಸಾಲಿಸ್ ಕೌನ್ಸೆಲಿಂಗ್(ಸಲಹೆ)

ಕ್ರಿಸಾಲಿಸ್ ಕೌನ್ಸೆಲಿಂಗ್ ಜನರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ಜಯಿಸಿ ಹೊರಬರಲು ಸಹಾಯ ಮಾಡಲು ವೈಯಕ್ತಿಕ ಸಲಹೆಯನ್ನು ನೀಡುತ್ತದೆ. ಕ್ರಿಸಾಲಿಸ್ ಕೌನ್ಸೆಲಿಂಗ್ ತರಬೇತಿ ಪಡೆದ ವೃತ್ತಿಪರ ಮತ್ತು ಅನುಭವಿ ಕ್ರೈಸ್ತೀಯ ಸಲಹೆಗಾರರ ತಂಡವಾಗಿದೆ.

ನಮ್ಮ ಸೇವೆಗಳು ಎಲ್ಲಾ ವಯೋಮಾನದವರಿಗೆ ಮತ್ತು ವಿಶಾಲ ವ್ಯಾಪ್ತಿಯ ಜೀವನದ ಸವಾಲುಗಳ ಕುರಿತು ಸಂಬೋಧಿಸುವುದಾಗಿದೆ.

**ಹದಿಹರೆಯದವರು**
**ವೈಯಕ್ತಿಕ ಹೊಂದಾಣಿಕೆಗಳು**
**ಸಂಬಂಧಿತ ಸವಾಲುಗಳು**
**ಶೈಕ್ಷಣಿಕ ಕಡಿಮೆ ಸಾಧನೆ**
**ಕೆಲಸಕ್ಕೆ ಸಂಬಂಧಿಸಿದ ಸಮಸ್ಯೆಗಳು**
**ಕುಟುಂಬ / ದಂಪತಿಗಳು: ವಿವಾಹಪೂರ್ವ, ವೈವಾಹಿಕ**
**ಪೋಷಕರು / ಮಕ್ಕಳು / ಒಡಹುಟ್ಟಿದವರು / ಗೆಳೆಯರು**
**ವರ್ತನೆಯ ಅಸ್ತವ್ಯಸ್ತತೆಗಳು**
**ವ್ಯಕ್ತಿತ್ವ ಅಸ್ತವ್ಯಸ್ತತೆಗಳು**
**ಮಾನಸಿಕ / ಭಾವನಾತ್ಮಕ ಸಮಸ್ಯೆಗಳು**
**ಒತ್ತಡ / ಆಘಾತ**
**ಮಧುಪಾನ/ ಮಾದಕ ವಸ್ತು ದುರುಪಯೋಗ**
**ಆತ್ಮೀಕ ಸಮಸ್ಯೆಗಳು**
**ಜೀವನ ತರಬೇತಿ**

ಕ್ರಿಸಾಲಿಸ್ ಕೌನ್ಸೆಲಿಂಗ್ ಸೇವೆಗಳು ಕೈಗೆಟುಕುವ ಶುಲ್ಕಗಳು ಮತ್ತು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ.

ನಮ್ಮ ತರಬೇತಿ ಪಡೆದ ಸಲಹೆಗಾರರೊಂದಿಗೆ ನಿಮ್ಮ ನೇಮಕಾತಿಯನ್ನು ನಿಗದಿಪಡಿಸಲು:

**ವೆಬ್ಸೈಟ್: chrysalislife.org**
**ದೂರವಾಣಿ**: +91-80-25452617 ಟೋಲ್-ಫ್ರೀ (ಭಾರತದೊಳಗೆ) 1-800-300-00998
**ಇಮೇಲ್: counselor@chrysalislife.org**

ಕ್ರಿಸಾಲಿಸ್ ಸಲಹಾಸೇವೆಯು ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್‌ನ ಒಂದು ಸೇವೆಯಾಗಿದೆ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು, (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು, (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ ಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆಯುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ ''ಆಲ್ ಪೀಪಲ್ಸ್ ಸಭೆ'' ಬೆಂಗಳೂರು ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು.

**Account Name:** All Peoples Church
**Account Number:** 50200068829058
**IFSC Code:** HDFC0004367
**Bank:** HDFC Bank, 7M/308 80 Ft Road, HRBR Layout, Kalyan Nagar, Bengaluru, 560043, Karnataka

***ದಯವಿಟ್ಟು ಗಮನಿಸಿ:*** *ಆಲ್ ಪೀಪಲ್ಸ್ ಸಭೆಯು ಭಾರತ ದೇಶದಲ್ಲಿ ಬ್ಯಾಂಕ್ ಖಾತೆ ಹೊಂದಿರುವವರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚುವರಿ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿ:* **apcwo.org/give.**


ಹಾಗೆಯೇ ನಿಮಗೆ ಸಾಧ್ಯವಾಗುವಾಗಲೆಲ್ಲಾ ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!
**ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!**

## DOWNLOAD THE FREE APP!

*Search for*
"All Peoples Church Bangalore"
in the App or Google play stores.

Available on the App Store

ANDROID APP ON Google play







*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

## ಆಲ್ ಪೀಪಲ್ಸ್ ಚರ್ಚ್ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

**apcbiblecollege.org**

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC–BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು–ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಏ.ಪಿ.ಸಿ–ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳು ನೀಡುತ್ತೇವೆ.

- ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (C.Th.)
- ಎರಡು ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (D.Th.)
- ಮೂರು ವರ್ಷದ ಬ್ಯಾಚುಲರ್ಸ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ **ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 9 ರಿಂದ ಮದ್ಯಾಹ್ನ 1ರವರೆಗೆ ಜರುಗುತ್ತದೆ.ಭಾರತದ ಕಾಲಾಮಾನ (ಸಂಘಟಿತ ಸಾರ್ವತ್ರಿಕ ಸಮಯ+5:30).** ನಾವು ಇತರೆ ಮೂರು ಕಲಿಕಾ ಐಚ್ಛಿಕ ವಿಷಯಗಳನ್ನು ನೀಡುತ್ತೇವೆ.

- **ಆನ್–ಕ್ಯಾಂಪಸ್:** ಅಧ್ಯಯನ ಆವರಣದಲ್ಲಿ ವೈಯಕ್ತಿಕ ತರಗತಿಗಳಿಗೆ ಹಾಜರಾಗುವುದು.
- **ಆನ್ ಲೈನ್:** ಆನ್ಲೈನ್ ನ ನೇರ ಉಪನ್ಯಾಸಗಳಿಗೆ ಹಾಜರಾಗುವುದು.
- **ಇ–ಕಲಿಕೆ:** ಆನ್ಲೈನ್ ಪೋರ್ಟಲ್ ಆದ **apcbiblecollege.org/elearn** ನ ಮೂಲಕ ಸ್ವಯಂ ಚಾಲಿತವಾಗಿ ಕಲಿಯುವುದು.

ಆನ್ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಮತ್ತು ಕಾಲೇಜು ಪಠ್ಯಕ್ರಮ, ಅರ್ಹತಾ ಮಾನದಂಡ, ಬೋಧನಾ ವೆಚ್ಚಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಯನ್ನು ಡೌನ್ಲೋಡ್ ಮಾಡಲು ದಯವಿಟ್ಟು **apcbiblecollege.org** ಯನ್ನು ಸಂಪರ್ಕಿಸಿರಿ.

ದೇವರ ಹೃದಯವು ಪ್ರಾಕೃತಿಕವಾಗಿ ವಿಮೋಚಕವಾಗಿದೆ. ದೇವರು ಪ್ರಾರಂಭಿಸಿರುವುದನ್ನು ಎಂದಿಗೂ ಬಿಟ್ಟು ಬಿಡುವುದಿಲ್ಲ. ಮೌಲ್ಯವನ್ನು ಲೆಕ್ಕಿಸದೇ ಆತನು ಪ್ರೀತಿಸುತ್ತಾನೆ ಮತ್ತು ಸಂಪೂರ್ಣವಾಗಿ ರಕ್ಷಿಸುತ್ತಾನೆ. ದೇವರು ಯಾವಾಗಲು ವಿಮೋಚಿಸಲು ಮತ್ತು ವಿಷಯಗಳನ್ನು ತನ್ನ ಬಳಿಗೆ ಹಿಂತಿರುಗಿ ತರಲು ಹುಡುಕುತ್ತಾನೆ. ನಾವು ಆತನಂತಿರಲೂ ಕರೆಯಲ್ಪಟ್ಟಿದ್ದೇವೆ ಮತ್ತು ನಮ್ಮ ಜೀವಿತದ ಪರಿಸ್ಥಿತಿಗಳು ಮತ್ತು ನಾವು ಎದುರಿಸುವ ತೊಂದರೆಗಳಿಗೆ ನಮ್ಮ ವಿಧಾನವು ವಿಮೋಚನೆಯಾಗಿರಬೇಕು.

ಈ ಅಧ್ಯಯನದಲ್ಲಿ, ದೇವರ ವಿಮೋಚನೆಯ ಹೃದಯವನ್ನು ಸೆರೆಹಿಡಿಯುವುದು ಮತ್ತು ಅರ್ಥಮಾಡಿಕೊಳ್ಳುವುದು ನಮ್ಮ ಗುರಿಯಾಗಿದೆ. ಆದ್ದರಿಂದ ಆತನ ವಿಮೋಚನ ಕಣ್ಣಿನೊಡನೆ ಜೀವಿತದ ಪರಿಸ್ಥಿತಿಗಳನ್ನು ನೋಡುವುದನ್ನು ಕಲಿಯಬಹುದು ಮತ್ತು ಹಾಗೆಯೇ ನಮ್ಮ ಸ್ವಂತ ಜೀವಿತಗಳಲ್ಲಿ ನಮ್ಮ ಸುತ್ತಮುತ್ತಲಿನವರುಗಳ ಸಂಗತಿಗಳಿಗಾಗಿ ಆತನ ವಿಮೋಚನ ಪ್ರಕ್ರಿಯೆಯಲ್ಲಿ ದೇವರೊಂದಿಗೆ ಜೊತೆ-ಕೆಲಸದವರಾಗಿರುವುದನ್ನು ಕಲಿಯಬೇಕು.

ದೇವರ ವಿಮೋಚನಾ ಪ್ರಕ್ರಿಯೆಯು ಸಮಯ, ತ್ಯಾಗ, ಕ್ಷಮಾಪಣೆ ಮತ್ತು ಪುನಃ ಸ್ಥಾಪನೆಯ ಪ್ರಮುಖ ಅಂಶಗಳನ್ನು ಒಳಗೊಂಡಿವೆ. ಈ ವಿಮೋಚನಾ ಪ್ರಕ್ರಿಯೆಯಲ್ಲಿ ದೇವರೊಡನೆ ಜೊತೆ-ಕೆಲಸದವರಾಗಿರಲೂ ನಾವು ಇಲ್ಲಿದ್ದೇವೆ. ನಾವು ದೇವರೊಂದಿಗೆ ಕಾರ್ಯ ಮಾಡಬೇಕು, ಆತನ ವಿಮೋಚನೆಯ ಪ್ರತಿ ಅಂಶಗಳನ್ನು ನಮ್ಮ ಜೀವಿತದಲ್ಲಿ ವಿಷಯಗಳನ್ನು ವಿಮೋಚಿಸಲು ಆತನು ಕಾರ್ಯಮಾಡುವಂತೆ ಹಾಗೆಯೇ ಇತರೆ ಜನರ ಜೀವಿತದಲ್ಲಿ ಆತನ ವಿಮೋಚನೆಯ ಕಾರ್ಯ ಜರುಗುವುದನ್ನು ನೋಡಲು ಆತನೊಡನೆ ಜೊತೆ-ಕೆಲಸದವರಾಗಿರುವಂತೆ ಹಿಂಬಾಲಿಸಬೇಕು ಮತ್ತು ಗುರ್ತಿಸಬೇಕು.

ನಿಮ್ಮ ಜೀವಿತದಲ್ಲಿ ದೇವರು ವಿಮೋಚಿಸಲು ನೀವು ಅಪೇಕ್ಷಿಸುವಂತದ್ದು ಏನು? ದೇವರು ನಿಮ್ಮ ವಿಮೋಚಕನಾಗಿದ್ದಾನೆ. ಆತನ ವಿಮೋಚಿಸುವ ಸಾಮರ್ಥ್ಯಕ್ಕಿಂತ ಮಿಗಿಲಾದದು ಯಾವುದು ಇಲ್ಲಾ. ನಿಮ್ಮ ಪರಿಸ್ಥಿತಿಗಳು ಏನಾಗಿವೆ ಎಂಬುದನ್ನು ಪರಿಗಣಿಸದೇ ನಂಬಿಕೆಯಲ್ಲಿ ನೀವು ಆತನನ್ನು ನೋಡುತ್ತೀರಿ? ಮತ್ತು ಆತನ ವಿಮೋಚನಾ ಕಾರ್ಯವನ್ನು ಅನುಭವಿಸಿರಿ. ಈ ಪುಸ್ತಕವು ಇದನ್ನು ಮಾಡಲು ಸಹಾಯ ಮಾಡುತ್ತದೆ.

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org